सत्यमेव जयते

## ನಗರಸಭೆ/ಪುರಸಭೆ/ಪಟ್ಟಣ ಪಂಚಾಯತಿಗಳ ಚುನಾವಣೆಗಾಗಿ

# ಪೋಲಿಂಗ್ ಏಜೆಂಟರುಗಳ ಕೈಪಿಡಿ

## (ವಿದ್ಯುನ್ಮಾನ ಮತಯಂತ್ರಗಳನ್ನು ಉಪಯೋಗಿಸುವ ಚುನಾವಣೆಗಳು)

**ರಾಜ್ಯ ಚುನಾವಣಾ ಆಯೋಗ, ಕರ್ನಾಟಕ**

**2018**

## ನಗರಸಭೆ/ಪುರಸಭೆ/ಪಟ್ಟಣ ಪಂಚಾಯತಿಗಳ ಚುನಾವಣೆಗಾಗಿ

# ಪೋಲಿಂಗ್ ಏಜೆಂಟರುಗಳ ಕೈಪಿಡಿ

## (ವಿದ್ಯುನ್ಮಾನ ಮತಯಂತ್ರಗಳನ್ನು ಉಪಯೋಗಿಸುವ ಚುನಾವಣೆಗಳು)

**ರಾಜ್ಯ ಚುನಾವಣಾ ಆಯೋಗ, ಕರ್ನಾಟಕ**

**2018**

# ಪೋಲಿಂಗ್ ಏಜೆಂಟರುಗಳ ಕೈಪಿಡಿ

## ವಿಷಯಸೂಚಿ

ಪುಟಸಂಖ್ಯೆ


| | | |
|---|---|---|
| 1. | ಪೀಠಿಕೆ | 1 |
| 2. | ಪೋಲಿಂಗ್ ಏಜೆಂಟರ ಪಾತ್ರ | 1 |
| 3. | ಚುನಾವಣೆಯಲ್ಲಿ ವಿದ್ಯುನ್ಮಾನ ಮತ ಯಂತ್ರಗಳನ್ನು ಬಳಕೆಗೆ ತರುವುದು | 1 |
| 4. | ವಿದ್ಯುನ್ಮಾನ ಮತಯಂತ್ರದ ಬಗ್ಗೆ ಸಂಕ್ಷಿಪ್ತ ಪರಿಚಯ ಹಾಗೂ NOTA | 2 |
| 5. | ಪೋಲಿಂಗ್ ಏಜೆಂಟರ ಮುಖ್ಯ ಕರ್ತವ್ಯಗಳು | 5 |
| 6. | ಅಭ್ಯರ್ಥಿಯು ತನ್ನ ಪರವಾಗಿ ನೇಮಿಸಬಹುದಾದ ಪೋಲಿಂಗ್ ಏಜೆಂಟರ ಸಂಖ್ಯೆ | 5 |
| 7. | ಪೋಲಿಂಗ್ ಏಜೆಂಟರ ನೇಮಕಾತಿ | 5 |
| 8. | ಪೋಲಿಂಗ್ ಏಜೆಂಟರ ನೇಮಕಾತಿಯ ರದ್ದತಿ | 7 |
| 9. | ಪೋಲಿಂಗ್ ಏಜೆಂಟನಾಗಿ ನೇಮಕವಾಗಲು ಇರಬೇಕಾದ ಅರ್ಹತೆಗಳು | 7 |
| 10. | ಮತದಾನ ಪ್ರಕ್ರಿಯೆಗಳ ಬಗ್ಗೆ ಪೂರ್ವಾಭ್ಯಾಸ | 8 |
| 11. | ಮತಗಟ್ಟೆಯನ್ನು ತಲುಪುವುದು | 8 |
| 12. | ಪೋಲಿಂಗ್ ಏಜೆಂಟರಿಗೆ ಬೇಕಾಗುವ ಸಾಮಗ್ರಿಗಳು | 8 |
| 13. | ಮತಗಟ್ಟೆಯ ಸಮೀಪ ವೀಡಿಯೋ ಚಿತ್ರೀಕರಣ ಮಾಡುವುದು | 9 |
| 14. | ಸೂಕ್ಷ್ಮ– ಪರಿವೀಕ್ಷಕರ ನೇಮಕ | 10 |
| 15. | ಪೋಲಿಂಗ್ ಏಜೆಂಟರುಗಳು ನೇಮಕಾತಿ ಪತ್ರವನ್ನು ಹಾಜರುಪಡಿಸುವುದು | 10 |
| 16. | ಪೋಲಿಂಗ್ ಏಜೆಂಟರಿಗೆ ಪಾಸುಗಳು | 10 |
| 17. | ಪೋಲಿಂಗ್ ಏಜೆಂಟರುಗಳಿಗೆ ಬ್ಯಾಡ್ಜ್‌ಗಳು | 10 |
| 18. | ಪೋಲಿಂಗ್ ಏಜೆಂಟರಿಗೆ ಕೂರುವ ವ್ಯವಸ್ಥೆ | 11 |
| 19. | ಮತದಾನ ಪ್ರಾರಂಭವಾಗುವ ಮೊದಲು ಮಾಡಬೇಕಾದ ಪೂರ್ವ ಸಿದ್ಧತೆಗಳು | 11 |
| 20. | ಮತದಾನ ಪ್ರಾರಂಭಿಸುವುದಕ್ಕೆ ಮೊದಲು ಪ್ರಿಸೈಡಿಂಗ್ ಆಫೀಸರ್‌ರವರು ವಿದ್ಯುನ್ಮಾನ ಮತಯಂತ್ರವನ್ನು ಸಿದ್ಧಪಡಿಸುವುದು | 13 |

| | | |
|---|---|---|
| 21. | ಬ್ಯಾಲೆಟಿಂಗ್ ಯೂನಿಟ್‌ನ ಸಿದ್ಧತೆಗಳು | 13 |
| 22. | ಕಂಟ್ರೋಲ್ ಯೂನಿಟ್‌ನ ಸಿದ್ಧತೆಗಳು | 13 |
| 23. | ಅಣಕು ಮತದಾನ ನಡೆಸುವುದು | 14 |
| 24. | ಕಂಟ್ರೋಲ್ ಯೂನಿಟ್‌ನಲ್ಲಿ ಗ್ರೀನ್ ಪೇಪರ್ ಸೀಲನ್ನು ಅಳವಡಿಸುವುದು. | 19 |
| 25. | ವಿಶೇಷ ಟ್ಯಾಗ್ | 21 |
| 26. | ಸ್ಟ್ರಿಪ್ ಸೀಲ್ | 23 |
| 27. | ಸ್ಟ್ರಿಪ್ ಸೀಲ್‌ನಿಂದ ಬಿಇಎಲ್ ತಯಾರಿಸಿರುವ ಯಂತ್ರಗಳನ್ನು ಮೊಹರು ಮಾಡುವ ವಿಧಾನ | 25 |
| 28. | ಮತಯಂತ್ರವು ವಾಸ್ತವಿಕ ಮತದಾನಕ್ಕೆ ಸಿದ್ಧವಾಗಿದೆ | 28 |
| 29. | ಪೇಪರ್ ಸೀಲ್‌ಗಳ ಲೆಕ್ಕ | 28 |
| 30. | ಮತದಾನದ ಗೌಪ್ಯತೆಯನ್ನು ಕಾಪಾಡುವುದು | 28 |
| 31. | ಮತದಾನ ಪ್ರಾರಂಭವಾಗುವುದಕ್ಕಿಂತ ಮುಂಚೆ ಪ್ರಿಸೈಡಿಂಗ್ ಅಧಿಕಾರಿಯಿಂದ ಘೋಷಣೆ | 29 |
| 32. | ಮತದಾನದ ಪ್ರಾರಂಭ | 29 |
| 33. | ಮತಗಟ್ಟೆಯಲ್ಲಿ ಮತದಾರರ ಪ್ರವೇಶ | 29 |
| 34. | ಮತದಾರರನ್ನು ಗುರುತಿಸುವುದು ಹಾಗೂ ಅಳಿಸಲಾಗದ ಶಾಯಿಯನ್ನು ಹಚ್ಚುವುದು | 30 |
| 35. | ಮತಯಂತ್ರಗಳಿಂದ ಮತಗಳನ್ನು ದಾಖಲು ಮಾಡುವ ವಿಧಾನ | 31 |
| 36. | ಮತಗಟ್ಟೆಯಲ್ಲಿ ಮತದಾನದ ಪ್ರಕ್ರಿಯೆ | 32 |
| 37. | ಮತದಾರರ ಗುರುತನ್ನು ಪ್ರಶ್ನಿಸುವುದು | 33 |
| 38. | ಮೃತರಾದ, ಗೈರುಹಾಜರಾದ ಮತ್ತು ಅನುಮಾನಾಸ್ಪದರೆಂದು ಆಪಾದಿಸಲಾದ ಮತದಾರರ ಪಟ್ಟಿ. | 35 |
| 39. | ಮತದಾರರ ಗುರುತಿನ ಬಗ್ಗೆ ಔಪಚಾರಿಕವಾಗಿ ಪ್ರಶ್ನಿಸುವುದು. | 35 |
| 40. | ಚಾಲೆಂಜ್ ಫೀಜು (ಪ್ರಶ್ನಿಸಲು ಶುಲ್ಕ) | 35 |
| 41. | ಪ್ರಶ್ನಿಸುವ ಬಗ್ಗೆ ಸಂಕ್ಷಿಪ್ತ ವಿಚಾರಣೆ | 35 |

| | | |
|---|---|---|
| 42. | ಪ್ರಶ್ನಿಸಲು ನೀಡುವ ಶುಲ್ಕ (ಚಾಲೆಂಜ್ ಫೀಜು)ವನ್ನು ವಾಪಸ್ಸು ಮಾಡುವುದು ಅಥವಾ ಮುಟ್ಟುಗೋಲು ಹಾಕಿಕೊಳ್ಳುವುದು | 36 |
| 43. | ಮತದಾರರ ಪಟ್ಟಿಯಲ್ಲಿ ಲಿಪಿಕ ಹಾಗೂ ಮುದ್ರಣ ದೋಷಗಳಿಗೆ ಪ್ರಾಮುಖ್ಯತೆ ಕೊಡಬಾರದು. | 37 |
| 44. | ಮತದಾರನ ಅರ್ಹತೆಯನ್ನು ಪ್ರಶ್ನಿಸತಕ್ಕದ್ದಲ್ಲ | 37 |
| 45. | ಕಡಿಮೆ ವಯಸ್ಸಿನ ಮತದಾರರಿಂದ ಮತ ಚಲಾಯಿಸುವುದನ್ನು ತಡೆಗಟ್ಟುವ ಬಗ್ಗೆ ಮುನ್ನೆಚ್ಚರಿಕೆ | 37 |
| 46. | ಅಂಧ ಅಥವಾ ದುರ್ಬಲ ಮತದಾರರಿಂದ ಮತದಾನ | 38 |
| 47. | ಟೆಂಡರ್ಡ್ ಮತಗಳು | 38 |
| 48. | ಮತದಾರರು ಮತ ಚಲಾಯಿಸದಿರಲು ನಿರ್ಧರಿಸುವುದು | 39 |
| 49. | ಮತದಾನ ರಹಸ್ಯದ ಉಲ್ಲಂಘನೆ | 39 |
| 50. | ಮತದಾನ ನಡೆಯುತ್ತಿರುವ ಸಂದರ್ಭದಲ್ಲಿ ಪ್ರಿಸೈಡಿಂಗ್ ಅಧಿಕಾರಿಯು ವೋಟಿಂಗ್ ಕಂಪಾರ್ಟ್‌ಮೆಂಟಿಗೆ ಹೋಗುವುದು | 40 |
| 51. | ಮತದಾನ ಮುಕ್ತಾಯದ ಸಮಯಕ್ಕೆ ಹಾಜರಿರುವ ವ್ಯಕ್ತಿಗಳಿಂದ ಮತ ಚಲಾವಣೆ | 40 |
| 52. | ಮತದಾನದ ಮುಕ್ತಾಯ | 40 |
| 53. | ಪ್ರಿಸೈಡಿಂಗ್ ಅಧಿಕಾರಿಯು ದಾಖಲಿಸಿದ ಮತಗಳ ಲೆಕ್ಕದ (ಫಾರಂ 17A (EVM)) ಪ್ರತಿಯನ್ನು ಒದಗಿಸುವುದು | 41 |
| 54. | ಮತದಾನ ಮುಕ್ತಾಯವಾದ ತರುವಾಯ ಮತಯಂತ್ರವನ್ನು ಸೀಲು ಮಾಡುವುದು | 41 |
| 55. | ಚುನಾವಣಾ ಕಾಗದಪತ್ರಗಳನ್ನು ಮೊಹರು ಮಾಡುವುದು– ಪೋಲಿಂಗ್ ಏಜೆಂಟರು ಅವುಗಳಿಗೆ ತಮ್ಮ ಮೊಹರುಗಳನ್ನು ಹಾಕುವುದು. | 42 |
| 56. | ಸಂಗ್ರಹಣೆ ಮತ್ತು ದಾಸ್ತಾನು ಕೇಂದ್ರಕ್ಕೆ ಮತಯಂತ್ರ ಮತ್ತು ಚುನಾವಣಾ ಕಾಗದಗಳನ್ನು ಸಾಗಿಸುವುದು | 42 |
| 57. | ಮತಯಂತ್ರಗಳನ್ನು ಕೊಂಡೊಯ್ಯುವ ವಾಹನಗಳ ಜೊತೆಯಲ್ಲಿ ಹೋಗುವುದು | 43 |
| 58. | ದೊಂಬಿ, ಮತಗಟ್ಟೆಯನ್ನು ಬಲವಂತವಾಗಿ ವಶಪಡಿಸಿಕೊಳ್ಳುವುದು, ಇತ್ಯಾದಿಗಳಿಗಾಗಿ ಮತದಾನದ ಮುಂದೂಡಿಕೆ | 43 |
| 59. | ಮತಗಟ್ಟೆಯ ಒಳಗಡೆ ಅಥವಾ ಅದರ ಸಮೀಪದಲ್ಲಿ ಅಶಿಸ್ತಿನ ನಡತೆ | 43 |

| | | |
|---|---|---|
| 60. | ಮತಗಟ್ಟೆಗಳಿಂದ ಮತಯಂತ್ರವನ್ನು ತೆಗೆದುಕೊಂಡು ಹೋಗುವುದು ಅಥವಾ ಅದನ್ನು ಹಾಳು ಮಾಡುವುದು ಅಪರಾಧ | 44 |
| 61. | ಪ್ರಚಾರ ಮಾಡುವುದಕ್ಕೆ ನಿಷೇಧ | 44 |
| 62. | ಅನುಬಂಧ– I ಪೋಲಿಂಗ್ ಏಜೆಂಟರ ನೇಮಕಾತಿ | 45 |
| 63. | ಅನುಬಂಧ– I (ಎ) ಅಭ್ಯರ್ಥಿಯ ಮತ್ತು ಅವರ ಚುನಾವಣಾ ಏಜೆಂಟರ ಮಾದರಿ ಸಹಿಗಳ ಸಂಬಂಧದ ನಮೂನೆ | 47 |
| 64. | ಅನುಬಂಧ– II ಪೋಲಿಂಗ್ ಏಜೆಂಟರ ನೇಮಕವನ್ನು ರದ್ದುಮಾಡುವುದು. | 48 |
| 65. | ಅನುಬಂಧ– III (ಭಾಗ– I) ಪ್ರಿಸೈಡಿಂಗ್ ಆಫೀಸರ್‌ರವರಿಂದ ಘೋಷಣೆ | 49 |
| 66. | ಅನುಬಂಧ– III (ಭಾಗ– II) ಹೆಚ್ಚಿನ ಮತಯಂತ್ರವನ್ನೇನಾದರೂ ಉಪಯೋಗಿಸುವ ಸಮಯದಲ್ಲಿ ಪ್ರಿಸೈಡಿಂಗ್ ಆಫೀಸರ್ ಮಾಡಬೇಕಾದ ಘೋಷಣೆ, ಯಾವುದಾದರೂ ಇದ್ದರೆ | 51 |
| 67. | ಅನುಬಂಧ– III (ಭಾಗ– III) ಮತದಾನದ ಕೊನೆಯಲ್ಲಿ ಮಾಡುವ ಘೋಷಣೆ | 53 |
| 68. | ಅನುಬಂಧ– III (ಭಾಗ–IV) ಮತಯಂತ್ರವನ್ನು ಸೀಲು ಮಾಡಿದ ತರುವಾಯ ಘೋಷಣೆ | 54 |
| 69. | ಅನುಬಂಧ– IV ಚಾಲೆಂಜ್ ಮಾಡಿದ (ಆಕ್ಷೇಪಿಸಿದ) ಮತಗಳ ಪಟ್ಟಿ | 55 |
| 70. | ಅನುಬಂಧ– V ಮತದಾರನಿಂದ ಘೋಷಣೆ– ನಮೂನೆ | 56 |
| 71. | ಅನುಬಂಧ– VI ಅಂಧ ಅಥವಾ ದುರ್ಬಲ ಮತದಾರನ ಸಂಗಡಿಗನ ಘೋಷಣೆ | 57 |
| 72. | ಅನುಬಂಧ– VII (ಭಾಗ–I) ದಾಖಲಿಸಿದ ಮತಗಳ ಲೆಕ್ಕ | 58 |
| 73. | ಅನುಬಂಧ– VII (ಭಾಗ– II) ಎಣಿಕೆಯ ಫಲಿತಾಂಶ | 60 |
| 74. | ಅನುಬಂಧ– VIII ಅಣಕು ಮತದಾನ ಪ್ರಮಾಣ ಪತ್ರ | 61 |

# ಪೋಲಿಂಗ್ ಏಜೆಂಟರುಗಳ ಕೈಪಿಡಿ

## (ವಿದ್ಯುನ್ಮಾನ ಮತಯಂತ್ರಗಳನ್ನು ಉಪಯೋಗಿಸುವ ಮತಗಟ್ಟೆಗಳಿಗೆ)

## 1. ಪೀಠಿಕೆ:

ಮತದಾನದ ದಿನದಂದು ಉಮೇದುವಾರನೇ ವೈಯಕ್ತಿಕವಾಗಿ ಪ್ರತಿಯೊಂದು ಮತಗಟ್ಟೆಯಲ್ಲಿ ಹಾಜರಿರಲು ಸಾಧ್ಯವಿಲ್ಲ. ಆದ್ದರಿಂದ ಪ್ರತಿಯೊಂದು ಮತಗಟ್ಟೆಯಲ್ಲಿಯೂ ಆತನ ಹಿತಾಸಕ್ತಿಗಳನ್ನು ಗಮನಿಸಲು, ಆತನ ಪ್ರತಿನಿಧಿಯಾಗಿ ಕಾರ್ಯನಿರ್ವಹಿಸಲು ಪೋಲಿಂಗ್ ಏಜೆಂಟರುಗಳನ್ನು ನೇಮಿಸಲು, ಕಾನೂನು ಉಮೇದುವಾರನಿಗೆ ಅವಕಾಶ ನೀಡಿದೆ. ಪ್ರಜಾಪ್ರಭುತ್ವದಲ್ಲಿ ಚುನಾವಣೆಯ ಮೂಲ ತತ್ವವು ಪ್ರತಿ ಮತಗಟ್ಟೆಯಲ್ಲಿ ಮುಕ್ತವಾಗಿ ಹಾಗೂ ನ್ಯಾಯೋಚಿತ ರೀತಿಯಲ್ಲಿ ಮತದಾನ ನಡೆಯಬೇಕೆಂದು ಮತ್ತು ಆ ಬಗ್ಗೆ ಪ್ರತಿ ಉಮೇದುವಾರನೂ ತೃಪ್ತನಾಗಿರಬೇಕೆಂಬುದೇ ಆಗಿದೆ. ಮತಗಟ್ಟೆಗಳಲ್ಲಿ ಉಮೇದುವಾರನ ಪ್ರತಿನಿಧಿಯಾಗಿರುವ ಪೋಲಿಂಗ್ ಏಜೆಂಟರುಗಳು ತಮ್ಮ ಕರ್ತವ್ಯವನ್ನು ಚೆನ್ನಾಗಿ ಹಾಗೂ ಮನ:ಪೂರ್ವಕವಾಗಿ ನಿರ್ವಹಿಸಿದಲ್ಲಿ ಅವರು ಪ್ರತಿನಿಧಿಸುವ ಉಮೇದುವಾರರಿಗೆ ಸಹಾಯವಾಗುವುದೇ ಅಲ್ಲದೆ ಆ ಏಜೆಂಟರುಗಳ ಪೂರ್ಣ ಸಹಾಯ ದೊರೆತಲ್ಲಿ ಮತದಾನವು ಸುಗಮವಾಗಿ ನಡೆಸಲು ಚುನಾವಣಾ ಅಧಿಕಾರಿಗಳಿಗೂ ಸಹಾಯ ಮಾಡಿದಂತಾಗುತ್ತದೆ.

## 2. ಪೋಲಿಂಗ್ ಏಜೆಂಟರ ಪಾತ್ರ.

2.1 ಇಡೀ ಚುನಾವಣಾ ಪ್ರಕ್ರಿಯೆಯಲ್ಲಿ ವಾಸ್ತವಿಕ ಮತದಾನದ ಅವಧಿಯು ಬಹಳ ಪ್ರಮುಖ ಭಾಗವಾಗಿದ್ದು, ಪೋಲಿಂಗ್ ಏಜೆಂಟರುಗಳು ಬಹಳ ಪ್ರಮುಖ ಪಾತ್ರ ವಹಿಸುತ್ತಾರೆ. ಪೋಲಿಂಗ್ ಏಜೆಂಟರುಗಳು, ತಮ್ಮದೇ ಆದ ಕ್ಷೇತ್ರ ವ್ಯಾಪ್ತಿಯಲ್ಲಿ ತಮ್ಮ ಕರ್ತವ್ಯಗಳನ್ನು ಸಹಕಾರ ಮನೋಭಾವದಿಂದ ನಿರ್ವಹಿಸಿದರೆ ಮತಗಟ್ಟೆಯ ಪ್ರಿಸೈಡಿಂಗ್ ಆಫೀಸರ್ ಹಾಗೂ ಪೋಲಿಂಗ್ ಆಫೀಸರ್‌ಗಳ ಕೆಲಸವು ಬಹಳ ಸುಗಮವಾಗುತ್ತದೆ. ಈ ಉದ್ದೇಶಕ್ಕಾಗಿ ಅವರು ತಮ್ಮ ಕರ್ತವ್ಯಗಳನ್ನು ಸ್ಪಷ್ಟವಾಗಿ ತಿಳಿದುಕೊಂಡಿರಬೇಕು ಮತ್ತು ಕಾನೂನಿನ ವ್ಯಾಪ್ತಿಯಲ್ಲಿ ಬುದ್ಧಿವಂತಿಕೆಯಿಂದ ಅವುಗಳನ್ನು ನಿರ್ವಹಿಸಬೇಕು.

2.2 ವಿದ್ಯುನ್ಮಾನ ಮತಯಂತ್ರಗಳನ್ನು ಉಪಯೋಗಿಸುತ್ತಿರುವ ಮತಗಟ್ಟೆಯಲ್ಲಿ ನೀವು ಪೋಲಿಂಗ್ ಏಜೆಂಟನಾಗಿ ಹೋಗುತ್ತಿದ್ದೀರಿ. ಆದ್ದರಿಂದ, ವಿದ್ಯುನ್ಮಾನ ಮತಯಂತ್ರದ ಮೂಲಕ ಚುನಾವಣೆಯನ್ನು ನಡೆಸುವುದಕ್ಕೆ ನಿಯಮಿಸಲಾದ ನಿಯಮಗಳು ಮತ್ತು ಕಾರ್ಯವಿಧಾನಗಳ ಇತ್ತೀಚಿನ ಪರಿಸ್ಥಿತಿ ಬಗ್ಗೆ ಪೂರ್ಣ ಪರಿಚಯವನ್ನು ನೀವು ಮಾಡಿಕೊಳ್ಳಬೇಕು. ಈ ಉದ್ದೇಶಕ್ಕಾಗಿ ರಿಟರ್ನಿಂಗ್ ಆಫೀಸರ್ ಅವರು ವ್ಯವಸ್ಥೆ ಮಾಡಿದ ವಿದ್ಯುನ್ಮಾನ ಮತಯಂತ್ರಗಳ ಪ್ರಾತ್ಯಕ್ಷಿಕೆಗೆ ನೀವು ಹಾಜರಾಗಬೇಕು. ಅಲ್ಲಿ ವಿದ್ಯುನ್ಮಾನ ಮತಯಂತ್ರವನ್ನು ಪ್ರದರ್ಶಿಸಲಾಗುತ್ತದೆ ಹಾಗೂ ಅದರ ಕೆಲಸ ಕಾರ್ಯ ಮತ್ತು ಅದನ್ನು ಚಾಲೂ ಮಾಡಬೇಕಾದ ರೀತಿಯನ್ನು ಪ್ರಾತ್ಯಕ್ಷಿಕೆ ಮೂಲಕ ತೋರಿಸಿ ವಿವರಿಸಲಾಗುವುದು.

## 3. ಚುನಾವಣೆಯಲ್ಲಿ ವಿದ್ಯುನ್ಮಾನ ಮತ ಯಂತ್ರಗಳನ್ನು ಬಳಕೆಗೆ ತರುವುದು.

ಭಾರತ ಚುನಾವಣಾ ಆಯೋಗವು ಲೋಕ ಸಭೆ ಹಾಗೂ ವಿಧಾನ ಸಭೆ ಚುನಾವಣೆಗಳನ್ನು ವಿದ್ಯುನ್ಮಾನ ಮತಯಂತ್ರಗಳನ್ನು ಬಳಸಿ ಯಶಸ್ವಿಯಾಗಿ ನಿರ್ವಹಿಸಿರುವುದರಿಂದ ರಾಜ್ಯ ಚುನಾವಣಾ ಆಯೋಗವು ಅಧಿಸೂಚನೆ ಸಂ: UDD 126 MLR 2009, ಬೆಂಗಳೂರು ದಿನಾಂಕ:26-05-2011ರ ಮೇರೆಗೆ ಚುನಾವಣೆಗಳಲ್ಲಿ ವಿದ್ಯುನ್ಮಾನ ಮತಯಂತ್ರಗಳನ್ನು ಬಳಸುತ್ತಿದೆ. ರಾಜ್ಯ ಚುನಾವಣಾ ಆಯೋಗವು ಕರ್ನಾಟಕ ಮುನಿಸಿಪಾಲಿಟಿಗಳ (ಚುನಾವಣೆಗಳ) ನಿಯಮಗಳು, 1977ರ ಅನ್ವಯ ಮುನಿಸಿಪಾಲಿಟಿಗಳ ಚುನಾವಣೆಗಳಲ್ಲಿ ವಿದ್ಯುನ್ಮಾನ ಮತಯಂತ್ರಗಳ ಬಳಕೆಯನ್ನು ಜಾರಿಗೆ ತಂದಿದೆ. ಈ

ವಿದ್ಯುನ್ಮಾನ ಮತಯಂತ್ರಗಳನ್ನು ಕೇಂದ್ರ ಸರ್ಕಾರದ ಅಡಿಯಲ್ಲಿ ಬರುವ ಎರಡು ಕಂಪೆನಿಗಳು ಉತ್ಪಾದಿಸುತ್ತವೆ, ಅವುಗಳೆಂದರೆ– ಎಲೆಕ್ಟ್ರಾನಿಕ್ಸ್ ಕಾರ್ಪೋರೇಷನ್ ಆಫ್ ಇಂಡಿಯ ಲಿಮಿಟೆಡ್, ಹೈದರಾಬಾದ್ (Electronics Corporation of India Limited, Hyderabad) ಹಾಗೂ ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್, ಬೆಂಗಳೂರು (Bharat Electronics Limited, Bangalore). ವಿದ್ಯುನ್ಮಾನ ಮತಯಂತ್ರಗಳನ್ನು ಮತಪತ್ರ ಮತ್ತು ಮತ ಪೆಟ್ಟಿಗೆಗಳನ್ನುಪಯೋಗಿಸಿ ನಡೆಸಲಾಗುತ್ತಿದ್ದ ಸಾಂಪ್ರದಾಯಿಕ ಪದ್ಧತಿಯ ಎಲ್ಲಾ ವೈಶಿಷ್ಟ್ಯಗಳನ್ನು ಒಳಗೊಂಡಿರುವ ಮಾದರಿಯಲ್ಲಿ ರೂಪಿಸಲಾಗಿದೆ.

## 4. ವಿದ್ಯುನ್ಮಾನ ಮತಯಂತ್ರದ ಬಗ್ಗೆ ಸಂಕ್ಷಿಪ್ತ ಪರಿಚಯ ಹಾಗೂ NOTA

4.1 ಒಂದು ವಿದ್ಯುನ್ಮಾನ ಮತಯಂತ್ರವು ಎರಡು ಯೂನಿಟ್ಟುಗಳನ್ನು ಒಳಗೊಂಡಿರುತ್ತದೆ, ಅವುಗಳೆಂದರೆ– ಕಂಟ್ರೋಲ್ ಯೂನಿಟ್ ಮತ್ತು ಬ್ಯಾಲೆಟ್ ಯೂನಿಟ್. ಈ ಎರಡೂ ಯೂನಿಟ್ಟುಗಳನ್ನು ಕೇಬಲ್ಲಿನ ಮುಖಾಂತರ ಆಂತರಿಕ ಸಂಪರ್ಕ ಕಲ್ಪಿಸಿ ಕಾರ್ಯಾಚರಣೆಗೆ ತರಬಹುದಾಗಿರುತ್ತದೆ. ಈ ಕೇಬಲ್ಲಿನ ಒಂದು ತುದಿಯು ಬ್ಯಾಲೆಟ್ ಯೂನಿಟ್ಟಿಗೆ ಖಾಯಮ್ಮಾಗಿ ಜೋಡಿಸಲ್ಪಟ್ಟಿರುತ್ತದೆ. ಯಂತ್ರವನ್ನು ಮತಗಳನ್ನು ದಾಖಲು ಮಾಡಲು ಕಾರ್ಯಗತಗೊಳಿಸಿದಾಗ ಈ ಕೇಬಲ್ಲಿನ ಇನ್ನೊಂದು ತುದಿಯನ್ನು ಕಂಟ್ರೋಲ್ ಯೂನಿಟ್ಟಿಗೆ ಜೋಡಿಸಲಾಗಿರುತ್ತದೆ.



**ಕಂಟ್ರೋಲ್ ಯೂನಿಟ್**



**ಬ್ಯಾಲೆಟ್ ಯೂನಿಟ್**

4.2 ಒಂದು ಬ್ಯಾಲೆಟ್ ಯೂನಿಟ್‌ನಲ್ಲಿ ಗರಿಷ್ಠ ಹದಿನಾರು ಅಭ್ಯರ್ಥಿಗಳನ್ನು ನಮೂದಿಸಬಹುದಾಗಿರುತ್ತದೆ. ಬ್ಯಾಲೆಟ್ ಯೂನಿಟ್‌ನಲ್ಲಿ ಚುನಾವಣೆಯ ವಿವರಗಳನ್ನು– ಕ್ರಮ ಸಂಖ್ಯೆ ಮತ್ತು ಅಭ್ಯರ್ಥಿಯ ಹೆಸರು ಮತ್ತು ಅವರಿಗೆ ನೀಡಲಾದ ಚಿನ್ಹೆಗಳನ್ನು ಒಳಗೊಂಡ ಮತಪತ್ರ (Ballot Paper)ವನ್ನು ಪ್ರದರ್ಶಿಸಲು ಅವಕಾಶವಿರುತ್ತದೆ. ಪ್ರತಿಯೊಬ್ಬ ಅಭ್ಯರ್ಥಿಯ ಹೆಸರಿನ ಮುಂದೆ ಒಂದು ನೀಲಿ ಬಣ್ಣದ ಗುಂಡಿ (Button) ಇದ್ದು, ಇದನ್ನು ಒತ್ತುವುದರಿಂದ ಆ ವ್ಯಕ್ತಿಗೆ ಮತವನ್ನು ನೀಡಬಹುದಾಗಿರುತ್ತದೆ. ಆ ಗುಂಡಿಯ ಪಕ್ಕದಲ್ಲಿ ಪ್ರತಿಯೊಬ್ಬ ಅಭ್ಯರ್ಥಿಗೂ ಒಂದು ದೀಪವಿದ್ದು, ಒಬ್ಬ ಅಭ್ಯರ್ಥಿಯ ಹೆಸರಿನ ಮುಂದಿನ ನೀಲಿ ಗುಂಡಿಯನ್ನು ಒತ್ತಿದಾಗ ಆ ದೀಪವು ಕೆಂಪಾಗಿ ಬೆಳಗುತ್ತದೆ.

4.3 ಒಂದು ಕಂಟ್ರೋಲ್ ಯೂನಿಟ್ಟಿಗೆ ಒಟ್ಟು ಅರವತ್ತನಾಲ್ಕು ಅಭ್ಯರ್ಥಿಗಳನ್ನು ಒಳಗೊಂಡ ನಾಲ್ಕು ಬ್ಯಾಲೆಟ್ ಯೂನಿಟ್‌ಗಳನ್ನು ಜೋಡಿಸಬಹುದಾಗಿರುತ್ತದೆ. ಕಂಟ್ರೋಲ್ ಯೂನಿಟ್‌ನ ಮೇಲ್ಭಾಗದಲ್ಲಿ ಯಂತ್ರವು ಹೊಂದಿರುವ ಮಾಹಿತಿ ಹಾಗೂ ದತ್ತಾಂಶಗಳನ್ನು, ಅಂದರೆ– ಅಭ್ಯರ್ಥಿಗಳ ಸಂಖ್ಯೆ, ಚಲಾಯಿಸಲಾದ ಒಟ್ಟು ಮತಗಳ ಸಂಖ್ಯೆ, ಪ್ರತಿಯೊಬ್ಬ ಅಭ್ಯರ್ಥಿಗೂ ನೀಡಲ್ಪಟ್ಟ ಮತಗಳ ಸಂಖ್ಯೆ, ಮುಂತಾದವುಗಳನ್ನು ಪ್ರದರ್ಶಿಸುವ ಅವಕಾಶವನ್ನು ಹೊಂದಿರುತ್ತದೆ. ಈ ಭಾಗವನ್ನು ಕಂಟ್ರೋಲ್ ಯೂನಿಟ್‌ನ ಡಿಸ್‌ಪ್ಲೇ ಸೆಕ್ಷನ್ (Display Section) ಎಂದು ಕರೆಯಲಾಗುತ್ತದೆ. ಡಿಸ್‌ಪ್ಲೇ ಸೆಕ್ಷನ್‌ನ ಕೆಳಭಾಗದಲ್ಲಿ ಬ್ಯಾಟರಿಯನ್ನು ಅಳವಡಿಸುವ ವಿಭಾಗವಿರುತ್ತದೆ. ಬ್ಯಾಟರಿಯಿಂದ ಯಂತ್ರವು

ಕಾರ್ಯನಿರ್ವಹಿಸುತ್ತದೆ. ಈ ವಿಭಾಗದ ಪಕ್ಕದಲ್ಲಿ ಇನ್ನೊಂದು ವಿಭಾಗವಿದ್ದು, ಅದರಲ್ಲಿ ಚುನಾವಣೆಯಲ್ಲಿ ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳ ಸಂಖ್ಯೆಯನ್ನು ಯಂತ್ರದಲ್ಲಿ ಅಳವಡಿಸಲು ಒಂದು ಗುಂಡಿಯನ್ನು ನೀಡಲಾಗಿದೆ. ಕಂಟ್ರೋಲ್ ಯೂನಿಟ್‌ನ ಈ ಎರಡೂ ವಿಭಾಗಗಳನ್ನೊಳಗೊಂಡ ಭಾಗವನ್ನು ಕ್ಯಾಂಡ್ ಸೆಟ್ ಸೆಕ್ಷನ್(Cand Set Section) ಎಂದು ಕರೆಯಲಾಗುತ್ತದೆ. ಈ ಕ್ಯಾಂಡ್ ಸೆಟ್ ಸೆಕ್ಷನ್‌ನ ಕೆಳಗಡೆ ಕಂಟ್ರೋಲ್ ಯೂನಿಟ್‌ನ ರಿಸಲ್ಟ್ ಸೆಕ್ಷನ್(Result Section) ಇರುತ್ತದೆ. ಈ ವಿಭಾಗವು–

(i) ಮತದಾನವನ್ನು ಮುಕ್ತಾಯ ಮಾಡಲು ಉಪಯೋಗಿಸುವ 'Close' ಗುಂಡಿಯನ್ನು

(ii) ಚುನಾವಣೆಯ ಫಲಿತಾಂಶವನ್ನು ನಿರ್ಧರಿಸಲು 'Result' ಗುಂಡಿಯನ್ನು

(iii) ಅನವಶ್ಯಕವಾದ ದತ್ತಾಂಶವನ್ನು ಯಂತ್ರದಿಂದ ತೆಗೆಯಲು 'Clear' ಗುಂಡಿಯನ್ನು ಹೊಂದಿರುತ್ತದೆ.

ಕಂಟ್ರೋಲ್ ಯೂನಿಟ್‌ನ ಕೆಳಭಾಗದಲ್ಲಿ ಎರಡು ಗುಂಡಿಗಳಿರುತ್ತವೆ– ಒಂದು 'Ballot' ಗುಂಡಿಯಾಗಿದ್ದು ಇದನ್ನು ಒತ್ತುವುದರಿಂದ ಬ್ಯಾಲೆಟ್ ಯೂನಿಟ್ ಮತಗಳನ್ನು ನಮೂದಿಸಿಕೊಳ್ಳಲು ಸಿದ್ಧಗೊಳ್ಳುತ್ತದೆ. ಇನ್ನೊಂದು 'Total' ಗುಂಡಿಯಾಗಿದ್ದು, ಇದನ್ನು ಒತ್ತುವುದರಿಂದ ಅಲ್ಲಿಯವರೆಗೂ ಚಲಾಯಿಸಲಾದ ಒಟ್ಟು ಮತಗಳನ್ನು ನೋಡಬಹುದಾಗಿರುತ್ತದೆ. **'Total' ಗುಂಡಿಯನ್ನು ಒತ್ತುವುದರಿಂದ ಒಟ್ಟು ಮತಗಳನ್ನು ತೋರಿಸುತ್ತದೆಯೇ ಹೊರತು ಪ್ರತಿಯೊಬ್ಬ ಅಭ್ಯರ್ಥಿಗೆ ನೀಡಲಾದ ವೈಯಕ್ತಿಕ ಮತಗಳನ್ನಲ್ಲ ಎಂಬುದನ್ನು ಗಮನದಲ್ಲಿಟ್ಟುಕೊಳ್ಳತಕ್ಕದ್ದು**. ಈ ಭಾಗವನ್ನು ಕಂಟ್ರೋಲ್ ಯೂನಿಟ್‌ನ 'Ballot Section' ಎಂದು ಕರೆಯಲಾಗುತ್ತದೆ.

4.4 ಮತಯಂತ್ರವು ಬ್ಯಾಟರಿಯ ಆಧಾರದ ಮೇಲೆ ನಡೆಯುತ್ತಿದ್ದು, ಇದನ್ನು ಎಲ್ಲಿಯೇ ಆಗಲಿ ಮತ್ತು ಯಾವುದೇ ಪರಿಸ್ಥಿತಿಗಳಲ್ಲಾಗಲಿ ಉಪಯೋಗಿಸಬಹುದಾಗಿರುತ್ತದೆ. ಇದು ಉಪಯೋಗಿಸಲು ಸುಲಭವಾಗಿದ್ದು– ವ್ಯತ್ಯಸ್ತಗೊಳಿಸಲಾಗದ ಹಾಗೂ ದೋಷಗಳಿಂದ ಮುಕ್ತವಾಗಿರುತ್ತದೆ. ಯಂತ್ರದ ಎರಡೂ ಯೂನಿಟ್ಟುಗಳನ್ನು ತೆಗೆದುಕೊಂಡು ಹೋಗಲು ಅನುಕೂಲವಾಗುವಂತೆ ಎರಡು ಬೇರೆ–ಬೇರೆ ಸಾಗಿಸುವ ಪೆಟ್ಟಿಗೆಗಳಲ್ಲಿ ಸರಬರಾಜು ಮಾಡಲಾಗುತ್ತದೆ. ಯಂತ್ರದಲ್ಲಿ ಒಮ್ಮೆ ದಾಖಲಿಸಿದ ಮತದಾನದ ಬಗೆಗಿನ ಮಾಹಿತಿಯು ಅದರ ಸ್ಮೃತಿ(Memory)ಯಲ್ಲಿ ಉಳಿದಿರುತ್ತದೆ, ಯಂತ್ರದಿಂದ ಬ್ಯಾಟರಿಯನ್ನು ತೆಗೆದಾಗಲೂ ಸಹ ಮಾಹಿತಿಯು ಸ್ಮೃತಿಯಲ್ಲಿ ಉಳಿದಿರುತ್ತದೆ.

4.5 ಮತಯಂತ್ರ ಅದರಲ್ಲೂ ಬ್ಯಾಲೆಟ್ ಯೂನಿಟ್‌ನ್ನು ಪ್ರಸ್ತುತ ಮತದಾನ ಪದ್ಧತಿಯ ಎಲ್ಲಾ ವೈಶಿಷ್ಟ್ಯಗಳನ್ನು ಒಳಗೊಂಡಿರುವ ಮಾದರಿಯಲ್ಲಿ ರೂಪಿಸಲಾಗಿದೆ ಹಾಗೂ ಒಂದೇ ಒಂದು ಬದಲಾವಣೆ ಎಂದರೆ, ಮತದಾರನು ತನ್ನ ನೆಚ್ಚಿನ ಅಭ್ಯರ್ಥಿಗೆ ಮತ ನೀಡಲು ಮತಪತ್ರ ಮತ್ತು ಸೀಲನ್ನು ಉಪಯೋಗಿಸಿ ಮತ ಚಲಾಯಿಸುವುದರ ಬದಲಾಗಿ ಅಭ್ಯರ್ಥಿಯ ಹೆಸರು ಮತ್ತು ಚಿನ್ಹೆಯ ಮಂದಿರುವ ನೀಲಿ ಬಣ್ಣದ ಗುಂಡಿಯನ್ನು ಒತ್ತಬೇಕಾಗಿರುತ್ತದೆ. ಮತಯಂತ್ರದ ಮೂಲಕ ಮತ ಚಲಾಯಿಸುವ ಪ್ರಕ್ರಿಯೆಯು ಅತ್ಯಂತ ಸರಳ, ತ್ವರಿತ ಮತ್ತು ತಪ್ಪು ಮಾಡಲು ಆಸ್ಪದವಿಲ್ಲದಂತದ್ದಾಗಿದೆ. ಪ್ರತಿಯೊಂದು ಮತವೂ ಕರಾರುವಾಕ್ಕಾಗಿ ದಾಖಲಾಗುವುದರಿಂದ ಯಾವುದೇ ಕುಲಗೆಟ್ಟ ಮತವಿರುವುದಿಲ್ಲ.

4.6 **ಮತಪತ್ರದಲ್ಲಿ "ಮೇಲ್ಕಂಡ ಯಾರೂ ಅಲ್ಲ" (NOTA) ಅಂಕಣ ಮುದ್ರಿಸುವುದು:** ರಾಜ್ಯ ಚುನಾವಣಾ ಆಯೋಗದ ಆದೇಶ ಸಂಖ್ಯೆ **ರಾಚುಆ:14:ಇಯುಬಿ:2017, ದಿನಾಂಕ: 10–03–2017** ರಂತೆ ಮತಪತ್ರದಲ್ಲಿ "NOTA" ಅವಕಾಶ ಕಲ್ಪಿಸಲು ಆದೇಶವಾಗಿರುವುದರಿಂದ, ಭಾರತ್ ಎಲೆಕ್ಟ್ರಾನಿಕ್ಸ್ (ಬಿಇಎಲ್) ಸಂಸ್ಥೆಯು ತಯಾರಿಸಿರುವ ವಿದ್ಯುನ್ಮಾನ ಮತಯಂತ್ರ ಬಳಸುವಲ್ಲಿ ಚುನಾವಣೆಯ ವಿವರಗಳನ್ನು ಮುದ್ರಿಸಲು ಮತಪತ್ರದ ಮೇಲ್ಭಾಗದಲ್ಲಿ ಬಿಟ್ಟಿರುವ ಸ್ಥಳದ ಕೆಳಗೆ ಒಂದು ಮಿ.ಮೀ

ಅಗಲದ ಕಪ್ಪು ರೇಖೆ ಇರತಕ್ಕದ್ದು. ಆ ರೇಖೆಯ ಕೆಳಗೆ ಪ್ರತಿ ಅಭ್ಯರ್ಥಿಗೆ ಇರುವ **ಪ್ರತ್ಯೇಕ ಅಂಕಣದಲ್ಲಿ (Panel)** ಸ್ಪರ್ಧಿಸುವ ಅಭ್ಯರ್ಥಿಯ ಕ್ರಮ ಸಂಖ್ಯೆ, ಹೆಸರು ಮತ್ತು ಸಂಬಂಧಿಸಿದ ಚಿಹ್ನೆಯನ್ನು ಮುದ್ರಿಸತಕ್ಕದ್ದು. ಕೊನೆಯ ಅಭ್ಯರ್ಥಿಯ ಹೆಸರು ಮತ್ತು ಚಿಹ್ನೆ ಇರುವ ಅಂಕಣದ ನಂತರ ಮತ್ತೊಂದು ಅಂಕಣದಲ್ಲಿ "ಮೇಲ್ಕಂಡ ಯಾರೂ ಅಲ್ಲ" (NOTA) ಇರತಕ್ಕದ್ದು. ಅದರ ಎದುರಿಗೆ ಈ ಕೆಳಕಂಡಂತೆ ಚಿಹ್ನೆಯನ್ನು ಮುದ್ರಿಸತಕ್ಕದ್ದು.



The NOTA symbol

(2) ಭಾರತ್ ಎಲೆಕ್ಟ್ರಾನಿಕ್ಸ್ (ಬಿಇಎಲ್) ಸಂಸ್ಥೆಯು ತಯಾರಿಸಿರುವ ವಿದ್ಯುನ್ಮಾನ ಮತಯಂತ್ರದಲ್ಲಿ ಸ್ಪರ್ಧಿಸುವ ಪ್ರತಿ ಅಭ್ಯರ್ಥಿಗೆ ಸಂಬಂಧಿಸಿದ ಅಂಕಣವು (Panel) 27.5 ಮಿ.ಮೀ (ಉದ್ದ) x 140 ಮಿ.ಮೀ (ಅಗಲ) ಇರತಕ್ಕದ್ದು. ಅಭ್ಯರ್ಥಿಗಳಿಗೆ ಸಂಬಂಧಿಸಿದ ಪ್ರತಿ ಅಂಕಣದ ಮಧ್ಯದಲ್ಲಿ 1 ಮಿ.ಮೀ ಅಗಲದ ಕಪ್ಪು ಬಣ್ಣದ ದಪ್ಪ ರೇಖೆ ಇರತಕ್ಕದ್ದು.

(3) ಮತಪತ್ರದಲ್ಲಿ ಅಭ್ಯರ್ಥಿಗಳ ಹೆಸರುಗಳನ್ನು ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿ (ಪ್ರಪತ್ರ–7) ರಲ್ಲಿ ಕಾಣಿಸಿರುವಂತಹ ಕ್ರಮದಲ್ಲಿಯೇ ಮತಪತ್ರದ ಮೇಲೆ ಮುದ್ರಿಸತಕ್ಕದ್ದು.

(4) ಸ್ಪರ್ಧಿಸುವ ಅಭ್ಯರ್ಥಿಗಳ ಹೆಸರುಗಳನ್ನು ಮತಪತ್ರದಲ್ಲಿ ಒಂದರ ನಂತರ ಒಂದನ್ನು ಅನುಕ್ರಮವಾಗಿ ಮುದ್ರಿಸಿ ಕೊನೆಯ ಅಂಕಣದಲ್ಲಿ "ಮೇಲ್ಕಂಡ ಯಾರು ಅಲ್ಲ" (NOTA) ವನ್ನು ಚಿಹ್ನೆಯ ಸಹಿತ ಮುದ್ರಿಸುವುದು. NOTA ಅಂಕಣ ಹಾಗೂ ಸ್ಪರ್ಧಿಸುವ ಅಭ್ಯರ್ಥಿಗಳ ಅಂಕಣಗಳ ಸಂಖ್ಯೆಯು 16 ಕ್ಕಿಂತ ಕಡಿಮೆ ಇದ್ದಲ್ಲಿ NOTA ಅಂಕಣದ ನಂತರದ ಜಾಗವನ್ನು ಖಾಲಿ ಬಿಡತಕ್ಕದ್ದು. NOTA ಒಳಗೊಂಡಂತೆ ಸ್ಪರ್ಧಿಸುವ ಅಭ್ಯರ್ಥಿಗಳ ಸಂಖ್ಯೆಯು 32ಕ್ಕಿಂತ ಕಡಿಮೆ ಇದ್ದಲ್ಲಿ NOTA ಅಂಕಣದ ನಂತರದ ಜಾಗವನ್ನು ಖಾಲಿ ಬಿಡತಕ್ಕದ್ದು. ಅದೇ ರೀತಿ ಮೂರು ಮತ್ತು ನಾಲ್ಕು ಹಾಳೆಗಳಿರುವ ಮತಪತ್ರಗಳಿಗೂ ಅನುಸರಿಸತಕ್ಕದ್ದು.

(5) ಸ್ಪರ್ಧಿಸುವ ಅಭ್ಯರ್ಥಿಗಳ ಸಂಖ್ಯೆಯು 15ನ್ನು ಮೀರಿದಲ್ಲಿ, ಮೇಲೆ ತಿಳಿಸಿರುವ ಅಳತೆಯಲ್ಲಿ ಮತಪತ್ರವನ್ನು 2 ಹಾಳೆಗಳಲ್ಲಿ ಮುದ್ರಿಸತಕ್ಕದ್ದು. ಸ್ಪರ್ಧಿಸುವ ಅಭ್ಯರ್ಥಿಗಳ ಸಂಖ್ಯೆಯು 31ನ್ನು ಮೀರಿದಲ್ಲಿ 3 ಹಾಳೆಗಳಲ್ಲಿ ಮುದ್ರಿಸತಕ್ಕದ್ದು ಹಾಗೂ ಸ್ಪರ್ಧಿಸುವ ಅಭ್ಯರ್ಥಿಗಳ ಸಂಖ್ಯೆಯು 47ನ್ನು ಮೀರಿದಲ್ಲಿ, ಮತಪತ್ರವನ್ನು 4 ಹಾಳೆಗಳಲ್ಲಿ ಮುದ್ರಿಸತಕ್ಕದು.

(6) ಅಂತಹ ಪ್ರತಿ ಹಾಳೆಗಳಲ್ಲಿ, ಚುನಾವಣೆಯ ವಿವರಗಳನ್ನು ತೋರಿಸಲು ಇರುವ ಜಾಗದಲ್ಲಿ ಹಾಳೆಯ ಸಂಖ್ಯೆಯನ್ನು ದಪ್ಪ ಅಕ್ಷರಗಳಲ್ಲಿ ಮುದ್ರಿಸತಕ್ಕದ್ದು.

(7) NOTA ಒಳಗೊಂಡಂತೆ ಸ್ಪರ್ಧಿಸುವ ಅಭ್ಯರ್ಥಿಗಳ ಹೆಸರನ್ನು ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿಯಲ್ಲಿರುವ ಕ್ರಮದಂತೆಯೇ, ಅದೇ ಭಾಷೆಯಲ್ಲಿಯೇ ಮುದ್ರಿಸತಕ್ಕದ್ದು. (Form-7) ರಂತೆ. ಅಭ್ಯರ್ಥಿಯ ಕ್ರಮ ಸಂಖ್ಯೆಯನ್ನು ಇಂಗ್ಲೀಷ್ ಸಂಖ್ಯೆಯಲ್ಲಿ ಮುದ್ರಿಸತಕ್ಕದ್ದು.

(8) ಸ್ಪರ್ಧಿಸುವ ಅಭ್ಯರ್ಥಿಯ ಕ್ರಮ ಸಂಖ್ಯೆ ಮತ್ತು ಹೆಸರನ್ನು ಎಡ ಭಾಗದಲ್ಲಿ ಹಾಗೂ ಅಭ್ಯರ್ಥಿಯ ಚಿಹ್ನೆಯನ್ನು ಬಲ ಭಾಗದಲ್ಲಿ ಅವರಿಗೆ ಸಂಬಂಧಿಸಿದ ಅಂಕಣದಲ್ಲಿ ಮುದ್ರಿಸತಕ್ಕದ್ದು.

(9) ಮತದಾರನು ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗೆ ಮತ ನೀಡದೆ ತನ್ನ ಇಚ್ಛೆಯಂತೆ "ಮೇಲ್ಕಂಡ ಯಾರೂ ಅಲ್ಲ" (NOTA)ಗೆ ಮತ ಹಾಕಲು ಅನುವಾಗುವಂತೆ ಸ್ಪರ್ಧಿಸುತ್ತಿರುವ ಕೊನೆಯ ಅಭ್ಯರ್ಥಿಯ ಹೆಸರು ಮತ್ತು ಚಿಹ್ನೆಯನ್ನು ಒಳಗೊಂಡ ಅಂಕಣದ ನಂತರ ಪ್ರತ್ಯೇಕ ಅಂಕಣ ಇರತಕ್ಕದ್ದು. "ಮೇಲ್ಕಂಡ ಯಾರೂ ಅಲ್ಲ" ಈ ಪದಗಳು ಅಭ್ಯರ್ಥಿಗಳ ಹೆಸರನ್ನು ಯಾವ ಭಾಷೆಯಲ್ಲಿ ಮುದ್ರಿಸಲಾಗಿದೆಯೋ ಅದೇ ಭಾಷೆಯಲ್ಲಿ ಇರತಕ್ಕದ್ದು.

## 5. ಪೋಲಿಂಗ್ ಏಜೆಂಟರ ಮುಖ್ಯ ಕರ್ತವ್ಯಗಳು

ಪೋಲಿಂಗ್ ಏಜೆಂಟನ ಪ್ರಮುಖವಾದ ಕರ್ತವ್ಯವೆಂದರೆ, ತನ್ನನ್ನು ಮತಗಟ್ಟೆಯಲ್ಲಿ ನೇಮಿಸಿರುವ ಅಭ್ಯರ್ಥಿಯ ಹಿತಾಸಕ್ತಿಗಳನ್ನು ಕಾನೂನಿನ / ಚುನಾವಣಾ ನಿಯಮಗಳ ಇತಿಮಿತಿಯಲ್ಲಿ ಕಾಪಾಡುವುದು. ಅವರುಗಳ ಇತರೆ ಕರ್ತವ್ಯಗಳೆಂದರೆ–

(a) ಯಾವುದೇ ಮತದಾರನ ಗುರುತಿನ ಬಗ್ಗೆ ಸಂಶಯವಿದ್ದಲ್ಲಿ ಆ ಬಗ್ಗೆ ಪ್ರಶ್ನಿಸಿ, ನಕಲಿ ಮತದಾನವು ನಡೆಯದಂತೆ ತಡೆಯುವಲ್ಲಿ ಪ್ರಿಸೈಡಿಂಗ್ ಅಧಿಕಾರಿಗೆ ಸಹಾಯ ಮಾಡುವುದು.

(b) ಮತದಾನ ಪ್ರಾರಂಭವಾಗುವುದಕ್ಕಿಂತ ಮುಂಚೆ, ಮತದಾನ ನಡೆಯುವಾಗ ಹಾಗೂ ಮತದಾನ ಮುಗಿದ ನಂತರ ಮತ ಯಂತ್ರಗಳನ್ನು ಸಂರಕ್ಷಿಸುವಲ್ಲಿ ಹಾಗೂ ಸೀಲು ಮಾಡುವಂತೆ ನೋಡಿಕೊಳ್ಳುವುದು ಹಾಗೂ

(c) ಮತದಾನ ಪ್ರಾರಂಭವಾಗುವುದಕ್ಕಿಂತ ಮುಂಚೆ, ಮತದಾನ ನಡೆಯುವಾಗ ಹಾಗೂ ಮತದಾನ ಮುಗಿದ ನಂತರ ಮತದಾನಕ್ಕೆ ಸಂಬಂಧಪಟ್ಟ ಎಲ್ಲಾ ಚುನಾವಣಾ ದಾಖಲೆಗಳನ್ನು ಕಾನೂನಿನನ್ವಯ ಸಂರಕ್ಷಿಸುವಲ್ಲಿ ಹಾಗೂ ಸೀಲು ಮಾಡುವಂತೆ ನೋಡಿಕೊಳ್ಳುವುದು / ಸಹಕರಿಸುವುದು.

(d) ಮತಗಟ್ಟೆಯಲ್ಲಿ ಉಪಯೋಗಿಸಿದ ವಿದ್ಯುನ್ಮಾನ ಮತ ಯಂತ್ರದ ಕಂಟ್ರೋಲ್ ಯೂನಿಟ್ ಮತ್ತು ಬ್ಯಾಲೆಟ್ ಯೂನಿಟ್‌ನ ಕ್ರಮ ಸಂಖ್ಯೆಗಳನ್ನು ನೋಡಿ ರಿಟರ್ನಿಂಗ್ ಅಧಿಕಾರಿಯಿಂದ ಒದಗಿಸಲ್ಪಟ್ಟ ದಾಖಲೆಗಳೊಂದಿಗೆ ತಾಳೆ ಮಾಡಿ ಖಾತ್ರಿ ಪಡಿಸಿಕೊಳ್ಳುವುದು.

## 6. ಅಭ್ಯರ್ಥಿಯು ತನ್ನ ಪರವಾಗಿ ನೇಮಿಸಬಹುದಾದ ಪೋಲಿಂಗ್ ಏಜೆಂಟರ ಸಂಖ್ಯೆ

ಪ್ರತಿಯೊಬ್ಬ ಸ್ಪರ್ಧಿಸುತ್ತಿರುವ ಅಭ್ಯರ್ಥಿಯು, ಪ್ರತಿಯೊಂದು ಮತಗಟ್ಟೆಯಲ್ಲಿ ಒಬ್ಬ ಮತಗಟ್ಟೆ ಏಜೆಂಟನನ್ನು ಹಾಗೂ ಇಬ್ಬರು ಬದಲಿ (Relief Agents) ಏಜೆಂಟರನ್ನು ಪೋಲಿಂಗ್ ಏಜೆಂಟರಾಗಿ ಕಾರ್ಯನಿರ್ವಹಿಸಲು ನೇಮಿಸಬಹುದಾಗಿದೆ. **ಆದಾಗ್ಯೂ ಮತಗಟ್ಟೆಯ ಒಳಗಡೆ ಒಂದು ಬಾರಿಗೆ ಅವರಲ್ಲಿ ಯಾರಾದರೊಬ್ಬರು ಮಾತ್ರ ಹಾಜರಿರತಕ್ಕದ್ದು.** ಒಬ್ಬ ಏಜೆಂಟನು ಹೊರಗೆ ಹೋದನಂತರ ಇನ್ನೊಬ್ಬ ಬದಲಿ ಏಜೆಂಟನು ಆ ಪೋಲಿಂಗ್ ಏಜೆಂಟನ ಸ್ಥಾನದಲ್ಲಿ ಕೂರಬಹುದು. ಮತಗಟ್ಟೆಯ ಒಳಗಡೆ ಅವರಲ್ಲಿ ಯಾರೊಬ್ಬರಿದ್ದರೂ, ಅವರನ್ನೇ ಆ ಅಭ್ಯರ್ಥಿಯ ಪೋಲಿಂಗ್ ಏಜೆಂಟನೆಂದು ಪರಿಗಣಿಸಲಾಗುವುದು ಹಾಗೂ ಅವರು ಕಾನೂನಿನನ್ವಯ ಪೋಲಿಂಗ್ ಏಜೆಂಟನಿಗೆ ನೀಡಿದ ಹಕ್ಕು ಮತ್ತು ಜವಾಬ್ದಾರಿಯನ್ನು ಹೊಂದಿರುತ್ತಾರೆ. ಆದಾಗ್ಯೂ **3–00 ಘಂಟೆಯ ನಂತರ ಯಾರೇ ಪೋಲಿಂಗ್ ಏಜೆಂಟನು ಮತಗಟ್ಟೆಯಿಂದ ಹೊರಗೆ ಹೋಗಲು ಅಥವಾ ಬದಲಿ ಏಜೆಂಟನಿಂದ ಸ್ಥಾನ ಬದಲಿಸಲು ಅನುಮತಿಸಲಾಗುವುದಿಲ್ಲ.**

## 7. ಪೋಲಿಂಗ್ ಏಜೆಂಟರ ನೇಮಕಾತಿ

7.1 ಪೋಲಿಂಗ್ ಏಜೆಂಟರ ನೇಮಕಾತಿಯನ್ನು ಸ್ವತ: ಅಭ್ಯರ್ಥಿ ಅಥವಾ ಅವನ ಚುನಾವಣಾ ಏಜೆಂಟನು ಮಾಡಬಹುದಾಗಿದ್ದು, ಇವರನ್ನು ಹೊರತುಪಡಿಸಿ ಬೇರ್‍ಯಾರು ನೇಮಕಾತಿ ಮಾಡುವಂತಿಲ್ಲ. ನೇಮಕಾತಿಯನ್ನು ನಿಗದಿತ ನಮೂನೆಯಲ್ಲಿ (ಅನುಬಂಧ–I) ಮಾಡಬೇಕು ಹಾಗೂ ನೇಮಕಾತಿ ಮಾಡುವ ವ್ಯಕ್ತಿಯು ಅದಕ್ಕೆ ಸಹಿ ಮಾಡಬೇಕು, ಅಂದರೆ ಅಭ್ಯರ್ಥಿ ಅಥವಾ

ಅವನ ಚುನಾವಣಾ ಏಜೆಂಟನು ಸಹಿ ಮಾಡಬೇಕು. ಸಾಮಾನ್ಯವಾಗಿ ಅಂತಹ ನೇಮಕಾತಿ ಪತ್ರಕ್ಕೆ ಸಹಿ ಮಾಡುವುದರಿಂದ ಪೋಲಿಂಗ್ ಏಜೆಂಟನು ತನ್ನ ನೇಮಕಾತಿಯನ್ನು ಅಂಗೀಕರಿಸುತ್ತಾನೆ. ಸಾಧ್ಯವಿದ್ದಲ್ಲಿ, ಪೋಲಿಂಗ್ ಏಜೆಂಟನು ತನ್ನ ನೇಮಕಾತಿ ಪತ್ರಕ್ಕೆ ಅಭ್ಯರ್ಥಿ ಅಥವಾ ಚುನಾವಣಾ ಏಜೆಂಟನ ಸಮಕ್ಷಮದಲ್ಲಿ ಸಹಿ ಹಾಕತಕ್ಕದ್ದು. ಅಂತಹ ನೇಮಕಾತಿ ಪತ್ರದ ಮೂಲಪ್ರತಿಯನ್ನು, ಪ್ರಿಸೈಡಿಂಗ್ ಅಧಿಕಾರಿಗೆ ತೋರಿಸಿ, ಮತಗಟ್ಟೆಯೊಳಗೆ ಪ್ರವೇಶ ಪಡೆಯುವುದಕ್ಕಾಗಿ ಪೋಲಿಂಗ್ ಏಜೆಂಟನಿಗೆ ನೀಡತಕ್ಕದ್ದು. ಮತಗಟ್ಟೆಯಲ್ಲಿ ಪ್ರಿಸೈಡಿಂಗ್ ಅಧಿಕಾರಿಯ ಸಮಕ್ಷಮದಲ್ಲಿ ಪೋಲಿಂಗ್ ಏಜೆಂಟನು ಮತ್ತೊಮ್ಮೆ ಸಹಿ ಹಾಕತಕ್ಕದ್ದು.

7.2 ಒಂದು ಮತಗಟ್ಟೆಯ ಪ್ರಿಸೈಡಿಂಗ್ ಅಧಿಕಾರಿಯ ಬಳಿ ಅಭ್ಯರ್ಥಿಯ ಅಥವಾ ಅವರ ಚುನಾವಣಾ ಏಜೆಂಟರ ಮಾದರಿ ಸಹಿ (Specimen Signature) ಇಲ್ಲದಿದ್ದ ಪಕ್ಷದಲ್ಲಿ ಮತಗಟ್ಟೆ ಏಜೆಂಟನು ಫಾರಂ 10ರಲ್ಲಿ ನೀಡುವ ತನ್ನ ನೇಮಕಾತಿ ಪತ್ರದಲ್ಲಿರುವ ಅಭ್ಯರ್ಥಿ ಅಥವಾ ಅವನ ಚುನಾವಣಾ ಏಜೆಂಟನ ಸಹಿಯನ್ನು ಪ್ರಿಸೈಡಿಂಗ್ ಅಧಿಕಾರಿಯು ಪರಿಶೀಲಿಸಲು ಸಾಧ್ಯವಿರುವುದಿಲ್ಲ. ಇದರಿಂದಾಗಿ ಕೆಲವೊಮ್ಮೆ ಅನಧಿಕೃತ (Unscrupulous) ವ್ಯಕ್ತಿಗಳು, ಖೋಟಾ ಸಹಿಯೊಂದಿಗೆ (Forged Signature) ನಕಲಿ ಫಾರಂ 10ನ್ನು ನೀಡುವ ಅವಕಾಶವೂ ಇರುತ್ತದೆ. ಮತಗಟ್ಟೆಗಳಲ್ಲಿ ಇಂತಹ ದುರ್ನಡತೆಗಳನ್ನು (Malpractices) ತಡೆಯುವ ಸಲುವಾಗಿ ಆಯೋಗವು ಅಭ್ಯರ್ಥಿಗಳ ಮತ್ತು ಅವರ ಚುನಾವಣಾ ಏಜೆಂಟರ ಮಾದರಿ ಸಹಿಯನ್ನು ಪಡೆಯಲು ಮತ್ತು ಹಂಚಲು ಒಂದು ಫಾರ್ಮ್ಯಾಟನ್ನು (ಅನುಬಂಧ–1 ಎ) ನಿಗದಿಪಡಿಸಿದೆ. ಒಂದು ವೇಳೆ ಯಾರೇ ಅಭ್ಯರ್ಥಿಯು ಯಾವುದೇ ಚುನಾವಣಾ ಏಜೆಂಟರನ್ನು ನೇಮಿಸಿಲ್ಲದ ಪಕ್ಷದಲ್ಲಿ ಫಾರ್ಮ್ಯಾಟ್ (ಅನುಬಂಧ–1ಎ)ನಲ್ಲಿ "ಚುನಾವಣಾ ಏಜೆಂಟನನ್ನು ನೇಮಿಸಲ್ಪಟ್ಟಿಲ್ಲ" ಎಂಬ ಪದಗಳಲ್ಲಿ ದಾಖಲಿಸಲಾಗುತ್ತದೆ.

7.3 ಒಂದುವೇಳೆ ಯಾರೇ ಅಭ್ಯರ್ಥಿ ಮತ್ತು/ ಅಥವಾ ಅವನ ಚುನಾವಣಾ ಏಜೆಂಟನು ಫಾರ್ಮ್ಯಾಟ್ (ಅನುಬಂಧ–1ಎ)ನಲ್ಲಿ ತನ್ನ ಮಾದರಿ ಸಹಿಯನ್ನು ನೀಡಲು ನಿರಾಕರಿಸಿದ್ದರೆ, ಅಂತಹ ಅಭ್ಯರ್ಥಿಯಿಂದ ನೇಮಿಸಲ್ಪಟ್ಟ ಮತಗಟ್ಟೆ ಏಜೆಂಟನು ಫಾರಂ–10ರಲ್ಲಿ ನೇಮಕಾತಿ ಪತ್ರವನ್ನು ನೀಡಿದಲ್ಲಿ ಅದನ್ನು ಪ್ರಿಸೈಡಿಂಗ್ ಅಧಿಕಾರಿಯು, ತನಗೆ ನೀಡಲಾದ ಫಾರ್ಮ್ಯಾಟ್ (ಅನುಬಂಧ–1ಎ)ನಲ್ಲಿ ಅಂತಹ ಅಭ್ಯರ್ಥಿ ಅಥವಾ ಅವನ ಚುನಾವಣಾ ಏಜೆಂಟನ ಮಾದರಿ ಸಹಿ ಲಭ್ಯವಿಲ್ಲದ ಕಾರಣ, ಅವನಿಗೆ ಮತಗಟ್ಟೆ ಒಳಗೆ ಪ್ರವೇಶಿಸಲು ನಿರಾಕರಿಸಲಾಗುವುದು.

7.4 ಸ್ಪರ್ಧಿಸುತ್ತಿರುವ ಅಭ್ಯರ್ಥಿಯು, ಮೂಲತ: ಒದಗಿಸಿರುವ (ಅನುಬಂಧ–1ಎ ರಲ್ಲಿರುವ) ಮಾದರಿ ಸಹಿಗಳಿರುವ ನಮೂನೆಯನ್ನು ಈಗಾಗಲೇ ಪ್ರಿಸೈಡಿಂಗ್ ಆಫೀಸರ್ ಅವರಿಗೆ ಒದಗಿಸಿದ್ದು, ಕೊನೆ ಕ್ಷಣದಲ್ಲಿ ಯಾರೇ ಚುನಾವಣಾ ಏಜೆಂಟನ ನೇಮಕಾತಿಯಲ್ಲಿ ಬದಲಾವಣೆ ಮಾಡಿದಲ್ಲಿ, ಆಗ ಆ ಚುನಾವಣಾ ಏಜೆಂಟನ ನೇಮಕಾತಿಯನ್ನು ರದ್ದುಗೊಳಿಸಿ ನಮೂನೆ–9ರ ಒಂದು ಪ್ರತಿಯನ್ನು ಹಾಗೂ ಹೊಸ ಚುನಾವಣಾ ಏಜೆಂಟನನ್ನು ನೇಮಕ ಮಾಡಿದ ನಮೂನೆ–8ರ ಒಂದು ಪ್ರತಿಯನ್ನು ಪ್ರತಿಯೊಬ್ಬ ಪ್ರಿಸೈಡಿಂಗ್ ಆಫೀಸರ್ ಅವರಿಗೆ ಒದಗಿಸುವುದು ಸಂಬಂಧಪಟ್ಟ ಅಭ್ಯರ್ಥಿಯ ಹೊಣೆಗಾರಿಕೆಯಾಗಿರುತ್ತದೆ.

7.5 ಮತಗಟ್ಟೆ ಏಜೆಂಟನನ್ನು ನೇಮಕ ಮಾಡಲು ಯಾವುದೇ ಕಾಲಮಿತಿ ಇಲ್ಲ. ಆದಾಗ್ಯೂ ಅವರನ್ನು ಬಹಳಷ್ಟು ಮುಂಚಿತವಾಗಿಯೇ ನೇಮಕಮಾಡತಕ್ಕದ್ದು. ಅಂದರೆ ಮತದಾನ ದಿನಾಂಕಕ್ಕಿಂತ 10 ದಿನಗಳ ಮುಂಚೆಯೇ ನೇಮಕಮಾಡತಕ್ಕದ್ದು.

(a) ಪೋಲಿಂಗ್ ಏಜೆಂಟರು ಅದೇ ವಾರ್ಡಿನ ಹಾಗೂ ಅದೇ ಮತಗಟ್ಟೆಯ ಮತದಾರನಾಗಿರಬೇಕು.

(b) ಯಾವುದೇ ಅಭ್ಯರ್ಥಿಯು ಪೋಲಿಂಗ್ ಏಜೆಂಟ್ ಅಥವಾ ಬದಲಿ ಏಜೆಂಟರನ್ನು ನೇಮಕ ಮಾಡುವಾಗ ಸಮಾಜಘಾತುಕ ವ್ಯಕ್ತಿ, ರೌಡಿ ಎಂದು ಗುರುತಿಸಲ್ಪಟ್ಟಿರುವ ವ್ಯಕ್ತಿ ಅಥವಾ

ಕ್ರಿಮಿನಲ್ ಪ್ರಕರಣಗಳಲ್ಲಿ ಅಪರಾಧಿಯಾಗಿದ್ದ ವ್ಯಕ್ತಿಯನ್ನು ಪೋಲಿಂಗ್ ಏಜೆಂಟ್ ಅಥವಾ ಬದಲಿ ಏಜೆಂಟ್ ಆಗಿ ನೇಮಕ ಮಾಡತಕ್ಕದ್ದಲ್ಲ.

(c) ಸಂಪೂರ್ಣ ವಿವರಗಳೊಂದಿಗೆ ಅಂದರೆ ಅವರ ವಿಳಾಸ, ವಿದ್ಯಾರ್ಹತೆ ಇತ್ಯಾದಿಗಳೊಂದಿಗೆ ಮತದಾನಕ್ಕೆ 10 ದಿನಗಳ ಮುಂಚಿತವಾಗಿ ಚುನಾವಣಾಧಿಕಾರಿಗಳಿಗೆ ತಲುಪಿಸತಕ್ಕದ್ದು.

(d) ಚುನಾವಣಾಧಿಕಾರಿಯು ಅಭ್ಯರ್ಥಿ ನೇಮಕ ಮಾಡಿದ ಪೋಲಿಂಗ್ ಏಜೆಂಟ್ ಅಥವಾ ಬದಲಿ ಏಜೆಂಟರ ಬಗ್ಗೆ ಸಂಶಯ ಉಂಟಾದಲ್ಲಿ ಪೊಲೀಸ್ ತನಿಖೆ ನಡೆಸಿ ಪೋಲಿಂಗ್ ಏಜೆಂಟ್ ಅಥವಾ ಬದಲಿ ಏಜೆಂಟರು ಒಂದು ವೇಳೆ ಕ್ರಿಮಿನಲ್ ಹಿನ್ನಲೆಯನ್ನು ಹೊಂದಿದ್ದಲ್ಲಿ ಅಂತಹ ನೇಮಕಾತಿಯನ್ನು ತಿರಸ್ಕರಿಸಲಾಗುತ್ತದೆ. ಹಾಗೂ ಅಭ್ಯರ್ಥಿಗೆ ಸಭ್ಯ ಪೋಲಿಂಗ್ ಏಜೆಂಟ್ ಅಥವಾ ಬದಲಿ ಏಜೆಂಟರನ್ನು ನೇಮಕ ಮಾಡಲು ಸೂಚನೆ ನೀಡಲಾಗುವುದು. ಹೀಗೆ ಮಾಡಿದಾಗ ಅಭ್ಯರ್ಥಿಯು ಪೋಲಿಂಗ್ ಏಜೆಂಟ್ ಅಥವಾ ಬದಲಿ ಏಜೆಂಟರ ನೇಮಕಾತಿಯನ್ನು ಮತದಾನ ದಿನಾಂಕಕ್ಕೆ 10 ದಿನಗಳ ಮುಂಚಿತವಾಗಿ ಮಾಡಬೇಕೆಂಬ ಷರತ್ತು ಅನ್ವಯವಾಗತಕ್ಕದ್ದಲ್ಲ.

## 8. ಪೋಲಿಂಗ್ ಏಜೆಂಟರ ನೇಮಕಾತಿಯ ರದ್ಧತಿ.

8.1 ಅಭ್ಯರ್ಥಿ ಅಥವಾ ಅವನ ಚುನಾವಣಾ ಏಜೆಂಟನು ಮತಗಟ್ಟೆ ಏಜೆಂಟನ ನೇಮಕಾತಿಯನ್ನು ರದ್ದು ಮಾಡಬಹುದಾಗಿರುತ್ತದೆ. ಮತಗಟ್ಟೆ ಏಜೆಂಟನ ನೇಮಕಾತಿಯ ರದ್ದತಿಯನ್ನು ನಿಗದಿತ ಫಾರಂ (ಅನುಬಂಧ–II)ರಲ್ಲಿ ಮಾಡಬೇಕಿರುತ್ತದೆ.

8.2 ಒಂದುವೇಳೆ ಮತಗಟ್ಟೆ ಏಜೆಂಟನ ನೇಮಕಾತಿಯನ್ನು ರದ್ದುಮಾಡಿದಲ್ಲಿ ಅಥವಾ ಮತದಾನ ಅಂತ್ಯಗೊಳ್ಳುವುದರೊಳಗೆ ಯಾರೇ ಮತಗಟ್ಟೆ ಏಜೆಂಟನು ಮೃತಪಟ್ಟಲ್ಲಿ, ಮತದಾನ ಅಂತ್ಯಗೊಳ್ಳುವುದಕ್ಕಿಂತ ಮುಂಚೆ ಯಾವುದೇ ಸಮಯದಲ್ಲಿ ಅಭ್ಯರ್ಥಿ ಅಥವಾ ಅವನ ಚುನಾವಣಾ ಏಜೆಂಟನು ಇನ್ನೊಬ್ಬ ಮತಗಟ್ಟೆ ಏಜೆಂಟನನ್ನು ನೇಮಿಸಬಹುದು.

## 9. ಪೋಲಿಂಗ್ ಏಜೆಂಟನಾಗಿ ನೇಮಕವಾಗಲು ಇರಬೇಕಾದ ಅರ್ಹತೆಗಳು.

9.1 ಮತಗಟ್ಟೆ ಏಜೆಂಟರಾಗಿ ನೇಮಕವಾಗುವ ವ್ಯಕ್ತಿಗಳಿಗೆ ಕಾನೂನು ಯಾವುದೇ ಅರ್ಹತೆಯನ್ನು ನಿಗದಿಪಡಿಸಿಲ್ಲ. ಆದಾಗ್ಯೂ, ಪ್ರೌಢಿಮೆ ಹೊಂದಿದ ಮತ್ತು ವಯಸ್ಕ ವ್ಯಕ್ತಿಗಳನ್ನು ತಮ್ಮ ಮತಗಟ್ಟೆ ಏಜೆಂಟರನ್ನಾಗಿ ನೇಮಿಸುವುದು ಅಭ್ಯರ್ಥಿಗಳ ಆಸಕ್ತಿಗೆ ಒಳಪಟ್ಟಿರುತ್ತದೆ. ಒಬ್ಬ ಸ್ಥಳೀಯ ವ್ಯಕ್ತಿಗೆ ಬಹಳಷ್ಟು ಮತದಾರರು ವೈಯಕ್ತಿಕವಾಗಿ ಪರಿಚಿತರಿರುತ್ತಾರೆ ಹಾಗೂ ಮತದಾನದ ಸಮಯದಲ್ಲಿ ನಕಲಿ /ಖೋಟಾ ಮತದಾನವನ್ನು ತಡೆಗಟ್ಟಲೂ ಸಹಾಯಕನಾಗಿರುತ್ತಾನೆ. ಆದ್ದರಿಂದ, ಸಾಮಾನ್ಯವಾಗಿ ಮತಗಟ್ಟೆ ಏಜೆಂಟನು ಅದೇ ಮತಗಟ್ಟೆ ವ್ಯಾಪ್ತಿಯ ನಿವಾಸಿ ಮತ್ತು ಮತದಾರನಾಗಿರಬೇಕು. ಮತಗಟ್ಟೆ ಏಜೆಂಟನು ಚುನಾವಣಾ ಗುರುತಿನ ಚೀಟಿ (EPIC Card)ಯನ್ನು ಹೊಂದಿರತಕ್ಕದ್ದು, ಇಲ್ಲದ ಪಕ್ಷದಲ್ಲಿ ಸರ್ಕಾರದಿಂದ ನೀಡಲಾದ ಭಾವಚಿತ್ರವುಳ್ಳ ಇತರೆ ಯಾವುದೇ ದಾಖಲೆಯನ್ನು ಹೊಂದಿರತಕ್ಕದ್ದು. ಒಂದುವೇಳೆ ಯಾರೇ ಸೆಕ್ಟರ್ ಮ್ಯಾಜಿಸ್ಟ್ರೇಟನು (Sector Magistrate) ನಿಮ್ಮ ಗುರುತನ್ನು ಕೇಳಿದಲ್ಲಿ, ನಿಮ್ಮ ಅಂತಹ ಚುನಾವಣಾ ಗುರುತಿನ ಚೀಟಿಯನ್ನು (EPIC Card) ತೋರಿಸತಕ್ಕದ್ದು.

9.2 ಸರ್ಕಾರಿ ಸೇವೆಯಲ್ಲಿರುವ ಯಾರೇ ವ್ಯಕ್ತಿಯು ಅಭ್ಯರ್ಥಿಯ ಮತಗಟ್ಟೆ ಏಜೆಂಟನಾಗುವಂತಿಲ್ಲ [**Section 35 of the Karnataka Municipalities Act, 1964**] ಒಂದುವೇಳೆ ಅವನು ಏಜೆಂಟನಾದಲ್ಲಿ ಅವನಿಗೆ 3 ತಿಂಗಳವರೆಗೆ ವಿಸ್ತರಿಸಬಹುದಾದ ಸೆರೆಮನೆವಾಸ ಅಥವಾ ದಂಡ ಅಥವಾ ಎರಡರಿಂದಲೂ ಶಿಕ್ಷಿಸಲ್ಪಡುತ್ತಾನೆ.

9.3 ಚುನಾವಣಾ ಆಯೋಗದ ಸೂಚನೆಗಳನ್ವಯ ರಕ್ಷಣಾ ಸಿಬ್ಬಂದಿಗೆ ಮತಗಟ್ಟೆಯೊಳಗೆ ಪ್ರವೇಶಿಸಲು ಅವಕಾಶವಿಲ್ಲ. ಆದ್ದರಿಂದ ಯಾರೇ – ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಮಂತ್ರಿಯಾಗಲಿ, ಸಂಸತ್ತಿನ ಸದಸ್ಯರಾಗಲಿ, ವಿಧಾನ ಸಭಾ/ ವಿಧಾನ ಪರಿಷತ್ತಿನ ಸದಸ್ಯರಾಗಲಿ ಅಥವಾ ಸರ್ಕಾರದಿಂದ (ಕೇಂದ್ರ ಹಾಗೂ ರಾಜ್ಯ ಸರ್ಕಾರ) ರಕ್ಷಣಾ ಸೌಲಭ್ಯವನ್ನು ಹೊಂದಿರುವ ಇತರೆ ಯಾರೇ ವ್ಯಕ್ತಿಯು ಯಾವುದೇ ಅಭ್ಯರ್ಥಿಗೆ ಚುನಾವಣಾ ಏಜೆಂಟ್, ಮತಗಟ್ಟೆ ಏಜೆಂಟ್ ಅಥವಾ ಎಣಿಕೆ ಏಜೆಂಟ್ ಆಗುವಂತಿಲ್ಲ. ಅಲ್ಲದೆ ಚುನಾವಣಾ ಸಮಯದಲ್ಲಿ ಅಭ್ಯರ್ಥಿಗೆ ಏಜೆಂಟನಾಗಲು ತನಗೆ ನೀಡಿದ ರಕ್ಷಣಾ ಸೌಲಭ್ಯವನ್ನು ಆ ವ್ಯಕ್ತಿಯು ಆಧ್ಯರ್ಪಿಸುವಂತಿಲ್ಲ, ಆ ವ್ಯಕ್ತಿಯು ಮತಗಟ್ಟೆಯನ್ನು ತನ್ನ ರಕ್ಷಣಾ ಸಿಬ್ಬಂದಿಯೊಂದಿಗೆ ಪ್ರವೇಶಿಸಲು ಅನುಮತಿ ಇಲ್ಲ ಮತ್ತು ತನಗೆ ಪ್ರಾಣಾಪಾಯವಿದ್ದರೂ ತನ್ನ ರಕ್ಷಣಾ ಸಿಬ್ಬಂದಿಯನ್ನು ಮತಗಟ್ಟೆಯ ಹೊರಗೆ ನಿಲ್ಲಿಸಿ ತಾನು ಮಾತ್ರ ಒಳಗೆ ಪ್ರವೇಶಿಸುವಂತಿಲ್ಲ. ಮಂತ್ರಿಗಳೊಂದಿಗೆ ಅಥವಾ ಇತರೇ ರಾಜಕೀಯ ಮುಖ್ಯಸ್ಥರೊಂದಿಗೆ ಬರುವ ರಕ್ಷಣಾ ಸಿಬ್ಬಂದಿಗಳಿಗೆ ಮತಗಟ್ಟೆ ಒಳಗಡೆ ಪ್ರವೇಶಿಸಲು ಅನುಮತಿ ಇಲ್ಲ. ಅವರುಗಳು ಮತಗಟ್ಟೆಯ ಬಾಗಿಲಿನ ಹೊರಗಡೆ ನಿಂತು ಕಾಯಬಹುದಷ್ಟೇ. ಆದರೆ ಅಂತಹ ಸಂದರ್ಭದಲ್ಲಿ ಅವರು ಮತದಾರರ ಗುರುತನ್ನು ತೋರಿಸುವಂತೆ ಕೇಳಬಾರದು ಅಥವಾ ಮತದಾರರ ಚುನಾವಣಾ ಗುರುತಿನ ಚೀಟಿಯನ್ನು ಅಥವಾ ಇತರೆ ದಾಖಲೆಗಳನ್ನು ಪರೀಕ್ಷಿಸಬಾರದು.\

**10. ಮತದಾನ ಪ್ರಕ್ರಿಯೆಗಳ ಬಗ್ಗೆ ಪೂರ್ವಾಭ್ಯಾಸ.**

ಪೋಲಿಂಗ್ ಏಜೆಂಟನು, ಆ ವಾರ್ಡಿನಲ್ಲಿ ರಿಟರ್ನಿಂಗ್ ಆಫೀಸರ್ ಅವರು ಮತದಾನ ಪ್ರಕ್ರಿಯೆಗಳ ಬಗ್ಗೆ ಎಷ್ಟು ಪೂರ್ವಾಭ್ಯಾಸಗಳನ್ನು ನಡೆಸುತ್ತಾರೋ, ಅಷ್ಟಕ್ಕೂ ಸಾಧ್ಯವಾದಷ್ಟು ಮಟ್ಟಿಗೆ ಹಾಜರಾಗಬೇಕು. ಇದರಿಂದಾಗಿ ಮತಗಟ್ಟೆಯಲ್ಲಿ ಅನುಸರಿಸಬೇಕಾದ ಕಾರ್ಯವಿಧಾನಗಳು ಆತನಿಗೆ ಗೊತ್ತಾಗುತ್ತದೆ. ಮತಯಂತ್ರ ಮತ್ತು ಇತರ ಚುನಾವಣೆ ದಾಖಲೆಗಳನ್ನು ಸೀಲ್ ಮಾಡುವ ಮತ್ತು ಭದ್ರಗೊಳಿಸುವ ಸರಿಯಾದ ರೀತಿಯನ್ನು ಕಲಿಯಬಹುದು.

**11. ಮತಗಟ್ಟೆಯನ್ನು ತಲುಪುವುದು.**

11.1 ಸಾಮಾನ್ಯವಾಗಿ ಮತದಾನ ಪ್ರಾರಂಭವಾಗಲು ನಿಗದಿಪಡಿಸಿದ ಸಮಯಕ್ಕಿಂತ ಒಂದು ಘಂಟೆ ಮುಂಚಿತವಾಗಿ ನೀವು ಮತಗಟ್ಟೆಯಲ್ಲಿ ಹಾಜರಿರತಕ್ಕದ್ದು. ಏಕೆಂದರೆ ಮತದಾನ ಪ್ರಕ್ರಿಯೆಯು ಪ್ರಾರಂಭಗೊಳ್ಳುವುದಕ್ಕಿಂತ ಮುಂಚೆ ಪ್ರಿಸೈಡಿಂಗ್ ಅಧಿಕಾರಿಯು ಕೈಗೊಳ್ಳುವ ಪೂರ್ವಭಾವಿ ಸಿದ್ಧತೆಯನ್ನು (Preliminaries) ನಡೆಸುವ ಸಂದರ್ಭದಲ್ಲಿ ನೀವು ಹಾಜರಿರಬೇಕಿರುತ್ತದೆ. ಒಂದುವೇಳೆ ಯಾರೇ ಮತಗಟ್ಟೆ ಏಜೆಂಟನು ನಿಧಾನವಾಗಿ/ ತಡವಾಗಿ ಬಂದಲ್ಲಿ, ಪ್ರಿಸೈಡಿಂಗ್ ಅಧಿಕಾರಿಯು ನಡೆಸುವ ಪೂರ್ವಭಾವಿ ಸಿದ್ಧತೆ ಪ್ರಕ್ರಿಯೆಯು ಪ್ರಾರಂಭವಾಗಿದ್ದಲ್ಲಿ, ಅಂತಹ ತಡವಾಗಿ ಬಂದ ಏಜೆಂಟರಿಗೋಸ್ಕರ ಪ್ರಕ್ರಿಯೆಯನ್ನು ಪುನ: ಪ್ರಾರಂಭಿಸುವುದಿಲ್ಲ.

11.2 ಮತಗಟ್ಟೆ ಏಜೆಂಟನ ಹಾಜರಾತಿಯ ಬಗ್ಗೆ ಕಾನೂನು ಯಾವುದೇ ಸಮಯದ ಮಿತಿಯನ್ನು ನಿಗದಿಪಡಿಸಿಲ್ಲ ಹಾಗೂ ಒಂದುವೇಳೆ ಅವನು ಮತಗಟ್ಟೆಯಲ್ಲಿ ತಡವಾಗಿ ಹಾಜರಾದರೂ ಅವನನ್ನು ಮತಗಟ್ಟೆಯಲ್ಲಿ ಪ್ರಿಸೈಡಿಂಗ್ ಅಧಿಕಾರಿಯು ನಡೆಸುತ್ತಿರುವ ಇನ್ನುಳಿದ ಪೂರ್ವಭಾವಿ ಸಿದ್ಧತೆಯ ಪ್ರಕ್ರಿಯೆಗಳಲ್ಲಿ ಭಾಗವಹಿಸಲು ಅನುಮತಿಸುವರು.

**12. ಪೋಲಿಂಗ್ ಏಜೆಂಟರಿಗೆ ಬೇಕಾಗುವ ಸಾಮಗ್ರಿಗಳು.**

ನೀವು ಮತಗಟ್ಟೆಯಲ್ಲಿ ಹಾಜರಾಗುವ ಸಂದರ್ಭದಲ್ಲಿ ಈ ಕೆಳಕಂಡ ಸಾಮಗ್ರಿಗಳನ್ನು ಹೊಂದಿರತಕ್ಕದ್ದು.

(a) ನಿಮ್ಮ ನೇಮಕಾತಿ ಪತ್ರ.

(b) ಪಾಸ್‌ಪೋರ್ಟ್ ಅಳತೆಯ ಎರಡು ಕಲರ್ ಭಾವ ಚಿತ್ರಗಳು (ನೇಮಕಾತಿ ಆದೇಶದಲ್ಲಿ ಅಂಟಿಸಲು ಅವಶ್ಯ)

(c) ಅಭ್ಯರ್ಥಿಗಳು/ ರಾಜಕೀಯ ಪಕ್ಷಗಳಿಗೆ ಒದಗಿಸಿರುವ, ಪೂರಕ ಮತದಾರರ ಪಟ್ಟಿಗಳೊಂದಿಗೆ (ಯಾವುದಾದರೂ ಇದ್ದರೆ) ಮತಗಟ್ಟೆಯ ಇತ್ತೀಚಿನ ಮತದಾರರಪಟ್ಟಿಯ ಒಂದು ಯಥಾರ್ಥ ಪ್ರತಿ ಮತ್ತು ಚುನಾವಣೆ ನಡೆಸುವ ಉದ್ದೇಶಕ್ಕಾಗಿ ನಿರ್ದಿಷ್ಟವಾಗಿ ಹೊಣೆಗಾರರಾಗಿರುವ ಒಬ್ಬ ಅಧಿಕಾರಿ ಮತ್ತು ಅಧೀನ ಅಧಿಕಾರಿಯಿಂದ ಚುನಾವಣೆ ನಡೆಸುವುದಕ್ಕಾಗಿ ಚುನಾವಣಾಧಿಕಾರಿ ಇಟ್ಟುಕೊಂಡಿರುವ ಗುರುತು ಮಾಡಿರುವ ಪಟ್ಟಿಯ ಪ್ರತಿ. ಮರು ಮುದ್ರಿತ ಮೂಲ ಮತದಾರರ ಪಟ್ಟಿಯ ಅಂತಿಮ ಪ್ರಕಟಣೆಗಿಂತ ಮೊದಲು ಕರಡು ಪಟ್ಟಿಗೆ ಅನುಬಂಧವಾಗಿ ನೀಡಿರುವ ಯಾವುದೇ ಪೂರಕಪಟ್ಟಿಯಲ್ಲಿ ತೆಗೆದುಹಾಕಿರುವ ಹೆಸರುಗಳು ಇದ್ದರೆ ಅವುಗಳನ್ನು ಭಾವಚಿತ್ರವಿರದ ಎಂಟು ಕಾಲಂಗಳ ಮತದಾರರ ಪಟ್ಟಿಯಲ್ಲಿ ಹೊಡೆದುಹಾಕುವ ವಿಧಾನದ ಮತ್ತು ಭಾವಚಿತ್ರವಿರುವ ಮತದಾರರ ಪಟ್ಟಿಯಾಗಿದ್ದರೆ ಸಂಬಂಧಪಟ್ಟ ಮತದಾರನ ವಿವರಣೆಯ ಬಾಕ್ಸ್‌ನಲ್ಲಿ **"ತೆಗೆದುಹಾಕಲಾಗಿದೆ"** ಎಂದು ಸೂಚಿಸುವ ಮೂಲಕ ತೆಗೆದು ಹಾಕಿರುವುದಕ್ಕೆ ಗುರುತು ಹಾಕಿಕೊಳ್ಳುವುದರಿಂದ ಆನಂತರ ದುರುದ್ದೇಶದಿಂದ ಮಾಡಿರುವ ತೆಗೆದುಹಾಕುವಿಕೆಯನ್ನು ಪತ್ತೆಹಚ್ಚುವುದಕ್ಕೆ ನೆರವಾಗುತ್ತದೆ.

(d) ಮತದಾರರ ಪಟ್ಟಿಯಲ್ಲಿ ಸೇರಿರಬಹುದಾದ ಮೃತರಾದವರ, ಗೈರು ಹಾಜರಾಗಿರುವವರ ಅಥವಾ ಅನುಮಾನಾಸ್ಪದವೆಂದು ಆಪಾದಿಸಲಾದ, ಮತದಾರರ ಹೆಸರುಗಳಿರುವ ಒಂದು ಪಟ್ಟಿ

(e) ಎಣಿಕೆ/ ಸಂಗ್ರಹಣಾ ಕೇಂದ್ರಕ್ಕೆ ಬ್ಯಾಲೆಟ್ ಯೂನಿಟ್(ಗಳ)ನ್ನು ಸಾಗಿಸುವುದಕ್ಕೂ ಮುಂಚೆ ಅವುಗಳ ಪೆಟ್ಟಿಗೆಯ ಮೇಲೆ ನಿಮ್ಮ ಸೀಲನ್ನು ಹಾಕುವುದಕ್ಕಾಗಿ ಒಂದು ಚಿಕ್ಕ ಹಿತ್ತಾಳೆ ಸೀಲನ್ನು ಹೊಂದಿರತಕ್ಕದ್ದು.

(f) ಪೆನ್ನು, ಕಾಗದ ಮತ್ತು ಪೆನ್ಸಿಲ್.

(g) ಚುನಾವಣಾಧಿಕಾರಿಯವರು ಒದಗಿಸಿರುವಂತಹ ಮತಗಟ್ಟೆಗಳಲ್ಲಿ ಉಪಯೋಗಿಸುವ ವಿದ್ಯುನ್ಮಾನ ಮತ ಯಂತ್ರದ ಕಂಟ್ರೋಲ್ ಯೂನಿಟ್ ಮತ್ತು ಬ್ಯಾಲೆಟ್ ಯೂನಿಟ್‌ನ ವಿವರಗಳು.

(h) ಮತಗಟ್ಟೆಯೊಳಗೆ ಮತದಾರರ ಪಟ್ಟಿಯ, ನಿಮ್ಮ ಪ್ರತಿಯನ್ನು ತೆಗೆದುಕೊಂಡು ಹೋಗಲು ಹಾಗೂ ಮತದಾರನು ಮತಚಲಾಯಿಸಿದ ನಂತರ ಆ ಕುರಿತು ಗುರುತಿಸಿಕೊಳ್ಳಲು ಅನುಮತಿಸಲಾಗಿದೆ. ಆದಾಗ್ಯೂ ಯಾವುದೇ ಸಂದರ್ಭದಲ್ಲಿ **ನಿಮ್ಮ ಬಳಿ ಇರುವ ಮತದಾರರ ಪಟ್ಟಿಯನ್ನು ಮತದಾನ ನಡೆಯುತ್ತಿರುವ ಸಂದರ್ಭದಲ್ಲಿ ಮತಗಟ್ಟೆಯಿಂದ ಹೊರಗಡೆ ತೆಗೆದುಕೊಂಡು ಹೋಗುವಂತಿಲ್ಲ.** ಹಾಗೂ ಮತದಾನವು ಮುಗಿಯುವವರೆಗೂ ನೀವಾಗಲಿ ಅಥವಾ ನಿಮ್ಮ ಬದಲೀ ಏಜೆಂಟನಾಗಲಿ ಅದನ್ನು ಹೊರಗಡೆ ತೆಗೆದುಕೊಂಡು ಹೋಗುವಂತಿಲ್ಲ. ನೀವು ಮತದಾನ ಮಾಡಿರುವ ಅಥವಾ ಮಾಡದೇ ಇರುವ ಮತದಾರರ ಕ್ರಮಸಂಖ್ಯೆಯನ್ನು ಸೂಚಿಸಿರುವ ಚೀಟಿಗಳನ್ನು ಹೊರಗಡೆ ಕಳುಹಿಸಲು ಅವಕಾಶ ನೀಡಲಾಗಿದೆ.

## 13. ಮತಗಟ್ಟೆಯ ಸಮೀಪ ವೀಡಿಯೋ ಚಿತ್ರೀಕರಣ ಮಾಡುವುದು.

ಸಾಧ್ಯವಾದಷ್ಟು ಮಟ್ಟಿಗೆ ಸೂಕ್ಷ್ಮ ಮತ್ತು ಅತಿ ಸೂಕ್ಷ್ಮ ಮತಗಟ್ಟೆಗಳಲ್ಲಿ ಹಾಗೂ ಚುನಾವಣಾ ಪ್ರಕ್ರಿಯೆಯ ಕ್ಲಿಷ್ಟ ಘಟನೆಗಳನ್ನು ವೀಡಿಯೋ ಚಿತ್ರೀಕರಣ ಮಾಡಲು ಆಯೋಗವು ಸೂಚನೆಗಳನ್ನು ನೀಡಿರುತ್ತದೆ. ಈ ಹಿಂದಿನ ಸೂಚನೆಗಳಂತೆ ಮತಗಟ್ಟೆಯ ಒಳಗಡೆ ನಡೆಯುವ ಮತದಾನ ಪ್ರಕ್ರಿಯೆಯನ್ನು ಚಿತ್ರೀಕರಣಗೊಳಿಸುವಂತಿಲ್ಲ. ಆದಾಗ್ಯೂ ಘನ ಸರ್ವೋಚ್ಚ ನ್ಯಾಯಾಲಯದ ಸಲಹೆಗಳಂತೆ, ಮತಗಟ್ಟೆಯ ಒಳಗಡೆ ನಡೆಯುವ ಮತದಾನ ಪ್ರಕ್ರಿಯೆಯನ್ನೂ ಸಹ ಚಿತ್ರೀಕರಿಸಲು

ಆಯೋಗವು ನಿರ್ದೇಶನ ನೀಡಿದೆ. ಎಲ್ಲಾ ಮತಗಟ್ಟೆಗಳಲ್ಲೂ ಚಿತ್ರೀಕರಣ ನಡೆಸುವಲ್ಲಿ ಎದುರಾಗಬಹುದಾದ ತೊಂದರೆಗಳನ್ನು ದೃಷ್ಟಿಯಲ್ಲಿರಿಸಿಕೊಂಡು, ಯಾವ ಮತಗಟ್ಟೆಯಲ್ಲಿ ಚಿತ್ರೀಕರಣ ನಡೆಸುವುದು ಅವಶ್ಯಕ ಎಂದು ವೀಕ್ಷಕರು ಗಮನಿಸಿದರೆ/ ಸೂಚಿಸಿದರೆ, ಅಂತಹ ಮತಗಟ್ಟೆಗಳಲ್ಲಿ ಮಾತ್ರ ಚಿತ್ರೀಕರಣ ನಡೆಸಲು ಆಯೋಗವು ನಿರ್ಧರಿಸಿದೆ. ಆದಾಗ್ಯೂ ದೃಶ್ಯ ಚಿತ್ರೀಕರಣ ಮಾಡುತ್ತಿರುವಾಗ, ಅದು ಮತದಾನದ ಗೌಪ್ಯತೆಗೆ ಅಡ್ಡಿಯಾಗಬಾರದು, ಅಂದರೆ ಮತದಾರನು ಮತವನ್ನು ಚಲಾಯಿಸುತ್ತಿರುವುದನ್ನು ದಾಖಲು ಮಾಡದಿರುವಂತೆ ಸೂಕ್ತ ಎಚ್ಚರಿಕೆಗಳನ್ನು ನೀಡಿ ಖಚಿತ ಪಡಿಸಿಕೊಳ್ಳುವುದು. ಪ್ರಿಸೈಡಿಂಗ್ ಅಧಿಕಾರಿಯ ಜವಾಬ್ದಾರಿ ಸಾಮಾನ್ಯ ಆದೇಶವನ್ನು ನಿರ್ವಹಿಸಬೇಕಾಗಿರುವುದರಿಂದ ಮತ್ತು ಮತದಾನದ ಗೌಪ್ಯತೆಯನ್ನು ಕಾಪಾಡಿಕೊಂಡು ಬರಬೇಕಾಗಿರುವುದರಿಂದ ಮತಗಟ್ಟೆಯೊಳಗೆ ಯಾವುದೇ ಕಾರಣಕ್ಕೂ ಛಾಯಾಚಿತ್ರ ತೆಗೆಯಲು/ ದೃಶ್ಯ ಚಿತ್ರೀಕರಣವನ್ನು ಮಾಡಲು ಮಾಧ್ಯಮದ ವ್ಯಕ್ತಿಗಳಿಗೆ ಅಥವಾ ಯಾರೇ ಇತರೆ ಅನಧಿಕೃತ ವ್ಯಕ್ತಿಗಳಿಗೆ ಅವಕಾಶ ನೀಡಲಾಗುವುದಿಲ್ಲ.

## 14. ಸೂಕ್ಷ್ಮ – ಪರಿವೀಕ್ಷಕರ ನೇಮಕ.

ಒಂದು ಮುಕ್ತ ಸುಗಮವಾದ ಹಾಗೂ ಸಮಂಜಸವಾದ ಚುನಾವಣೆಯನ್ನು ನಡೆಸುವಲ್ಲಿ ಪರಿವೀಕ್ಷಕರು ಅತಿ ಪ್ರಮುಖವಾದ ಪಾತ್ರವನ್ನು ನಿರ್ವಹಿಸಬೇಕಿರುತ್ತದೆ. ವೀಕ್ಷಣೆ ನಡೆಸುವ ಪದ್ಧತಿಯನ್ನು ಬಲಪಡಿಸಲು, ಅವಶ್ಯವಿರುವ ಸ್ಥಳಗಳಿಗೆ ಸೂಕ್ಷ್ಮ– ಪರಿವೀಕ್ಷಕರನ್ನು ನೇಮಿಸಲು ಆಯೋಗವು ನಿರ್ಧರಿಸಿದೆ. ಇಂತಹ ಸೂಕ್ಷ್ಮ– ಪರಿವೀಕ್ಷಕರು, ಸಾಮಾನ್ಯ ಪರಿವೀಕ್ಷಕರ ಮೇಲ್ವಿಚಾರಣೆಯಲ್ಲಿ ನೇರವಾಗಿ ಕೆಲಸ ನಿರ್ವಹಿಸುತ್ತಾರೆ.

## 15. ಪೋಲಿಂಗ್ ಏಜೆಂಟರುಗಳು ನೇಮಕಾತಿ ಪತ್ರವನ್ನು ಹಾಜರುಪಡಿಸುವುದು

ಪ್ರತಿಯೊಬ್ಬ ಪೋಲಿಂಗ್ ಏಜೆಂಟನು, ಯಾರೇ ಅಭ್ಯರ್ಥಿಯಿಂದ ಅಥವಾ ಆತನ ಚುನಾವಣಾ ಏಜೆಂಟರಿಂದ ಪೂರ್ಣಗೊಳಿಸಿ, ಸಹಿಮಾಡಲ್ಪಟ್ಟ ಭಾವಚಿತ್ರವಿರುವ ನೇಮಕಾತಿ ಪತ್ರವನ್ನು ತನ್ನ ಸಹಿಯೊಂದಿಗೆ ಪ್ರಿಸೈಡಿಂಗ್ ಅಧಿಕಾರಿಯ ಮುಂದೆ ಹಾಜರುಪಡಿಸತಕ್ಕದ್ದು. ಪೋಲಿಂಗ್ ಏಜೆಂಟನು ಪ್ರಿಸೈಡಿಂಗ್ ಅಧಿಕಾರಿಯ ಸಮಕ್ಷಮದಲ್ಲಿ ದಾಖಲೆಯನ್ನು ಭರ್ತಿ ಮಾಡತಕ್ಕದ್ದು ಮತ್ತು ಅದರಲ್ಲಿನ ಘೋಷಣೆಗೆ ಸಹಿ ಮಾಡತಕ್ಕದ್ದು. ನಂತರ ಪ್ರಿಸೈಡಿಂಗ್ ಅಧಿಕಾರಿಯು ನಿಮ್ಮ ನೇಮಕಾತಿ ಪತ್ರವನ್ನು ತನ್ನ ಬಳಿ ಉಳಿಸಿಕೊಂಡು ನಿಮಗೆ ಮತಗಟ್ಟೆಯೊಳಗೆ ಪ್ರವೇಶಿಸಲು ಅನುಮತಿ ನೀಡುವನು.

## 16. ಪೋಲಿಂಗ್ ಏಜೆಂಟರಿಗೆ ಪಾಸುಗಳು.

ಮತಗಟ್ಟೆ ಒಳಗೆ ದಾಖಲಾದ ಮತಗಟ್ಟೆ ಏಜೆಂಟನಿಗೆ ಪ್ರಿಸೈಡಿಂಗ್ ಅಧಿಕಾರಿಯಿಂದ ಒಂದು ಪಾಸನ್ನು ನೀಡಲಾಗುತ್ತದೆ, ಅವಶ್ಯಕವಿದ್ದಲ್ಲಿ ಅದನ್ನು ತೋರಿಸಿ, ಅವನು ಮತಗಟ್ಟೆ ಒಳಗೆ ಬರಲು– ಹೊರಗೆ ಹೋಗಲು ಸಾಧ್ಯವಾಗುತ್ತದೆ.

## 17. ಪೋಲಿಂಗ್ ಏಜೆಂಟರುಗಳಿಗೆ ಬ್ಯಾಡ್ಜ್‌ಗಳು.

17.1 ಮತಗಟ್ಟೆಯ ಒಳಗೆ ಅಥವಾ ಸುತ್ತಮುತ್ತ 100 ಮೀಟರ್ ವಿಸ್ತೀರ್ಣದೊಳಗೆ, ನೀವು ಯಾವುದೇ ಪಕ್ಷದ ಮುಖಂಡನ ಭಾವಚಿತ್ರವನ್ನೊಳಗೊಂಡ ಬಿಲ್ಲೆ/ ಪದಕವನ್ನಾಗಲಿ ಅಥವಾ ಯಾವುದೇ ಬಾವುಟವನ್ನಾಗಲಿ ಅಥವಾ ಯಾವುದೇ ಪಕ್ಷದ ಚಿನ್ಹೆಯನ್ನಾಗಲಿ ಧರಿಸುವಂತಿಲ್ಲ. ಒಂದುವೇಳೆ ನೀವು ಧರಿಸಿದ್ದೇ ಆದಲ್ಲಿ ಅಂತಹ ನಿಮ್ಮ ಕೃತ್ಯವನ್ನು ಪ್ರಚಾರದ ಸಲುವಾಗಿ ಅಥವಾ ಮತದಾರರ ಮತಗಳನ್ನು ಆಕರ್ಷಿಸುವ ಸಲುವಾಗಿ ಅಥವಾ ಚುನಾವಣಾ ಸಂಬಂಧಿ ಯಾವುದೇ ನೋಟೀಸು ಅಥವಾ ಚಿನ್ಹೆಯನ್ನು (ಅಧಿಕೃತ ನೋಟೀಸುಗಳನ್ನು ಹೊರತುಪಡಿಸಿ) ಪ್ರದರ್ಶಿಸಿದಲ್ಲಿ ಅದನ್ನು ಚುನಾವಣಾ ಅಪರಾಧ (Electoral Offence) ಎಂದು (Section 32 of Karnataka Municipalities

Act 1964 ರ ಪ್ರಕಾರ) ಪರಿಗಣಿಸಲಾಗುವುದು. ಅಂತಹ ತಪ್ಪು 250 ರೂಗಳ ದಂಡಕ್ಕೆ ಶಿಕ್ಷಾರ್ಹವಾಗಿರುತ್ತದೆ. ಅಲ್ಲದೆ ಮಲತಗಟ್ಟೆಯಿಂದ ನಿಮ್ಮನ್ನು ಹೊರಹಾಕಲು ಅವಕಾಶ ಕಲ್ಪಿಸುತ್ತದೆ.

17.2 "Polling Station Neighbourhood" ಎಂದು ಕರೆಯಲ್ಪಡುವ ಮತಗಟ್ಟೆಯ ಸುತ್ತಮುತ್ತಲಿನ 100 ಮೀಟರ್ ವಿಸ್ತೀರ್ಣದೊಳಗಡೆ ಹಾಗೂ ಮತಗಟ್ಟೆಯ ಒಳಗಡೆ ಮತಗಟ್ಟೆ ಏಜೆಂಟರುಗಳು– ಸೆಲ್ಯೂಲರ್ ಫೋನುಗಳನ್ನು, ಕಾರ್ಡ್‌ಲೆಸ್ ಫೋನುಗಳನ್ನು, ವಾಯರ್ ಲೆಸ್ ಸೆಟ್ ಇತ್ಯಾದಿಗಳನ್ನು ಇಟ್ಟುಕೊಳ್ಳಲು ಅಥವಾ ಉಪಯೋಗಿಸಲು ಅನುಮತಿಸಲಾಗಿಲ್ಲ. ವೀಕ್ಷಕರು/ ಅತಿಸೂಕ್ಷ್ಮ ವೀಕ್ಷಕರು, ಪ್ರಿಸೈಡಿಂಗ್ ಅಧಿಕಾರಿ ಮೊಬೈಲ್ ಫೋನನ್ನು ಉಪಯೋಗಿಸಲು ಅನುಮತಿ ನೀಡಲಾಗಿದೆ. ಆದರೆ ಅವರುಗಳು ತಮ್ಮ ಮೊಬೈಲ್ ಫೋನುಗಳನ್ನು ನಿಶ್ಯಬ್ಧ ಸ್ಥಿತಿಯಲ್ಲಿಡತಕ್ಕದ್ದು.

## 18. ಪೋಲಿಂಗ್ ಏಜೆಂಟರಿಗೆ ಕೂರುವ ವ್ಯವಸ್ಥೆ.

18.1 ಪ್ರಿಸೈಡಿಂಗ್ ಅಧಿಕಾರಿಯು ಮತಗಟ್ಟೆ ಏಜೆಂಟರಿಗೆ ಕೂರುವ ವ್ಯವಸ್ಥೆಯನ್ನು ಮಾಡಿರುವರು ಮತ್ತು ಅಂತಹ ವ್ಯವಸ್ಥೆಯು ಹೇಗಿರುತ್ತದೆಂದರೆ ಪ್ರಿಸೈಡಿಂಗ್ ಅಧಿಕಾರಿಯು ಕೂರುವ ಸ್ಥಳದಿಂದ ಮತದಾರನನ್ನು ಗುರುತಿಸಲು ಅನುಕೂಲವಾಗುವಂತಿರಬೇಕು, (ಮತಯಂತ್ರದ ಕಂಟ್ರೋಲ್ ಯೂನಿಟ್‌ಅನ್ನು ಇಡಲಾದ) ಪ್ರಿಸೈಡಿಂಗ್ ಅಧಿಕಾರಿಯ ಟೇಬಲ್ಲಿನಲ್ಲಿ ನಡೆಯತಕ್ಕ ಕಾರ್ಯಾಚರಣೆಯನ್ನು ಗಮನಿಸುವಂತಿರಬೇಕು, ಹಾಗೂ ಮತದಾರನು ಪ್ರಿಸೈಡಿಂಗ್ ಅಧಿಕಾರಿಯ ಟೇಬಲ್ಲಿನಿಂದ ಮತದಾನದ ಜಾಗಕ್ಕೆ (Voting Compartment) (ಮತಯಂತ್ರದ ಬ್ಯಾಲೆಟ್ ಯೂನಿಟ್‌ಅನ್ನು ಇಡಲಾದ ಜಾಗ) ಹೋಗುವುದನ್ನು ಗಮನಿಸುವಂತಿರಬೇಕು. ಮತ್ತು ಅಲ್ಲಿ ಮತಚಲಾಯಿಸಿದ ನಂತರ ಮತದಾರನು ಅಲ್ಲಿಂದ ಹೊರಬರುವುದನ್ನು ಗಮನಿಸುವುದಕ್ಕೆ ಅನುಕೂಲವಾಗಿರುವಂತಿರುತ್ತದೆ.

18.2 ಆಯೋಗದ ಸೂಚನೆಗಳಂತೆ, ಈ ಕೆಳಗೆ ತೋರಿದ ವರ್ಗಗಳ ಪ್ರಾಶಸ್ತ್ಯದ ಮೇರೆಗೆ ಮತಗಟ್ಟೆ ಏಜೆಂಟರಿಗೆ ಮತಗಟ್ಟೆಯಲ್ಲಿ ಕೂರುವ ವ್ಯವಸ್ಥೆಯನ್ನು ಮಾಡಲಾಗಿರುತ್ತದೆ.

- (i) ಮಾನ್ಯತೆ ಪಡೆದ ರಾಷ್ಟ್ರೀಯ ಪಕ್ಷಗಳ ಅಭ್ಯರ್ಥಿಗಳು.
- (ii) ಮಾನ್ಯತೆ ಪಡೆದ ರಾಜ್ಯ ಪಕ್ಷಗಳ ಅಭ್ಯರ್ಥಿಗಳು.
- (iii) ಇತರೆ ರಾಜ್ಯಗಳ ಮಾನ್ಯತೆ ಪಡೆದ ರಾಜ್ಯ ಪಕ್ಷಗಳ ಅಭ್ಯರ್ಥಿಗಳು– ಯಾರಿಗೆ ಆ ಪಕ್ಷದ ಚಿನ್ಹೆಯನ್ನು ಈ ಕ್ಷೇತ್ರದಲ್ಲಿ ಉಪಯೋಗಿಸಲು ಅನುಮತಿ ನೀಡಲಾಗಿರುವದೋ ಅಂತಹ ಅಭ್ಯರ್ಥಿಗಳಿಗೆ.
- (iv) ನೋಂದಾಯಿತ ಮಾನ್ಯತೆ ಪಡೆಯದ ಪಕ್ಷಗಳ ಅಭ್ಯರ್ಥಿಗಳಿಗೆ.
- (v) ಸ್ವತಂತ್ರ ಅಭ್ಯರ್ಥಿಗಳಿಗೆ.

18.3 ನಿಮಗೆ ಕೂರಲು ಒದಗಿಸಿದ ಸ್ಥಳದಲ್ಲಿಯೇ ನೀವು ಕೂತಿರತಕ್ಕದ್ದು ಹಾಗೂ ವಿನಾಕಾರಣ ಮತಗಟ್ಟೆ ಒಳಗೆ ಓಡಾಡುವಂತಿಲ್ಲ.

18.4 ಮತಗಟ್ಟೆಯೊಳಗೆ ಧೂಮಪಾನ / ಮದ್ಯಪಾನ ಮಾಡುವಂತಿಲ್ಲ.

## 19. ಮತದಾನ ಪ್ರಾರಂಭವಾಗುವ ಮೊದಲು ಮಾಡಬೇಕಾದ ಪೂರ್ವ ಸಿದ್ಧತೆಗಳು.

19.1 ಈ ಪೂರ್ವಭಾವಿ ಸಿದ್ಧತೆಗಳನ್ನು ಮತದಾನ ಪ್ರಾರಂಭವಾಗುವುದಕ್ಕೆ ನಿಗದಿಪಡಿಸಿರುವ ಸಮಯಕ್ಕೆ ಸುಮಾರು ಒಂದು ಘಂಟೆ ಮೊದಲು ಪ್ರಿಸೈಡಿಂಗ್ ಅಧಿಕಾರಿಯು ಪ್ರಾರಂಭಿಸುತ್ತಾರೆ.

19.2 ಪ್ರಿಸೈಡಿಂಗ್ ಅಧಿಕಾರಿಯು –

(a) ಮತಗಟ್ಟೆಯಲ್ಲಿ ಹಾಜರಿರುವ ಮತಗಟ್ಟೆ ಏಜೆಂಟರು ಹಾಗೂ ಇತರೆ ವ್ಯಕ್ತಿಗಳಿಗೆ, ಮತದಾನಕ್ಕೆ ಉಪಯೋಗಿಸಲಾಗುತ್ತಿರುವ ವಿದ್ಯುನ್ಮಾನ ಮತ ಯಂತ್ರವು ಕ್ಲಿಯರ್ ಆಗಿದ್ದು ಅದರಲ್ಲಿ ಯಾವುದೇ ಮತಗಳು ದಾಖಲಾಗಿಲ್ಲ ಎಂದು ವಿವರಿಸುವರು.

(b) ವಿದ್ಯುನ್ಮಾನ ಮತ ಯಂತ್ರವು ಸರಿಯಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಮತಗಟ್ಟೆ ಏಜೆಂಟರಿಗೆ ಖಾತ್ರಿ ಪಡಿಸಲು ಅಣಕು ಮತದಾನ ನಡೆಸುವರು.

(c) ಅಣಕು ಮತದಾನ ನಡೆಸಿದ ನಂತರ ಯಂತ್ರವನ್ನು ಪುನ: ಕ್ಲಿಯರ್ ಗೊಳಿಸುವುದು. ಅಣಕು ಮತದಾನ ಪ್ರಮಾಣ ಪತ್ರವನ್ನು ತಯಾರಿಸಿ ಮತಗಟ್ಟೆ ಏಜೆಂಟರ ಸಹಿ ಪಡೆಯುತ್ತಾರೆ.

(d) ಕಂಟ್ರೋಲ್ ಯೂನಿಟ್‌ನ ರಿಸಲ್ಟ್ ಸೆಕ್ಷನ್ ವಿಭಾಗದ ಒಳ ಕವಚದಲ್ಲಿ ಹಸಿರು ಪೇಪರ್ ಸೀಲನ್ನು ಅಳವಡಿಸಲು ನೀಡಲಾದ ಜಾಗದಲ್ಲಿ ಹಸಿರು ಪೇಪರ್ ಸೀಲನ್ನು ಅಳವಡಿಸುತ್ತಾರೆ.

(e) ಕಂಟ್ರೋಲ್ ಯೂನಿಟ್‌ನ ರಿಸಲ್ಟ್ ಸೆಕ್ಷನ್‌ನ ಒಳ ಕವಚವನ್ನು ದಾರ ಹಾಗೂ ವಿಶೇಷ ಟ್ಯಾಗ್‌ನ ಸೀಲಿನೊಂದಿಗೆ ಮುಚ್ಚುತ್ತಾರೆ.

(f) ಕಂಟ್ರೋಲ್ ಯೂನಿಟ್‌ನ ರಿಸಲ್ಟ್ ಸೆಕ್ಷನ್‌ನ ಹೊರ ಕವಚವನ್ನು ದಾರದಿಂದ ಮುಚ್ಚುತ್ತಾರೆ. ಹಾಗೂ ಅಡ್ರಸ್ ಟ್ಯಾಗ್‌ನಿಂದ ಸೀಲು ಮಾಡುತ್ತಾರೆ.

(g) ರಿಸಲ್ಟ್ ಸೆಕ್ಷನ್‌ನ ಹೊರ ಕವಚವನ್ನು 'ಸ್ಟ್ರಿಪ್ ಸೀಲ್'ನಿಂದ ಮುಚ್ಚಿ ಸುರಕ್ಷಿತಗೊಳಿಸುತ್ತಾರೆ.

(h) ಹಾಜರಿರುವ ಪೋಲಿಂಗ್ ಏಜೆಂಟರು ಮತ್ತು ಇತರ ವ್ಯಕ್ತಿಗಳಿಗೆ ಮತದಾರರ ಪಟ್ಟಿಯ ಗುರುತು ಮಾಡಿರುವ ಪ್ರತಿಯು (ಮತದಾನ ಮಾಡುವುದಕ್ಕೆ ಅವಕಾಶ ನೀಡುವ ಮತದಾರರ ಹೆಸರುಗಳನ್ನು ಗುರುತು ಮಾಡಿಕೊಳ್ಳುವುದಕ್ಕೆ ಉಪಯೋಗಿಸುವ ಮತದಾರರ ಪಟ್ಟಿಯ ಪ್ರತಿ) ಅಂಚೆ ಮತಪತ್ರಗಳು ಮತ್ತು ಚುನಾವಣಾ ಕರ್ತವ್ಯ ಪ್ರಮಾಣಪತ್ರಗಳನ್ನು ನೀಡುವುದಕ್ಕೆ ಉಪಯೋಗಿಸುವುದಕ್ಕಾಗಿ ಬಳಸಿರುವವುಗಳನ್ನು ಹೊರತುಪಡಿಸಿ ಯಾವುದೇ ಇತರ ಷರಾಗಳನ್ನು ಒಳಗೊಂಡಿರುವುದಿಲ್ಲ ಮತ್ತು ಪೂರಕ ಪಟ್ಟಿಯಲ್ಲಿ ಯಾವುದೇ ತೆಗೆದುಹಾಕಿರುವ ಹೆಸರುಗಳು ಇದ್ದರೆ ಅವುಗಳನ್ನು, ಭಾವಚಿತ್ರವಿರದ ಎಂಟು ಕಾಲಂಗಳ ಮತದಾರರ ಪಟ್ಟಿಯಲ್ಲಿ ಹೊಡೆದುಹಾಕುವ ವಿಧಾನದ ಮತ್ತು ಭಾವಚಿತ್ರವಿರುವ ಮತದಾರರ ಪಟ್ಟಿಯಾಗಿದ್ದರೆ ಸಂಬಂಧಪಟ್ಟ ಮತದಾರನ ವಿವರಣೆಯ ಬಾಕ್ಸ್‌ನಲ್ಲಿ **"ತೆಗೆದುಹಾಕಲಾಗಿದೆ"** ಎಂದು ಸೂಚಿಸುವ ಮೂಲಕ ಮರು ಮುದ್ರಿತವಾದ ಮೂಲಮತದಾರರ ಪಟ್ಟಿಯಲ್ಲಿ ಅಂತಿಮ ಮುದ್ರಣವಾಗುವುದಕ್ಕಿಂತ ಮುಂಚಿತವಾಗಿ ಮನವಿಗಳು ಮತ್ತು ಆಕ್ಷೇಪಣೆಗಳನ್ನು ವಿಲೆಮಾಡಿದ ತರುವಾಯ ಸಿದ್ಧಪಡಿಸಿದ ಕರಡುಪಟ್ಟಿ ಮತ್ತು ಪೂರಕಪಟ್ಟಿಯಲ್ಲಿ ಪರಿಶಿಷ್ಟವಾಗಿ ಸೇರಿಸಲಾಗಿರುತ್ತದೆ ಎಂದು ಪ್ರದರ್ಶಿಸಿ ತೋರಿಸುವರು.

(i) ಮತದಾರರ ಪಟ್ಟಿಯು ಸಹಾಯಕ ರಿಟರ್ನಿಂಗ್ ಅಧಿಕಾರಿ ಹಾಗೂ ಮತ್ತೊಬ್ಬ ಅಧಿಕಾರಿಯಿಂದ ಸಹಿ ಮಾಡಲ್ಪಟ್ಟಿದೆ ಎಂದು ಖಾತ್ರಿ ಪಡಿಸಿಕೊಳ್ಳುವುದು.

(j) 'ಮತದಾರರ ರಿಜಿಸ್ಟರ್' (Register of Voters) (ಫಾರಂ–20A) ರಲ್ಲಿ ಈಗಾಗಲೇ ಯಾವುದೇ ದಾಖಲೆಗಳನ್ನು ನಮೂದಿಸಿಲ್ಲ ಎಂದು ಮತಗಟ್ಟೆಯಲ್ಲಿ ಹಾಜರಿರುವ ಮತಗಟ್ಟೆ ಏಜೆಂಟ್ ಹಾಗೂ ಇತರೆ ವ್ಯಕ್ತಿಗಳಿಗೆ ವಿವರಿಸುತ್ತಾರೆ.

## 20. ಮತದಾನ ಪ್ರಾರಂಭಿಸುವುದಕ್ಕೆ ಮೊದಲು ಪ್ರಿಸೈಡಿಂಗ್ ಆಫೀಸರ್‌ರವರು ವಿದ್ಯುನ್ಮಾನ ಮತಯಂತ್ರವನ್ನು ಸಿದ್ಧಪಡಿಸುವುದು.

ಮತಗಟ್ಟೆಯಲ್ಲಿ ಮತಯಂತ್ರವನ್ನು ವಾಸ್ತವವಾಗಿ ಬಳಸುವುದಕ್ಕೆ ಮೊದಲು, ರಿಟರ್ನಿಂಗ್ ಅಧಿಕಾರಿಯವರ ಹಂತದಲ್ಲಿ ಮಾಡಲಾಗಿರುವ ಸಿದ್ಧತೆಗಳ ಜೊತೆಗೆ ಮತಗಟ್ಟೆಯಲ್ಲಿ ಕೆಲವು ಸಿದ್ಧತೆಗಳನ್ನು ಮಾಡುವುದು ಅವಶ್ಯ. ಪ್ರಿಸೈಡಿಂಗ್ ಅಧಿಕಾರಿಯು ಈ ಪೂರ್ವಭಾವಿ ಸಿದ್ಧತೆಗಳನ್ನು ಮತದಾನ ಪ್ರಾರಂಭವಾಗುವುದಕ್ಕೆ ನಿಗದಿಪಡಿಸಿದ ಸಮಯಕ್ಕೆ ಸುಮಾರು ಒಂದು ಘಂಟೆ ಮೊದಲು ಪ್ರಾರಂಭಿಸುತ್ತಾರೆ. ಹಾಗಾಗಿ ನೀವು 1 ಗಂಟೆ ಮುಂಚೆ ಹಾಜರಿರಬೇಕು. ಯಾರೇ ಮತಗಟ್ಟೆ ಏಜೆಂಟ್ ಹಾಜರಾಗದಿದ್ದರೆ ಅವನು ಬರುವುದನ್ನು ಕಾಯುವ ಸಲುವಾಗಿ ಸಿದ್ಧತೆಗಳನ್ನು ಮುಂದೂಡುವುದಿಲ್ಲ, ಇಲ್ಲವೇ ಯಾರೇ ಮತಗಟ್ಟೆ ಏಜೆಂಟನು ತಡವಾಗಿ ಬಂದ ಪಕ್ಷದಲ್ಲಿ ಸಿದ್ಧತೆಗಳನ್ನು ಪುನ: ಮಾಡಲು ತೊಡಗುವುದಿಲ್ಲ.

## 21. ಬ್ಯಾಲೆಟಿಂಗ್ ಯೂನಿಟ್‌ನ ಸಿದ್ಧತೆಗಳು.

21.1 ಬ್ಯಾಲೆಟ್ ಯೂನಿಟ್ ಅನ್ನು ರಿಟರ್ನಿಂಗ್ ಅಧಿಕಾರಿಯವರ ಹಂತದಲ್ಲಿ ಈಗಾಗಲೇ ಎಲ್ಲಾ ದೃಷ್ಟಿಗಳಿಂದಲೂ ಸಿದ್ಧಪಡಿಸಲಾಗಿರುತ್ತದೆ ಮತ್ತು ಯೂನಿಟ್‌ಗಳ ನಡುವೆ ಪರಸ್ಪರ ಸಂಪರ್ಕ ಕಲ್ಪಿಸುವ ಕೇಬಲನ್ನು ಕಂಟ್ರೋಲ್ ಯೂನಿಟ್‌ಗೆ ಜೋಡಿಸುವುದನ್ನು ಬಿಟ್ಟರೆ ಮತದಾನದ ದಿನದಂದು ಮತಗಟ್ಟೆಯಲ್ಲಿ ಈ ಯೂನಿಟ್ಟನ್ನು ಮತ್ತೆ ಸಿದ್ದಪಡಿಸುವ ಅಗತ್ಯವೇನೂ ಇರುವುದಿಲ್ಲ.

21.2 ಒಂದು ಮತಗಟ್ಟೆಯಲ್ಲಿ ಒಂದಕ್ಕಿಂತ ಹೆಚ್ಚಿನ ಬ್ಯಾಲೆಟ್ ಯೂನಿಟ್‌ಗಳನ್ನು ಉಪಯೋಗಿಸಲಾಗುತ್ತಿರುವ ಸಂದರ್ಭದಲ್ಲಿ ಅಂತಹ ಎಲ್ಲಾ ಬ್ಯಾಲೆಟ್ ಯೂನಿಟ್‌ಗಳ ನಡುವೆ ಅನುಕ್ರಮವಾಗಿ ಪರಸ್ಪರ ಸಂಪರ್ಕ ಕಲ್ಪಿಸಲಾಗಿರುತ್ತದೆ. ಅಂತಹ ಸಂದರ್ಭದಲ್ಲಿ ಕೇವಲ ಮೊದಲನೆಯ ಬ್ಯಾಲೆಟ್ ಯೂನಿಟ್ ಮಾತ್ರ ಕಂಟ್ರೋಲ್ ಯೂನಿಟ್ ನೊಂದಿಗೆ ಸಂಪರ್ಕ ಹೊಂದಿರುತ್ತದೆ. ಪ್ರಿಸೈಡಿಂಗ್ ಅಧಿಕಾರಿಯು ಕಂಟ್ರೋಲ್ ಯೂನಿಟ್ ನೊಂದಿಗೆ ಬ್ಯಾಲೆಟ್ ಯೂನಿಟ್‌ಗಳನ್ನು ಸರಿಯಾಗಿ ಸಂಪರ್ಕ ನೀಡಿದ್ದಾರೆಂದು ಮತಗಟ್ಟೆ ಏಜೆಂಟನು ಖಾತ್ರಿ ಪಡಿಸಿಕೊಳ್ಳಬೇಕು. ಒಂದುವೇಳೆ ಸಂಪರ್ಕದಲ್ಲಿ ಯಾವುದೇ ದೋಷವಿದ್ದಲ್ಲಿ ತಕ್ಷಣ ಕಂಟ್ರೋಲ್ ಯೂನಿಟ್‌ನ ಡಿಸ್‌ಪ್ಲೇ ಪ್ಯಾನಲ್‌ನಲ್ಲಿ Linking Error ಎಂಬುದಾಗಿ ಸೂಚಿಸುತ್ತದೆ.

21.3 ಮತಗಟ್ಟೆ ಏಜೆಂಟನು ಈ ಕೆಳಗಿನ ವಿಷಯಗಳನ್ನು ಪರಿಶೀಲಿಸುವುದು.–

(i) ಮತಪತ್ರಗಳನ್ನು ಬ್ಯಾಲೆಟ್ ಯೂನಿಟ್‌ನ ಡಿಸ್‌ಪ್ಲೇ ಪ್ಯಾನಲ್‌ನಲ್ಲಿ ಸರಿಯಾಗಿ ಅಳವಡಿಸಲಾಗಿದೆಯೇ ಎಂದು,

(ii) ಬ್ಯಾಲೆಟ್ ಯೂನಿಟ್‌ನ ಬಲಬದಿಯ ಮೇಲೆ ಹಾಗೂ ಕೆಳಗಡೆ ರಿಟರ್ನಿಂಗ್ ಅಧಿಕಾರಿಯಿಂದ ಮಾಡಲ್ಪಟ್ಟ ಎರಡು ಸೀಲುಗಳು ಸರಿಯಾದ ಜಾಗದಲ್ಲಿವೆಯೇ ಎಂದು,

(iii) ಬ್ಯಾಲೆಟ್ ಯೂನಿಟ್‌ನ 'ಸ್ಲೈಡ್ ಸ್ವಿಚ್ಚನ್ನು' ಪಾರದರ್ಶಕ ಟೇಪಿನಿಂದ ಸುರಕ್ಷಿತಪಡಿಸಲಾಗಿದೆಯೇ ಎಂದು.

## 22. ಕಂಟ್ರೋಲ್ ಯೂನಿಟ್‌ನ ಸಿದ್ಧತೆಗಳು.

22.1 ಮೊದಲಿಗೆ ನಿಮಗೆ ಕ್ಯಾಂಡಿಡೇಟ್ ಸೆಟ್ ಸೆಕ್ಷನ್‌ಗೆ ರಿಟರ್ನಿಂಗ್ ಅಧಿಕಾರಿಯು ಹಾಕಿರುವ ಸೀಲು ಸರಿಯಾಗಿದೆಯೇ ಎಂದು ಪರಿಶೀಲಿಸಲು ಅವಕಾಶ ನೀಡಲಾಗುತ್ತದೆ.

22.2 ಪ್ರಿಸೈಡಿಂಗ್ ಅಧಿಕಾರಿಯು ಕಂಟ್ರೋಲ್ ಯೂನಿಟ್‌ನಲ್ಲಿ ಮಾಡಬೇಕಾದ ಸಿದ್ಧಗೊಳಿಸುವ ಕಾರ್ಯಗಳು ಈ ಕೆಳಗಿನಂತಿವೆ–

(i) ಬ್ಯಾಲೆಟಿಂಗ್ ಯೂನಿಟ್ ಅಥವಾ ಒಂದಕ್ಕಿಂತ ಹೆಚ್ಚು ಬ್ಯಾಲೆಟಿಂಗ್ ಯೂನಿಟ್‌ಗಳನ್ನು ಉಪಯೋಗಿಸುವಲ್ಲಿ ಮೊದಲನೆಯ ಬ್ಯಾಲೆಟಿಂಗ್ ಯೂನಿಟ್ ಮತ್ತು ಕಂಟ್ರೋಲ್ ಯೂನಿಟ್ ನಡುವೆ ಸಂಪರ್ಕ ಕಲ್ಪಿಸುವುದು ಮತ್ತು ಮೇಲೆ ವಿವರಿಸಲಾದಂತೆ ಇತರ ಬ್ಯಾಲೆಟ್ ಯೂನಿಟ್‌ಗೆ ಸಂಪರ್ಕ ಕಲ್ಪಿಸುವುದು.

(ii) ವಿದ್ಯುತ್ ಸ್ವಿಚ್ಚನ್ನು 'ಆನ್' ಸ್ಥಿತಿಗೆ ತರುವುದು.

(iii) ಮೇಲ್ಕಂಡ (1) ಮತ್ತು (2)ರಲ್ಲಿನ ಪ್ರಕ್ರಿಯೆಗಳನ್ನು ನಿರ್ವಹಿಸಿದ ತರುವಾಯ ಹಿಂದಿನ ಕಂಪಾರ್ಟ್‌ಮೆಂಟನ್ನು ಮುಚ್ಚುವುದು.

(iv) ಅಣಕು ಮತದಾನ ನಡೆಸುವುದು (ಕಂಡಿಕೆ 23.2ರಲ್ಲಿ ವಿವರಿಸಿರುವಂತೆ)

(v) ಅಣಕು ಮತದಾನ ನಡೆಸಿದ ತರುವಾಯ ಯಂತ್ರದ ಕೌಂಟ್ ಅಳಿಸಿ ಹಾಕುವುದು ಮತ್ತು ಎಲ್ಲ ಕೌಂಟ್‌ಗಳನ್ನು ಸೊನ್ನೆಗೆ ಸೆಟ್ ಮಾಡುವುದು (ಕಂಡಿಕೆ 23.1ರಲ್ಲಿ ವಿವರಿಸಿರುವಂತೆ)

(vi) ವಿದ್ಯುತ್ ಸ್ವಿಚ್ಚನ್ನು "ಆಫ್" ಸ್ಥಿತಿಗೆ ತರುವುದು

(vii) ರಿಸಲ್ಟ್ ಸೆಕ್ಷನ್ ಒಳಗಿನ ಕಂಪಾರ್ಟ್‌ಮೆಂಟನ್ನು ಸುರಕ್ಷಿತಗೊಳಿಸಲು ಗ್ರೀನ್ ಪೇಪರ್ ಸೀಲನ್ನು ಅಳವಡಿಸುವುದು (ಕಂಡಿಕೆ 24ರಲ್ಲಿ ವಿವರಿಸಿರುವಂತೆ)

(viii) ವಿಶೇಷ ಟ್ಯಾಗ್‌ನ್ನು ಅಳವಡಿಸಿ ರಿಸಲ್ಟ್ ಕಂಪಾರ್ಟಮೆಂಟಿನ ಒಳ ಬಾಗಿಲನ್ನು ಮುಚ್ಚಿ ಮೊಹರು ಹಾಕುವುದು (ಕಂಡಿಕೆ 25.1 ರಿಂದ 25.4ಗಳಲ್ಲಿ ವಿವರಿಸಿರುವಂತೆ)

(ix) ಅಡ್ರಸ್ ಟ್ಯಾಗ್ ಮತ್ತು ಸ್ಟ್ರಿಪ್ ಸೀಲ್‌ನಿಂದ ರಿಸಲ್ಟ್ ಸೆಕ್ಷನ್‌ನ ಹೊರ ಕವಚವನ್ನು ಮುಚ್ಚಿ ಮೊಹರು ಹಾಕುವುದು (ಕಂಡಿಕೆ 25.5ರಲ್ಲಿ ವಿವರಿಸಿರುವಂತೆ)

22.3 ಕಂಟ್ರೋಲ್ ಯೂನಿಟ್‌ನ ಪವರ್ ಸ್ವಿಚ್ಚನ್ನು "ಆನ್" ಸ್ಥಿತಿಗೆ ತಂದಾಗ "ಬೀಪ್" ಧ್ವನಿ ಕೇಳಿಬರುತ್ತದೆ ಮತ್ತು ಕಂಟ್ರೋಲ್ ಯೂನಿಟ್‌ನ ಡಿಸ್‌ಪ್ಲೇ ಸೆಕ್ಷನ್‌ನಲ್ಲಿರುವ "ಆನ್" ದೀಪವು ಹಸಿರು ಬಣ್ಣದಲ್ಲಿ ಬೆಳಗಲಾರಂಭಿಸುತ್ತದೆ.

22.4 ಆ ತರುವಾಯ ಪ್ರಿಸೈಡಿಂಗ್ ಅಧಿಕಾರಿಯು, ಹಿಂಬದಿಯ ಕಂಪಾರ್ಟ್‌ಮೆಂಟನ್ನು ಮುಚ್ಚತಕ್ಕದ್ದು. ಅದನ್ನು ಗಟ್ಟಿಯಾಗಿ ಮುಚ್ಚಲು, ಸಣ್ಣ ತಂತಿಯ ತುಂಡನ್ನು ಅಥವಾ ದಪ್ಪ ದಾರವನ್ನು ಆ ಉದ್ದೇಶಕ್ಕಾಗಿ ಒದಗಿಸಲಾದ ಎರಡು ರಂಧ್ರಗಳ ಮುಖಾಂತರ ಹಾಯಿಸಿ ತಂತಿಯ ತುದಿಗಳನ್ನು ಜೋಡಿಸಿ ಕೆಲವು ಸಲ ಸುತ್ತಬೇಕು. ಸಂದರ್ಭಾನುಸಾರ ಗಂಟು ಹಾಕಬೇಕು. ಮತದಾನ ಮುಕ್ತಾಯವಾದ ತರುವಾಯ ವಿದ್ಯುತ್ ಸ್ವಿಚ್ಚನ್ನು ಆಫ್ ಮಾಡಲು ಮತ್ತು ಬ್ಯಾಲೆಟಿಂಗ್ ಯೂನಿಟ್‌ಅನ್ನು ಬೇರ್ಪಡಿಸಲು ಹಿಂದಿನ ಕಂಪಾರ್ಟ್‌ಮೆಂಟನ್ನು ಪುನ: ತೆರೆಯಬೇಕಾಗುತ್ತದೆಯಾದ್ದರಿಂದ ಹಿಂದಿನ ಕಂಪಾರ್ಟ್‌ಮೆಂಟನ್ನು ಮೊಹರು ಮಾಡಿರುವುದಿಲ್ಲ ಎಂಬುದನ್ನು ನೀವು ಗಮನದಲ್ಲಿಟ್ಟುಕೊಂಡಿರಬೇಕು.

## <u>23. ಅಣಕು ಮತದಾನ ನಡೆಸುವುದು.</u>

23.1 ಮತದಾನವನ್ನು ಪ್ರಾರಂಭಿಸುವ ಮುಂಚೆ ಮತಯಂತ್ರವು ಪೂರ್ಣ ಕಾರ್ಯ ನಿರ್ವಹಣಾ ಸ್ಥಿತಿಯಲ್ಲಿದೆಯೆಂಬುದನ್ನು ಮತ್ತು ಯಂತ್ರದಲ್ಲಿ ಯಾವುದೇ ಮತಗಳನ್ನು ಈಗಾಗಲೇ ದಾಖಲು ಮಾಡಿಲ್ಲವೆಂಬುದನ್ನು ಪ್ರಿಸೈಡಿಂಗ್ ಅಧಿಕಾರಿಯು ಮನವರಿಕೆ ಮಾಡಿಕೊಳ್ಳುವುದಲ್ಲದೆ ಅಲ್ಲಿ ಹಾಜರಿರುವ ಪೋಲಿಂಗ್ ಏಜೆಂಟರಿಗೂ ಸಹ ಆ ಬಗ್ಗೆ ಮನವರಿಕೆ ಮಾಡಿಕೊಡುವರು. ಹಾಗೆ ಮನವರಿಕೆ ಮಾಡಿಕೊಳ್ಳುವುದಕ್ಕಾಗಿ ಅವರು ಮೊದಲು ಅಲ್ಲಿ ಹಾಜರಿರುವ ಎಲ್ಲರಿಗೂ 'ಕ್ಲಿಯರ್' ಬಟನ್ ಒತ್ತಿ ಎಲ್ಲಾ ಕೌಂಟ್‌ಗಳನ್ನು ಸೊನ್ನೆ ಸಂಖ್ಯೆಗೆ ಸೆಟ್ ಮಾಡಲಾಗಿದೆ ಎಂಬುದನ್ನು ತೋರಿಸುವರು. 'ಕ್ಲಿಯರ್' ಬಟನನ್ನು ಕಂಟ್ರೋಲ್ ಯೂನಿಟ್‌ನ ರಿಸಲ್ಟ್ ಸೆಕ್ಷನ್‌ನ

ಕಂಪಾರ್ಟ್‌ಮೆಂಟನಲ್ಲಿ ಒದಗಿಸಲಾಗಿರುತ್ತದೆ. ಈ ಕಂಪಾರ್ಟ್‌ಮೆಂಟನ್ನು ಒಳಬಾಗಿಲು ಮತ್ತು ಹೊರ ರಕ್ಷಾವರಣದಿಂದ ಮುಚ್ಚಲಾಗಿರುತ್ತದೆ. ಒಳಬಾಗಿಲು 'ಕ್ಲಿಯರ್' ಬಟನ್ 'ರಿಸಲ್ಟ್' ಬಟನ್ ಮತ್ತು ಪ್ರಿಂಟ್ ಬಟನ್ ಇರುವ ಕಂಪಾರ್ಟ್‌ಮೆಂಟನ್ನು ಮುಚ್ಚುತ್ತದೆ ಮತ್ತು ಹೊರ ರಕ್ಷಾವರಣವನ್ನು ಒಳಬಾಗಿಲಿನ ಮೇಲೆ ಒದಗಿಸಲಾಗಿರುತ್ತದೆ ಹಾಗೂ ಇದು ಕ್ಲೋಸ್ ಬಟನ್ ಇರುವ ಕಂಪಾರ್ಟ್‌ಮೆಂಟನ್ನು ಸಹ ಮುಚ್ಚುತ್ತದೆ. 'ಕ್ಲಿಯರ್' ಬಟನನ್ನು ಒತ್ತಲು ಅವರು ಮೊದಲು ಎಡಗಡೆ ಒದಗಿಸಲಾಗಿರುವ ಲ್ಯಾಚನ್ನು ಸ್ವಲ್ಪ ಒಳಕ್ಕೆ ಒತ್ತುವ ಮೂಲಕ ಹೊರಗಿನ ರಕ್ಷಾವರಣವನ್ನು ತೆರೆಯುವರು. ಆ ತರುವಾಯ ರಿಸಲ್ಟ್ ಮತ್ತು ಪ್ರಿಂಟ್ ಬಟನ್‌ಗಳ ಮೇಲೆ ಇರುವ ಎರಡು ಕಿಂಡಿಗಳ ಮುಖಾಂತರ ಹೆಬ್ಬೆರಳು ಹಾಗೂ ಒಂದು ಬೆರಳನ್ನು ತೂರಿಸಿ ಹಾಗೂ ಒಳಭಾಗದಲ್ಲಿರುವ ಲ್ಯಾಚ್‌ಗಳನ್ನು ಏಕಕಾಲದಲ್ಲಿ ಸ್ವಲ್ಪ ಒಳಮುಖವಾಗಿ ಒತ್ತುವ ಮೂಲಕ ಒಳಗಿನ ಬಾಗಿಲನ್ನು ತೆರೆಯಬಹುದು. 'ಕ್ಲಿಯರ್' ಬಟನ್ ಅನ್ನು ಒತ್ತಿದಾಗ ಕಂಟ್ರೋಲ್ ಯೂನಿಟ್‌ನ ಡಿಸ್‌ಪ್ಲೇ ಪ್ಯಾನಲ್‌ಗಳು ಕ್ರಮಾನುಗತವಾಗಿ ಈ ಕೆಳಕಂಡ ಮಾಹಿತಿಯನ್ನು ಡಿಸ್‌ಪ್ಲೇ ಮಾಡಲು ಪ್ರಾರಂಭಿಸುತ್ತವೆ.

DELETING
POLLED VOTES

CANDIDATE -10 — 9 ಅಭ್ಯರ್ಥಿಗಳು ಹಾಗೂ ನೋಟಾ ಸೇರಿ

TOTAL POLLED
VOTES - 0

CANDIDATE - 01
VOTES - 0

CANDIDATE - 02
VOTES - 0

CANDIDATE - 03
VOTES - 0

CANDIDATE - 04
VOTES - 0

CANDIDATE - 05
VOTES - 0

CANDIDATE - 06
VOTES - 0

CANDIDATE - 07
VOTES - 0

CANDIDATE - 08
VOTES - 0

CANDIDATE - 09
VOTES - 0

CANDIDATE-10
VOTES - 0

END

ಮುಕ್ತಾಯ

(ಪ್ರತಿಯೊಂದು ಸೂಚನೆ ತರುವಾಯ ಬೀಪ್ ಧ್ವನಿ ಕೇಳಿಬರುವುದು) (ಯಂತ್ರವನ್ನು 10 (9 ಅಭ್ಯರ್ಥಿಗಳು + NOTA ಸೇರಿ) ಅಭ್ಯರ್ಥಿಗಳಿಗೆ ಸೆಟ್ ಮಾಡಿದ್ದರೆ)

23.2 ಯಾವುದೇ ಮತಗಳು ವಿದ್ಯುನ್ಮಾನ ಮತ ಯಂತ್ರದಲ್ಲಿ ಈಗಾಗಲೇ ದಾಖಲಾಗಿಲ್ಲವೆಂದು ಮೇಲ್ಕಂಡಂತೆ ಪ್ರತ್ಯಕ್ಷವಾಗಿ ತೋರಿಸಿದ ತರುವಾಯ ಪ್ರಿಸೈಡಿಂಗ್ ಅಧಿಕಾರಿಯು ಪ್ರತಿಯೊಬ್ಬ ಅಭ್ಯರ್ಥಿಗೂ ರ‍್ಯಾಂಡಮ್ ಆಗಿ ಕೆಲವು ಮತಗಳನ್ನು ದಾಖಲು ಮಾಡುವ ಮೂಲಕ ಅಣಕು ಮಾತದಾನವನ್ನು ನಡೆಸುವರು.

ಆ ಉದ್ದೇಶಕ್ಕಾಗಿ ಪ್ರಿಸೈಡಿಂಗ್ ಅಧಿಕಾರಿಯು ಈ ಕೆಳಕಂಡ ಕಾರ್ಯಾಚರಣೆಗಳನ್ನು ನಿರ್ವಹಿಸಬೇಕಾಗಿರುತ್ತದೆ.

(ಎ) ಕಂಟ್ರೋಲ್ ಯೂನಿಟ್‌ನ ಬ್ಯಾಲೆಟ್ ಸೆಕ್ಷನ್‌ನಲ್ಲಿನ 'ಬ್ಯಾಲೆಟ್' ಬಟನ್ ಒತ್ತಬೇಕು. 'ಬ್ಯಾಲೆಟ್' ಬಟನ್ ಒತ್ತಿದ ತರುವಾಯ ಡಿಸ್‌ಪ್ಲೇ ಸೆಕ್ಷನ್‌ನಲ್ಲಿ ಬ್ಯುಸಿ ಲ್ಯಾಂಪು ಕೆಂಪಾಗಿ ಬೆಳಗಲಾರಂಭಿಸುತ್ತದೆ. ಅದೇ ಕಾಲದಲ್ಲಿ ಬ್ಯಾಲೆಟಿಂಗ್ ಯೂನಿಟ್‌ನಲ್ಲಿನ 'ರೆಡಿ' ಲ್ಯಾಂಪ್ ಸಹ ಹಸಿರಾಗಿ ಬೆಳಗಲಾರಂಭಿಸುತ್ತದೆ.

(ಬಿ) ಬ್ಯಾಲೆಟಿಂಗ್ ಯೂನಿಟ್ ಮೇಲೆ ಇರುವ ಯಾರೇ ಉಮೇದುವಾರರ ನೀಲಿ ಬಟನ್‌ನ್ನು ತನ್ನ ಇಚ್ಛಾನುಸಾರ ಒತ್ತುವಂತೆ ಹಾಜರಿರುವ ಪೋಲಿಂಗ್ ಏಜೆಂಟರಿಗೆ ಹೇಳಬೇಕು. ನೀಲಿ ಬಟನ್‌ಗಳಲ್ಲಿ (ಮುಚ್ಚಿರದ) ಪ್ರತಿಯೊಂದನ್ನು ಕನಿಷ್ಟ ಪಕ್ಷ ಒಂದು ಬಾರಿಯಾದರೂ ಒತ್ತಬೇಕು. ಇದರಿಂದ ಮುಚ್ಚಿರದ ಪ್ರತಿಯೊಂದು ಬಟನ್‌ನ್ನು ಪರೀಕ್ಷಿಸಿದಂತಾಗುತ್ತದೆ ಮತ್ತು ಅವು ಸರಿಯಾಗಿ ಕೆಲಸ ಮಾಡುತ್ತಿರುವುದನ್ನು ಖಚಿತಪಡಿಸಿಕೊಂಡಂತಾಗುತ್ತದೆ.

(ಸಿ) ಅಭ್ಯರ್ಥಿಯ ಬಟನ್ ಹಾಗೆ ಒತ್ತಿದ ತರುವಾಯ ಬ್ಯಾಲೆಟಿಂಗ್ ಯೂನಿಟ್ ಮೇಲಿರುವ 'ರೆಡಿ' ಲ್ಯಾಂಪು ಆಫ್ ಆಗುತ್ತದೆ ಮತ್ತು ಬಟನ್ ಬಳಿ ಇರುವ ಅಭ್ಯರ್ಥಿಯ ಲ್ಯಾಂಪು ಕೆಂಪಗೆ ಬೆಳಗಲಾರಂಭಿಸುತ್ತದೆ. ಅಲ್ಲದೆ ಕಂಟ್ರೋಲ್ ಯೂನಿಟ್‌ನಿಂದ ಬೀಪ್ ಧ್ವನಿ ಕೇಳಿಬರುತ್ತದೆ. ಕೆಲವು ಸೆಕೆಂಡುಗಳ ತರುವಾಯ ಅಭ್ಯರ್ಥಿಗಳ ಲ್ಯಾಂಪ್‌ನಲ್ಲಿನ ಕೆಂಪು ದೀಪ 'ಬ್ಯುಸಿ' ಲ್ಯಾಂಪ್‌ನಲ್ಲಿನ ಕೆಂಪು ದೀಪ ಮತ್ತು ಬೀಪ್ ಧ್ವನಿ ಆಫ್ ಆಗುವುದು.

ಇದರಿಂದ ಯಾವ ಉಮೇದುವಾರನ ನೀಲಿ ಬಟನ್ ಒತ್ತಲಾಗಿದೆಯೋ ಆ ಉಮೇದುವಾರನಿಗೆ ಮತವು ಕಂಟ್ರೋಲ್ ಯೂನಿಟ್‌ನಲ್ಲಿ ದಾಖಲಾಗಿದೆಯೆಂದು ಮತ್ತು ಮತಯಂತ್ರವು ಮುಂದಿನ ಮತವನ್ನು ಸ್ವೀಕರಿಸಲು ಸಿದ್ಧವಾಗಿದೆಯೆಂದು ಸೂಚಿತವಾಗುತ್ತದೆ.

(ಡಿ) ಇನ್ನುಳಿದ ಪ್ರತಿಯೊಬ್ಬ ಅಭ್ಯರ್ಥಿಗೆ ಒಂದು ಅಥವಾ ಹೆಚ್ಚು ಮತಗಳನ್ನು ದಾಖಲು ಮಾಡುವುದಕ್ಕಾಗಿ ಹಿಂದಿನ (ಎ) (ಬಿ) ಮತ್ತು (ಸಿ) ಪ್ಯಾರಾಗಳಲ್ಲಿ ವಿವರಿಸಿದ ವಿಧಾನವನ್ನು ಪುನರಾವರ್ತನೆ ಮಾಡಬೇಕು. ಪ್ರತಿಯೊಬ್ಬ ಅಭ್ಯರ್ಥಿಯ ಸಂಬಂಧದಲ್ಲಿ ಹಾಗೆ ದಾಖಲಾದ ಮತಗಳ ಲೆಕ್ಕವನ್ನು ಎಚ್ಚರಿಕೆಯಿಂದ ಇಡಬೇಕು.

(ಇ) ಮತಗಳು ಹಾಗೆ ದಾಖಲಾಗುತ್ತಿರುವಾಗ ಮತಯಂತ್ರದಲ್ಲಿ ದಾಖಲಾಗಿರುವ ಒಟ್ಟು ಮತಗಳು ಆ ಹಂತದವರೆಗೆ ದಾಖಲಾಗಿರುವ ಮತಗಳ ಸಂಖ್ಯೆಗೆ ತಾಳೆಯಾಗಿವೆಯೆಂಬುದನ್ನು ಯಾವುದೇ ಸಮಯದಲ್ಲಿ ಪರಿಶೀಲಿಸಲು ಕಂಟ್ರೋಲ್ ಯೂನಿಟ್‌ನ ಬ್ಯಾಲೆಟ್ ಸೆಕ್ಷನ್‌ನಲ್ಲಿನ 'ಟೋಟಲ್' ಬಟನ್ ಒತ್ತಬಹುದು.

**<u>ಸೂಚನೆ:</u>** 'ಟೋಟಲ್' ಬಟನ್ ಅನ್ನು ಯಾರೇ ಅಭ್ಯರ್ಥಿಗೆ ಮತವನ್ನು ದಾಖಲು ಮಾಡಿದ ತರುವಾಯ ಮತ್ತು ಡಿಸ್‌ಪ್ಲೇ ವಿಭಾಗದಲ್ಲಿ 'ಬ್ಯುಸಿ' ದೀಪ ಆಫ್ ಆದ ತರುವಾಯವೇ ಒತ್ತತಕ್ಕದ್ದು.

(ಎಫ್) ಅಣಕು ಮತದಾನದ ಕೊನೆಯಲ್ಲಿ ರಿಸಲ್ಟ್ ಸೆಕ್ಷನ್‌ನಲ್ಲಿನ 'ಕ್ಲೋಸ್' ಬಟನ್ ಒತ್ತಬೇಕು. 'ಕ್ಲೋಸ್' ಬಟನನ್ನು ಹಾಗೆ ಒತ್ತುತ್ತಿದ್ದಂತೆ ಡಿಸ್‌ಪ್ಲೇ ಸೆಕ್ಷನ್‌ನಲ್ಲಿನ ಡಿಸ್‌ಪ್ಲೇ ಪ್ಯಾನಲ್ ಕ್ರಮಾನುಗತವಾಗಿ ಈ ಕೆಳಕಂಡ ಮಾಹಿತಿಯನ್ನು ತೋರಿಸುತ್ತವೆ.

| Display | |
|---|---|
| CLOSING | |
| DTE 12-01-07<br>TME 10-34-56 | |
| SL NO - H00003 | |
| CANDIDATES<br>10 | (9 ಅಭ್ಯರ್ಥಿಗಳು + NOTA ಸೇರಿ) |
| NOTA<br>Votes - 0 | |
| TOTAL POLLED<br>VOTES - 54 | ( ಚಲಾಯಿಸಿದ ಮತಗಳ ಸಂಖ್ಯೆ 54 ಆಗಿದ್ದರೆ ) |
| POLL CLOSED | |

ಮುಕ್ತಾಯ
(ಚಲಾಯಿಸಿದ ಮತಗಳ ಸಂಖ್ಯೆ 54 ಆಗಿದ್ದರೆ)

(ಜಿ) ಈಗ ರಿಸಲ್ಟ್ ಸೆಕ್ಷನ್‌ನಲ್ಲಿ 'ರಿಸಲ್ಟ್' ಎಂದು ಗುರುತು ಮಾಡಿರುವ ಬಟನ್ ಒತ್ತಬೇಕು. ಆ ಬಟನ್ ಒತ್ತುತ್ತಿದ್ದಂತೆ ಡಿಸ್‌ಪ್ಲೇ ಪ್ಯಾನಲ್ ಕ್ರಮಾನುಗತವಾಗಿ ಈ ಕೆಳಕಂಡ ಮಾಹಿತಿಯನ್ನು ತೋರಿಸಲು ಪ್ರಾರಂಭಿಸುತ್ತವೆ.

| Display | |
|---|---|
| COMPUTING RESULT | |
| POLL RESULT<br>PDT 16-01-07 | (PDT – ಮತದಾನದ ದಿನಾಂಕ) |
| PST 09-50-20<br>PET 15-32-10 | ( PST - ಮತದಾನ ಪ್ರಾರಂಭವಾದ ಸಮಯ)<br>(PET - ಮತದಾನ ಮುಕ್ತಾಯದ ಸಮಯ) |
| SL NO. H00003 | ಕಂಟ್ರೋಲ್ ಯುನಿಟ್‌ನ ಕ್ರಮಸಂಖ್ಯೆ |
| CANDIDATE<br>10 | (9 ಅಭ್ಯರ್ಥಿಗಳು + NOTA ಸೇರಿ) |
| NOTA<br>Votes-0 | |
| TOTAL POLLED<br>VOTES-54 | ಚಲಾವಣೆಯಾದ ಮತಗಳ ಸಂಖ್ಯೆ–54 |
| CANDIDATE - 01<br>VOTES – 6 | |
| CANDIDATE - 02<br>VOTES – 6 | |
| CANDIDATE - 03<br>VOTES – 06 | |
| CANDIDATE - 04<br>VOTES – 6 | |
| CANDIDATE - 05<br>VOTES - 6 | |

| CANDIDATE - 06<br>VOTES - 6 |
|---|

| CANDIDATE - 07<br>VOTES - 6 |
|---|

| CANDIDATE - 08<br>VOTES - 6 |
|---|

| CANDIDATE - 09<br>VOTES - 6 |
|---|

| CANDIDATE-10<br>Votes-0 |
|---|

| END | ಮುಕ್ತಾಯ |
|---|---|

(ಇದು ಒಂದು ಉದಾಹರಣೆ ಮಾತ್ರ)

(ಒಂದುವೇಳೆ ಒಟ್ಟು ಚಲಾಯಿತ ಮತಗಳು 54 ಆಗಿದ್ದು, ಪ್ರತಿಯೊಬ್ಬ ಅಭ್ಯರ್ಥಿಗೂ 6ರಂತೆ ಮತಗಳನ್ನು ನೀಡಲ್ಪಟ್ಟಿದ್ದರೆ)

ಆ ತರುವಾಯ ಪ್ರಿಸೈಡಿಂಗ್ ಅಧಿಕಾರಿಯು ಅಣಕು ಮತದಾನದ ಸಮಯದಲ್ಲಿ ದಾಖಲಾದ ಮತಗಳನ್ನು ಅಳಿಸಿ ಹಾಕಲು 'ಕ್ಲಿಯರ್' ಬಟನ್ ಒತ್ತುವರು. 'ಕ್ಲಿಯರ್' ಬಟನ್ ಹಾಗೆ ಒತ್ತುತ್ತಿದ್ದಂತೆ ಡಿಸ್‌ಪ್ಲೇ ಪ್ಯಾನಲ್‌ನ ಎಲ್ಲ ಕೌಂಟ್‌ಗಳು ಮೇಲ್ಕಂಡ ಪ್ಯಾರಾ 23.1ರಲ್ಲಿ ವಿವರಿಸಿರುವಂತೆ ಸೊನ್ನೆ (0) ತೋರಿಸುತ್ತವೆ.

23.3 ಪೋಲಿಂಗ್ ಏಜೆಂಟರ ಹಾಜರಾತಿಯು, ಬೇರೊಬ್ಬನ ಮತವನ್ನು ಚಲಾಯಿಸುವುದಕ್ಕಾಗಿ ಬೇರೊಬ್ಬನ ಸೋಗುಹಾಕಿಕೊಂಡು ಬರುವ ನಕಲಿ ಮತದಾರರನ್ನು ತಡೆಯುವಲ್ಲಿ ಸಹಾಯವಾಗುವುದರಿಂದ ಮತ್ತು ಮತಗಟ್ಟೆಯಲ್ಲಿ ಬಳಸಲಾದ ವಿದ್ಯುನ್ಮಾನ ಮತಯಂತ್ರವು (ಇವಿಎಂ) ಸಮರ್ಪಕ ಕಾರ್ಯನಿರ್ವಹಣಾ ಸ್ಥಿತಿಯಲ್ಲಿದೆ ಹಾಗೂ ಅಣಕು ಮತದಾನದ ಸಮಯದಲ್ಲಿ ಚಲಾಯಿಸಲಾದ ಮತಗಳನ್ನು ಅಳಿಸಿಹಾಕಲಾಗಿದೆ ಎಂಬುದನ್ನು ಖಚಿತಪಡಿಸುವುದರಿಂದ, ಆಯೋಗವು ಪ್ರಿಸೈಡಿಂಗ್ ಆಫೀಸರ್‌ರವರು ನೀಡಬೇಕಾದ ಒಂದು ಪ್ರಮಾಣ ಪತ್ರವನ್ನು ಜಾರಿಗೆ ತಂದಿದೆ. ಈ ಪ್ರಮಾಣ ಪತ್ರವು ಹಾಜರಿರುವ ಪೋಲಿಂಗ್ ಏಜೆಂಟರ ಹೆಸರುಗಳನ್ನು ಹಾಗೂ ಅವರು ಪ್ರತಿನಿಧಿಸುವ ಅಭ್ಯರ್ಥಿಯ ಹೆಸರುಗಳನ್ನು ಸೂಚಿಸುತ್ತದೆ ಮತ್ತು ಅದರ ಮೇಲೆ ಅವರ ಸಹಿಗಳನ್ನು ಪಡೆಯಲಾಗುತ್ತದೆ. ಅಣಕು ಮತದಾನ ಪ್ರಮಾಣ ಪತ್ರದ ನಮೂನೆಯನ್ನು ಅನುಬಂಧ–VIII ರಲ್ಲಿ ನೀಡಲಾಗಿದೆ.

## 24. ಕಂಟ್ರೋಲ್ ಯೂನಿಟ್‌ನಲ್ಲಿ ಗ್ರೀನ್ ಪೇಪರ್ ಸೀಲನ್ನು ಅಳವಡಿಸುವುದು.

24.1 ಮತಪತ್ರದ ಗೌಪ್ಯತೆಯನ್ನು ಕಾಪಾಡುವ ನಿಟ್ಟಿನಲ್ಲಿ ಮತಪತ್ರಗಳನ್ನು ಮತ್ತು ಮತಪೆಟ್ಟಿಗೆಗಳನ್ನು ಉಪಯೋಗಿಸುವ ಸಾಂಪ್ರದಾಯಿಕ ಮತದಾನದ ವ್ಯವಸ್ಥೆಯಲ್ಲಿ ಮತಪೆಟ್ಟಿಗೆಗಳನ್ನು ಆಯೋಗವು ವಿಶೇಷವಾಗಿ ಮುದ್ರಿಸಿದ ಗ್ರೀನ್ ಪೇಪರ್ ಸೀಲ್ ಅಳವಡಿಸುವ ಮೂಲಕ ಮೊಹರು ಮಾಡಿ

ಭದ್ರಪಡಿಸಲಾಗುತ್ತದೆ. ಮತಪೆಟ್ಟಿಗೆಗಳಲ್ಲಿ ಒಂದು ಸಲ ಗ್ರೀನ್ ಪೇಪರ್ ಸೀಲ್ ಅಳವಡಿಸಿ ಪೆಟ್ಟಿಗೆಯ ಮುಚ್ಚಳವನ್ನು ಮುಚ್ಚಿದ ಮೇಲೆ ಗ್ರೀನ್ ಪೇಪರ್ ಸೀಲ್ ತೂತು ಮಾಡಿ ಹರಿದು ಹಾಕದ ಹೊರತು ಪೆಟ್ಟಿಗೆಯನ್ನು ತೆರೆಯಲಿಕ್ಕಾಗುವುದಿಲ್ಲ ಮತ್ತು ಅದರಲ್ಲಿರುವ ಮತಪತ್ರಗಳ ಬಗ್ಗೆ ಹಸ್ತಕ್ಷೇಪ ಮಾಡಲಿಕ್ಕಾಗುವುದಿಲ್ಲ ಅಥವಾ ಎಣಿಕೆ ಮಾಡಲು ಹೊರಗೆ ತೆಗೆಯಲಿಕ್ಕಾಗುವುದಿಲ್ಲ. ಅದೇ ಬಗೆಯ ರಕ್ಷಣಾ ವ್ಯವಸ್ಥೆಯನ್ನು ವಿದ್ಯುನ್ಮಾನ ಮತಯಂತ್ರದಲ್ಲಿ ಒದಗಿಸಲಾಗಿದೆ. ಅದರಿಂದ ಕಂಟ್ರೋಲ್ ಯೂನಿಟ್‌ನ್ನು ಒಂದು ಸಲ ಮೊಹರು ಮಾಡಿ ಮತದಾನ ಪ್ರಾರಂಭಿಸಲಾಯಿತೆಂದರೆ ಯಾರೊಬ್ಬರೂ ಮತದಾನ ವ್ಯವಸ್ಥೆಯನ್ನು ವ್ಯತ್ಯಸ್ತಗೊಳಿಸಲಿಕ್ಕಾಗದು. ಇದನ್ನು ಸಾಧಿಸಲು ಮತ್ತು ಖಚಿತಪಡಿಸಿಕೊಳ್ಳಲು ಮತಪೆಟ್ಟಿಗೆಯನ್ನು ಭದ್ರಗೊಳಿಸಲು ಉಪಯೋಗಿಸುವಂತಹ ಗ್ರೀನ್ ಪೇಪರ್ ಸೀಲನ್ನೇ ಅಳವಡಿಸಲು ಮತಯಂತ್ರದ ಕಂಟ್ರೋಲ್ ಯೂನಿಟ್‌ನಲ್ಲಿ ಅವಕಾಶ ಕಲ್ಪಿಸಲಾಗಿದೆ.

24.2 ಕಂಟ್ರೋಲ್ ಯೂನಿಟ್‌ನ ರಿಸಲ್ಟ್ ಸೆಕ್ಷನ್‌ನ ಒಳ ಕಂಪಾರ್ಟ್‌ಮೆಂಟಿನ ಬಾಗಿಲಿನ ಒಳ ಬದಿಯಲ್ಲಿ ಗ್ರೀನ್ ಪೇಪರ್ ಸೀಲ್ ಅಳವಡಿಸುವುದಕ್ಕೆ ಒಂದು ಚೌಕಟ್ಟನ್ನು ಒದಗಿಸಲಾಗಿದೆ. ಬಿಇಎಲ್, ಬೆಂಗಳೂರು ಈ ಕಂಪನಿಯು ತಯಾರಿಸಿದ ವಿದ್ಯುನ್ಮಾನ ಮತಯಂತ್ರಗಳ ವಿಷಯದಲ್ಲಿ ಒಂದು ಪೇಪರ್ ಸೀಲನ್ನು ಅಳವಡಿಸುವುದಕ್ಕೆ ಚೌಕಟ್ಟನ್ನು ಒದಗಿಸಲಾಗಿದೆ. ಅದರಂತೆ ಆ ಕಂಪನಿಯು ತಯಾರಿಸಿದ ಮತಯಂತ್ರಗಳ ಕಂಟ್ರೋಲ್ ಯೂನಿಟ್‌ಗಳಲ್ಲಿ ಒಂದು ಪೇಪರ್ ಸೀಲನ್ನು ಉಪಯೋಗಿಸಲಾಗುವುದು. ಆ ಸೀಲನ್ನು ಅದರ ಹಸಿರು ಮೇಲ್ಭಾಗ ಹೊರಗಿನಿಂದ ಕಿಂಡಿಯ ಮುಖಾಂತರ ಕಾಣುವ ಹಾಗೆ ಅಳವಡಿಸಲಾಗಿರುತ್ತದೆ.

ಯಾವುದೇ ಕಾರಣಕ್ಕೂ ಯಾವುದೇ ಹಾನಿಗೊಂಡ ಪೇಪರ್ ಸೀಲನ್ನು ಬಳಸಲು ಅವಕಾಶವಿಲ್ಲ ಮತ್ತು ಯಾವುದೇ ಪೇಪರ್ ಸೀಲ್, ಅಳವಡಿಸುವ ಸಂದರ್ಭದಲ್ಲಿ ಹಾನಿಗೊಂಡರೆ ಅದನ್ನು ಒಳಗಿನ ಕಂಪಾರ್ಟ್‌ಮೆಂಟಿನ ಬಾಗಿಲನ್ನು ಮುಚ್ಚುವ ಮುಂಚೆ ಬದಲಾಯಿಸಲಾಗುವುದು.




**ಗ್ರೀನ್ ಪೇಪರ್ ಸೀಲ್‌ನ ಮೇಲೆ ಪ್ರಿಸೈಡಿಂಗ್ ಅಧಿಕಾರಿ ಮತ್ತು ಪೋಲಿಂಗ್ ಏಜೆಂಟರ ಸಹಿಗಳು**

24.3 ಪೇಪರ್ ಸೀಲನ್ನು ಅಳವಡಿಸಿದ ತರುವಾಯ ಒಳಗಿನ ಕಂಪಾರ್ಟ್‌ಮೆಂಟಿನ ಬಾಗಿಲನ್ನು ಯುಕ್ತ ರೀತಿಯಲ್ಲಿ ಅದುಮಿ ಮುಚ್ಚಲಾಗುವುದು. ಪೇಪರ್ ಸೀಲ್‌ನ ತೆರೆದಿರುವ ಎರಡು ತುದಿಗಳು ಒಳಗಿನ ಕಂಪಾರ್ಟ್‌ಮೆಂಟಿನ ಬದಿಗಳಿಂದ ಹೊರಗೆ ಚಾಚಿಕೊಂಡಿರುವಂತೆ ಆ ಬಾಗಿಲನ್ನು ಮುಚ್ಚಲಾಗುವುದು. ಕಂಟ್ರೋಲ್ ಯೂನಿಟ್‌ನ ರಿಸಲ್ಟ್ ಸೆಕ್ಷನ್ನಿನ ಒಳ ಕಂಪಾರ್ಟ್‌ಮೆಂಟಿನ ಬಾಗಿಲಿನ ಒಳ ಬದಿಯಲ್ಲಿ ಆ ಉದ್ದೇಶಕ್ಕಾಗಿ ಒದಗಿಸಲಾದ ಚೌಕಟ್ಟಿನಲ್ಲಿ ಗ್ರೀನ್ ಪೇಪರ್ ಸೀಲನ್ನು ಅಳವಡಿಸುವುದಕ್ಕೆ ಮುಂಚೆ ಪ್ರಿಸೈಡಿಂಗ್ ಅಧಿಕಾರಿಯು ಪೇಪರ್ ಸೀಲ್‌ನ ಬಿಳಿಭಾಗದ ಮೇಲ್ಭಾಗದಲ್ಲಿ ಪೇಪರ್ ಸೀಲ್‌ನ ಕ್ರಮಸಂಖ್ಯೆಯ ಕೆಳಗೆ ತನ್ನ ಪೂರ್ಣ ಸಹಿಯನ್ನು ಮಾಡುವರು. ಅಲ್ಲಿ ಹಾಜರಿರುವ ಹಾಗೂ ತಮ್ಮ ಸಹಿಗಳನ್ನು ಹಾಕಲು ಇಚ್ಛಿಸುವ ಅಭ್ಯರ್ಥಿಗಳು ಅಥವಾ ಅವರ ಪೋಲಿಂಗ್ ಏಜೆಂಟರು ಸಹಿಗಳನ್ನು ಹಾಕಬಹುದಾಗಿದೆ.

**ಕಂಟ್ರೋಲ್ ಯೂನಿಟ್ಟಿನ ರಿಸಲ್ಟ್ ಸೆಕ್ಷನ್ನನ್ನು ಮುಚ್ಚಿ ಮೊಹರು ಮಾಡುವುದು.**

## 25. ವಿಶೇಷ ಟ್ಯಾಗ್.

25.1 ಇದು ಕೆಳಗಿನಂತೆ ಕಾಣುತ್ತದೆ:







ಗ್ರೀನ್ ಪೇಪರ್ ಸೀಲಿಗೆ ಪ್ರಿಸೈಡಿಂಗ್ ಅಧಿಕಾರಿಯ ಹಾಗೂ ನಿಮ್ಮ ಸಹಿ ಮಾಡಿ, ಸುಭದ್ರಗೊಳಿಸಿದ ನಂತರ, "ಕ್ಲಿಯರ್" ಬಟನ್ ಹಾಗೂ "ರಿಸಲ್ಟ್" ಬಟನ್‌ಗಳನ್ನೊಳಗೊಂಡ ಒಳ ಕಂಪಾರ್ಟ್‌ಮೆಂಟ್‌ನ ಬಾಗಿಲನ್ನು ಪ್ರಿಸೈಡಿಂಗ್ ಅಧಿಕಾರಿಯು ಪೇಪರ್ ಸೀಲಿನ ಎರಡು ಬಿಡಿ ತುದಿಗಳು ಒಳ ಬಾಗಿಲಿನಿಂದ ಹೊರಗಡೆ ಕಾಣುವಂತಹ ರೀತಿಯಲ್ಲಿ ಮುಚ್ಚುವರು. ನಂತರ ಇದನ್ನು ಒಂದು "ವಿಶೇಷ ಟ್ಯಾಗ್"ನೊಂದಿಗೆ ಸೀಲು ಮಾಡಬೇಕು. ಇದಕ್ಕಾಗಿ, ಪ್ರಿಸೈಡಿಂಗ್ ಅಧಿಕಾರಿಯು, ಈ ಉದ್ದೇಶಕ್ಕಾಗಿಯೇ ರಿಟರ್ನಿಂಗ್ ಅಧಿಕಾರಿಯಿಂದ ಒದಗಿಸಲ್ಪಟ್ಟ ಉತ್ಕೃಷ್ಟ ಮಟ್ಟದ ಒಂದು ಟ್ವೈನ್ ದಾರವನ್ನು ಒಳ ಬಾಗಿಲಿನಲ್ಲಿ ನೀಡಲಾದ ಎರಡು ರಂಧ್ರಗಳ ಮುಖಾಂತರ ಹಾಗೂ ವಿಶೇಷ ಟ್ಯಾಗ್‌ನ ಮುಖಾಂತರ ಹಾಯಿಸಿ ಹಾಗೂ ದಾರಕ್ಕೆ ಗಂಟನ್ನು ಹಾಕಿ, ವಿಶೇಷ ಟ್ಯಾಗ್‌ನ ಮೇಲೆ ಅರಗನ್ನು ಉಪಯೋಗಿಸಿ ಸೀಲುಮಾಡುವರು. ನಂತರ, ವಿಶೇಷ ಟ್ಯಾಗ್‌ನ ಮಧ್ಯದಲ್ಲಿ ಒಂದು ರಂಧ್ರವಿರುವುದರಿಂದ ರಿಸಲ್ಟ್ ಸೆಕ್ಷನ್‌ನ 'ಕ್ಲೋಸ್' ಬಟನ್‌ನ ಕಂಪಾರ್ಟ್‌ಮೆಂಟಿನಲ್ಲಿ ಟ್ಯಾಗನ್ನು ಫಿಕ್ಸ್ ಮಾಡಿದಾಗ 'ಕ್ಲೋಸ್' ಬಟನ್ ಕಣ್ಣಿಗೆ ಕಾಣುತ್ತಿರುತ್ತದೆ. ಇದರಿಂದ ಟ್ಯಾಗ್‌ಗೆ ಅಡಚಣೆ ಉಂಟು ಮಾಡದೆ ಗುಂಡಿಯನ್ನು ಮುಟ್ಟಿ ಕಾರ್ಯ ನಿರ್ವಹಿಸಬಹುದು.

**ಕಂಟ್ರೋಲ್ ಯೂನಿಟ್ ಸಂಖ್ಯೆ**

25.2 ವಿಶೇಷ ಟ್ಯಾಗ್ ಅನ್ನು ಬಳಸುವ ಮೊದಲು ಪ್ರಿಸೈಡಿಂಗ್ ಅಧಿಕಾರಿಯು ವಿಶೇಷ ಟ್ಯಾಗ್ ಮೇಲೆ ಕಂಟ್ರೋಲ್ ಯೂನಿಟ್‌ನ ಕ್ರಮಸಂಖ್ಯೆಯನ್ನು ದಾಖಲಿಸುವರು.

**ಸಹಿ**

25.3 ವಿಶೇಷ ಟ್ಯಾಗ್ ಮೇಲೆ ಕಂಟ್ರೋಲ್ ಯೂನಿಟ್‌ನ ಕ್ರಮಸಂಖ್ಯೆಯನ್ನು ಬರೆದ ತರುವಾಯ ಪ್ರಿಸೈಡಿಂಗ್ ಅಧಿಕಾರಿಯು ವಿಶೇಷ ಟ್ಯಾಗ್‌ನ ಹಿಂಬದಿಯಲ್ಲಿ ಸಹಿ ಮಾಡುವರು. ಮತದಾನ ಪ್ರಾರಂಭವಾಗುವ ಮುಂಚೆ ಮತಗಟ್ಟೆಯಲ್ಲಿ ಹಾಜರಿರುವ ಅಭ್ಯರ್ಥಿಗಳು/ ಪೋಲಿಂಗ್ ಏಜೆಂಟರುಗಳು ಬಯಸುವುದಾದರೆ ಹಿಂಬದಿಯಲ್ಲಿ ಅವರ ಸಹಿಗಳನ್ನು ಹಾಕುವಂತೆ ತಿಳಿಸುವರು. ಪ್ರಿಸೈಡಿಂಗ್ ಅಧಿಕಾರಿಯು ವಿಶೇಷ ಟ್ಯಾಗ್‌ನ ಮೇಲಿರುವ ಮೊದಲೇ ಮುದ್ರಿಸಿರುವ ಕ್ರಮಸಂಖ್ಯೆಯನ್ನು ಓದಿ, ಕ್ರಮಸಂಖ್ಯೆಯನ್ನು ಬರೆದುಕೊಳ್ಳುವಂತೆ ಮತಗಟ್ಟೆಯಲ್ಲಿ ಹಾಜರಿರುವ ಅಭ್ಯರ್ಥಿಗೆ/ ಪೋಲಿಂಗ್ ಏಜೆಂಟ್‌ರುಗಳಿಗೆ ತಿಳಿಸುವರು. ಯಾವುದೇ ಸಂದರ್ಭದಲ್ಲಿ ವಿಶೇಷ ಟ್ಯಾಗ್ ಹಾಳಾದರೆ ಅಥವಾ ಹರಿದುಹೋದರೆ ಮತ್ತೊಂದನ್ನು ಬಳಸಬೇಕಾಗುತ್ತದೆ. ಈ ಉದ್ದೇಶಕ್ಕಾಗಿ ರಿಟರ್ನಿಂಗ್ ಅಧಿಕಾರಿಯವರು 'ಗ್ರೀನ್ ಪೇಪರ್ ಸೀಲು'ಗಳಂತೆಯೇ 3 ಅಥವಾ 4 'ವಿಶೇಷ ಟ್ಯಾಗು'ಗಳನ್ನು ಒದಗಿಸಿರುತ್ತಾರೆ.




ದಾರದಿಂದ ಒಳಭಾಗದ ಬಾಗಿಲನ್ನು ಮುಚ್ಚಿರುವುದು




ವಿಶೇಷ ಟ್ಯಾಗ್‌ನಿಂದ ಒಳಭಾಗದ ಮೊಹರು ಮಾಡಿರುವುದು

**ರಿಸಲ್ಟ್ ಸೆಕ್ಷನ್‌ನ ಹೊರ ಕವಚವನ್ನು ಮುಚ್ಚುವುದು ಹಾಗೂ ಮೊಹರು ಮಾಡುವುದು**

25.4 ಕಂಟ್ರೋಲ್ ಯೂನಿಟ್‌ನ ರಿಸಲ್ಟ್ ಸೆಕ್ಷನ್‌ನ ಒಳ ಕಂಪಾರ್ಟ್‌ಮೆಂಟನ್ನು ಮುಚ್ಚಿ ಮೊಹರು ಮಾಡಿದ ನಂತರ ಆ ಸೆಕ್ಷನನ್ನು ಮುಚ್ಚುವುದಕ್ಕಾಗಿ ರಿಸಲ್ಟ್ ಸೆಕ್ಷನ್‌ನ ಹೊರ ಕವಚವನ್ನು ಗಟ್ಟಿಯಾಗಿ ಒತ್ತಬೇಕು. ಹೊರ ಕವಚವನ್ನು ಹಾಗೆ ಮುಚ್ಚುವುದಕ್ಕೆ ಮೊದಲು ಪೇಪರ್ ಸೀಲಿನ ಎರಡೂ ಮುಕ್ತ ತುದಿಗಳು ಹೊರ ಕವಚದ ಎರಡೂ ಬದಿಗಳಿಂದ ಹೊರ ಚಾಚಿಕೊಂಡಿರುವಂತೆ ನೋಡಿಕೊಳ್ಳಬೇಕು.

25.5 ರಿಸಲ್ಟ್ ಸೆಕ್ಷನ್‌ನ ಹೊರ ಕವಚವನ್ನು ಮುಚ್ಚಿದ ನಂತರ ಆ ಕವಚವನ್ನು (i) ಹೊರ ಕವಚದ ಎಡ ಪಾರ್ಶ್ವದಲ್ಲಿ ಈ ಉದ್ದೇಶಕ್ಕಾಗಿ ಮಾಡಿರುವ ಎರಡು ರಂಧ್ರಗಳ ಮೂಲಕ ದಾರವನ್ನು ತೂರಿಸಿ (ii) ದಾರವನ್ನು ಗಂಟುಹಾಕಿ (iii) ರಿಟರ್ನಿಂಗ್ ಅಧಿಕಾರಿ ಮಟ್ಟದಲ್ಲಿ 'ಕ್ಯಾಂಡ್ ಸೆಟ್ ಸೆಕ್ಷನ್'ಗೆ ಲಗತ್ತಿಸಿರುವಂಥದ್ದೇ ರೀತಿಯ ಲೇಬಲನ್ನು (ಅಡ್ರಸ್ ಟ್ಯಾಗ್) ಅಳವಡಿಸಿ ಮತ್ತು ದಾರವನ್ನು ಅಡ್ರಸ್ ಟ್ಯಾಗ್ ಮೇಲಿಟ್ಟು ಅರಗು ಮತ್ತು ಪ್ರಿಸೈಡಿಂಗ್ ಅಧಿಕಾರಿಯ ಮೊಹರಿನಿಂದ ಮೊಹರು ಹಾಕುವ ಮೂಲಕ ಮೊಹರು ಮಾಡುವರು. ಒಂದುವೇಳೆ ಇಚ್ಛಿಸಿದಲ್ಲಿ ಅಭ್ಯರ್ಥಿಗಳಿಗೆ ಅಥವಾ ಅವರ ಪೋಲಿಂಗ್ ಏಜೆಂಟರುಗಳಿಗೆ ಹೊರ ಕವಚದ ಮೇಲೆ ತಮ್ಮ ಸೀಲುಗಳನ್ನು ಹಾಕಲು ಅನುಮತಿಸಲಾಗುವುದು.





25.6 'ಅಡ್ರೆಸ್ ಟ್ಯಾಗ್' ಈ ಮುಂದಿನ ವಿವರಗಳನ್ನು ಒಳಗೊಂಡಿರುತ್ತವೆ.

---------------------- ಮತಕ್ಷೇತ್ರದಿಂದ

----------------------- ಗೆ ಚುನಾವಣೆ

ಕಂಟ್ರೋಲ್ ಯೂನಿಟ್ ಸಂಖ್ಯೆ ------------

ಮತಗಟ್ಟೆಯ ಕ್ರ. ಸಂ. ಮತ್ತು ಹೆಸರು ----------

ಮತದಾನದ ದಿನಾಂಕ ------------------

25.7 ರಿಟರ್ನಿಂಗ್ ಅಧಿಕಾರಿ ಮತದಾನದ ಸಾಮಗ್ರಿಗಳ ಭಾಗವಾಗಿ ಖಾಲಿ ಮುದ್ರಿತ ಅಡ್ರೆಸ್ ಟ್ಯಾಗ್‌ಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ಒದಗಿಸಿರುತ್ತಾರೆ. PRO ರವರು ನೀವು ಅಡ್ರೆಸ್ ಟ್ಯಾಗ್‌ನಲ್ಲಿ ವಿವರಗಳನ್ನು ಎಚ್ಚರಿಕೆಯಿಂದ ಭರ್ತಿ ಮಾಡಿರಬೇಕು. ಪ್ರತಿಯೊಂದು ಕಂಟ್ರೋಲ್ ಯೂನಿಟ್‌ನ ಕ್ರಮ ಸಂಖ್ಯೆಯನ್ನು ಅದರ ಕೆಳಭಾಗದಲ್ಲಿ ಬರೆಯಲಾಗಿರುತ್ತದೆ.

25.8 ಮತಗಟ್ಟೆಯಲ್ಲಿ ಹಾಜರಿರುವ ಅಭ್ಯರ್ಥಿಗಳು ಅಥವಾ ಅವರ ಪೋಲಿಂಗ್ ಏಜೆಂಟ್‌ರುಗಳು ಅಪೇಕ್ಷಿಸಿದಲ್ಲಿ ಅಡ್ರೆಸ್ ಟ್ಯಾಗ್‌ನ ಮೇಲೆ PRO ಮೊಹರಿನೊಂದಿಗೆ ಅವರ ಮೊಹರುಗಳನ್ನು ಸಹ ಹಾಕಲು ಅವರಿಗೆ ಅನುಮತಿಸುವರು.

25.9 ಒಳ ಕಂಪಾರ್ಟ್‌ಮೆಂಟ್ ಮತ್ತು ಹೊರ ಕವಚವನ್ನು ಹಾಗೆ ಮುಚ್ಚಿ ಮೊಹರು ಮಾಡುವುದರ ಮೂಲಕ ಕಂಟ್ರೋಲ್ ಯೂನಿಟ್‌ನಲ್ಲಿ ದಾಖಲಾದ ಮತಗಳನ್ನು ವ್ಯತ್ಯಾಸಗೊಳಿಸದಂತೆ ಸಂಪೂರ್ಣ ರಿಸಲ್ಟ್ ಸೆಕ್ಷನನ್ನು ಮೊಹರು ಮಾಡಿ ಭದ್ರಪಡಿಸಲಾಗುತ್ತದೆ.

## 26. ಸ್ಟ್ರಿಪ್ ಸೀಲ್.

26.1 ವಿದ್ಯುನ್ಮಾನ ಮತಯಂತ್ರಗಳಿಗೆ ಮೊಹರು ಮಾಡುವ ವ್ಯವಸ್ಥೆಗಳನ್ನು ಇನ್ನಷ್ಟು ಸುಧಾರಣೆ ಮಾಡುವುದಕ್ಕಾಗಿ ಭಾರತ ಚುನಾವಣಾ ಆಯೋಗವು ಹೊರಗಿನ ಪೇಪರ್ ಸ್ಟ್ರಿಪ್ ಸೀಲ್ (ಇನ್ನು ಮುಂದೆ "ಸ್ಟ್ರಿಪ್ ಸೀಲ್" ಎಂದು ಉಲ್ಲೇಖಿಸಲಾಗಿದೆ) ನಿಂದ ಸಂಪೂರ್ಣವಾಗಿ ಕಂಟ್ರೋಲ್ ಯೂನಿಟ್‌ನ 'ರಿಸಲ್ಟ್ ಸೆಕ್ಷನ್'ನ್ನು ಮೊಹರು ಮಾಡಲು ಹೆಚ್ಚುವರಿ ಹೊರಗಿನ ಮೊಹರು ಮಾಡುವ ವ್ಯವಸ್ಥೆಯನ್ನು ಜಾರಿಗೆ ತಂದಿದೆ. ಇದರಿಂದ ಕಂಟ್ರೋಲ್ ಯೂನಿಟ್‌ನ ಈ ಭಾಗವನ್ನು ಒಮ್ಮೆ ಮತದಾನ ಪ್ರಾರಂಭವಾದ ಮೇಲೆ ಮತ ಎಣಿಕೆಯನ್ನು ಕೈಗೊಳ್ಳುವವರೆಗೆ ತೆರೆಯಲು ಸಾಧ್ಯವಾಗುವುದಿಲ್ಲ. ಮತಗಟ್ಟೆಯಲ್ಲಿ ಮತಯಂತ್ರದಲ್ಲಿ ಮೊದಲ ಮತವನ್ನು ಚಲಾಯಿಸಿದ ಸಮಯದಿಂದ ಮತ ಎಣಿಕೆಯ ಮೇಜಿಗೆ ಮತಯಂತ್ರವನ್ನು ತರುವವರೆಗೆ, ಸ್ಟ್ರಿಪ್ ಸೀಲ್‌ನ್ನು ಹಾನಿಗೊಳಿಸದೆ ರಿಸಲ್ಟ್ ಸೆಕ್ಷನನ್ನು ತೆರೆಯಲು ಯಾರಿಗೂ ಸಾಧ್ಯವಿಲ್ಲ ಎಂಬುದು ಇದರಿಂದ ಖಚಿತವಾಗುತ್ತದೆ.

26.2 ಅದರಂತೆ ವಿದ್ಯುನ್ಮಾನ ಮತಯಂತ್ರ ಬಳಸಿ ಚುನಾವಣೆ ನಡೆಸುವ ಪ್ರತಿಯೊಂದು ಮತಗಟ್ಟೆಯಲ್ಲೂ ಕಂಟ್ರೋಲ್ ಯೂನಿಟ್‌ನ್ನು ಈ ಕೆಳಗೆ ತಿಳಿಸಿರುವಂತೆ ಸ್ಟ್ರಿಪ್ ಸೀಲ್‌ನಿಂದ ಸಂಪೂರ್ಣವಾಗಿ ಹೊರಗಡೆಯಿಂದ ಭದ್ರಪಡಿಸಿ ಮೊಹರು ಮಾಡಿರಲಾಗುತ್ತದೆ. ಹೀಗೆ ಮಾಡುವುದರಿಂದ ಸ್ಟ್ರಿಪ್ ಸೀಲನ್ನು ಹಾನಿಗೊಳಿಸದೆ ಈ ಸೆಕ್ಷನನ್ನು ತೆರೆಯಲು ಸಾಧ್ಯವಾಗುವುದಿಲ್ಲ. 'ಕ್ಲೋಸ್' ಬಟನನ್ನು ಮುಚ್ಚಿರುವ ಆದರೆ ಸ್ಟ್ರಿಪ್ ಸೀಲ್‌ನಿಂದ ಮುಚ್ಚಿರದ ರೀತಿಯಲ್ಲಿ 'ಕ್ಲೋಸ್' ಬಟನನ್ನು ಮುಚ್ಚುವ ರಬ್ಬರ್ ಕ್ಯಾಪ್‌ನ ಸ್ವಲ್ಪ ಕೆಳಗೆ 'ರಿಸಲ್ಟ್ ಸೆಕ್ಷನ್'ನ ಹೊರ ಬಾಗಿಲ ಮೇಲೆ ಈ ಸ್ಟ್ರಿಪ್ ಸೀಲ್‌ಅನ್ನು ಅಳವಡಿಸಲಾಗುವುದು.

**ಸ್ಟ್ರಿಪ್ ಸೀಲ್‌ನ ಭೌತಿಕ ಲಕ್ಷಣಗಳು:**

(1) ಸ್ಟ್ರಿಪ್ ಸೀಲ್ 23.5"(ಇಪ್ಪತ್ತಮೂರು ಪಾಯಿಂಟ್ ಐದು ಇಂಚುಗಳು) ಉದ್ದ ಮತ್ತು 1" (ಒಂದು ಇಂಚು) ಅಗಲದ ಅಳತೆಯ ಪೇಪರ್ ಸೀಲ್ ಆಗಿದೆ. ಸ್ಟ್ರಿಪ್ ಸೀಲ್‌ನ ಉದ್ದವು ಮತದಾನ ಪ್ರಾರಂಭವಾಗುವುದಕ್ಕೆ ಮೊದಲು ಮತ್ತು ಕಂಟ್ರೋಲ್ ಯೂನಿಟ್‌ನಲ್ಲಿ ಇತರೆ ಪ್ರಮಾಣಿತ ಮೊಹರುಗಳನ್ನು ಹಾಕಿದ ನಂತರ ಕಂಟ್ರೋಲ್ ಯೂನಿಟ್‌ಗೆ ಹೆಚ್ಚುವರಿ ಮೊಹರನ್ನು ಹಾಕಲು ಅವಕಾಶ ಕಲ್ಪಿಸುವುದಕ್ಕಾಗಿ ಕಂಟ್ರೋಲ್ ಯೂನಿಟ್‌ನ ಅಗಲದುದ್ದಕ್ಕೂ ಸುಲಭವಾಗಿ ಸುತ್ತುವಷ್ಟು ಇರುತ್ತದೆ.

(2) ಪ್ರತಿಯೊಂದು ಸ್ಟ್ರಿಪ್ ಸೀಲ್ ವಿಶಿಷ್ಟ ಗುರುತಿನ ಸಂಖ್ಯೆಯನ್ನು ಹೊಂದಿರುತ್ತದೆ (Unique Identity Number).

(3) ಈ ಸ್ಟ್ರಿಪ್ ಸೀಲ್‌ಗಳನ್ನು ಆಯೋಗದಿಂದ ಯಥೋಚಿತವಾಗಿ ಅನುಮೋದಿತವಾದ ಸಂಸ್ಥೆಯು ಪೂರೈಸಿರುತ್ತದೆ.

(4) ಸ್ಟ್ರಿಪ್ ಸೀಲ್‌ನ ಎರಡೂ ತುದಿಗಳಲ್ಲಿ ಮೊದಲೇ ಗೋಂದು ಹಚ್ಚಿರುವಂಥ ನಾಲ್ಕು (4) ಭಾಗಗಳಿರುತ್ತವೆ. ಅವುಗಳಲ್ಲಿ ಮೂರು ಒಂದು ಚದರ ಇಂಚು ವಿಸ್ತೀರ್ಣ ಇರುತ್ತವೆ (‘ಎ’ ‘ಬಿ’ ಮತ್ತು ‘ಸಿ’ ಅಕ್ಷರಗಳಿಂದ ಗುರುತಿಸಲಾಗಿರುತ್ತದೆ) ಮತ್ತು ಒಂದು, ಎರಡು ಚದರ ಇಂಚು ವಿಸ್ತೀರ್ಣ ಇರುತ್ತದೆ (ಡಿ ಅಕ್ಷರದಿಂದ ಗುರುತಿಸಲಾಗಿರುತ್ತದೆ). ಪ್ರತಿಯೊಂದು ಗೋಂದಿನ ಭಾಗವನ್ನು ವ್ಯಾಕ್ಸ್ ಪೇಪರ್‌ನ ಸ್ಟ್ರಿಪ್‌ನಿಂದ ಮುಚ್ಚಲಾಗಿರುತ್ತದೆ.

(5) ಸ್ಟ್ರಿಪ್ ಸೀಲ್ ಒಳಭಾಗ ಮತ್ತು ಹೊರಭಾಗವನ್ನು ಹೊಂದಿರುತ್ತದೆ. ಸ್ಟ್ರಿಪ್‌ನ ಒಳಭಾಗದ ಒಂದು ಕೊನೆಯಲ್ಲಿ ‘ಎ’ ಮತ್ತು ‘ಬಿ’ ಅಕ್ಷರಗಳಿಂದ ಗುರುತಿಸಲಾಗಿರುವ ಮೊದಲೇ ಗೋಂದು ಹಚ್ಚಿದ ಅಕ್ಕಪಕ್ಕ ಇರುವ ಎರಡು ಭಾಗಗಳಿರುತ್ತವೆ. ಸ್ಟ್ರಿಪ್‌ನ ಒಳಭಾಗದ ಮತ್ತೊಂದು ಕೊನೆಯಲ್ಲಿ ‘ಡಿ’ ಎಂದು ಗುರುತು ಮಾಡಿರುವ ಮೊದಲೇ ಗೋಂದು ಹಚ್ಚಿದ ಭಾಗವು ಸುಮಾರು 2’ (ಎರಡು ಇಂಚು)ಗಳಷ್ಟಿರುತ್ತದೆ. ಸ್ಟ್ರಿಪ್‌ನ ಹೊರಭಾಗದಲ್ಲಿ ‘ಸಿ’ ಎಂದು ಗುರುತು ಮಾಡಿರುವ ಒಂದೇ ಒಂದು ಮೊದಲೇ ಗೋಂದು ಹಚ್ಚಿದ ಭಾಗವಿರುತ್ತದೆ. ಸ್ಟ್ರಿಪ್ ಸೀಲ್‌ನ ಒಳಭಾಗ ಮತ್ತು ಹೊರಭಾಗವನ್ನು ತೋರಿಸುವ ನಕ್ಷೆಯನ್ನು ಈ ಮುಂದೆ ನೀಡಲಾಗಿದೆ. ಕಪ್ಪುಬಣ್ಣದ ಭಾಗಗಳು ಸ್ಟ್ರಿಪ್ ಒಳಭಾಗ ಮತ್ತು ಹೊರಭಾಗಗಳಲ್ಲಿ ಗೋಂದು ಹಚ್ಚಿದ ಭಾಗಗಳಾಗಿವೆ.




<u>ಗ್ರೀನ್ ಪೇಪರ್ ಸೀಲ್ ಅನ್ನು ಅಳವಡಿಸುವಲ್ಲಿ ಪ್ರಮುಖ ಬದಲಾವಣೆ.</u>

26.3 ಗ್ರೀನ್ ಪೇಪರ್ ಸೀಲನ್ನು ಮಡಚುವ ಪದ್ಧತಿಯಲ್ಲಿ ಈಗ ಈ ಪ್ರಮುಖವಾದ ಬದಲಾವಣೆ ಇದೆ. ಗ್ರೀನ್ ಪೇಪರ್ ಸೀಲನ್ನು ಅಳವಡಿಸಿದ ತರುವಾಯ ರಿಸಲ್ಟ್ ವಿಭಾಗದ ಒಳಗಿನ ಹಾಗೂ ಹೊರಗಿನ ಎರಡೂ ಕವಚಗಳನ್ನು ಮುಚ್ಚಲಾಗುತ್ತದೆ. ಹೀಗೆ ಮಾಡುವಾಗ ಗ್ರೀನ್ ಪೇಪರ್ ಸೀಲಿನ ಎರಡೂ ಬಿಡಿ ತುದಿಗಳು ರಿಸಲ್ಟ್ ವಿಭಾಗದ ಮೇಲಿನ ಹೊರಕವಚದ ಎರಡೂ ಬದಿಯಲ್ಲಿ ಕಾಣುವಂತಿರುತ್ತದೆ.

**ಸ್ಟ್ರೀಪ್ ಸೀಲ್ ಬಳಸುವುದೂ ಸೇರಿದಂತೆ ಕಂಟ್ರೋಲ್ ಯೂನಿಟ್‌ಅನ್ನು ಮೊಹರು ಮಾಡುವ ಸಂಪೂರ್ಣ ವಿಧಾನ:**

26.4 ಸುಲಭವಾಗಿ ಅರ್ಥಮಾಡಿಕೊಳ್ಳುವುದಕ್ಕಾಗಿ ಸ್ಟ್ರಿಪ್ ಸೀಲನ್ನು ಅಳವಡಿಸುವವರೆಗೆ ಮತ್ತು ಅಳವಡಿಸುವುದೂ ಸೇರಿದಂತೆ ಮತಗಟ್ಟೆಯಲ್ಲಿ ಪ್ರಿಸೈಡಿಂಗ್ ಅಧಿಕಾರಿ ಕೈಗೊಳ್ಳುವ ಕ್ರಮಗಳ ಸಂಪೂರ್ಣ ಕ್ರಮಾನುಗತಿಯನ್ನು ಈ ಕೆಳಗೆ ನೀಡಲಾಗಿದೆ:

(1) ವಾಸ್ತವಿಕ ಮತದಾನವನ್ನು ಪ್ರಾರಂಭಿಸುವುದಕ್ಕೂ ಮುಂಚೆ ಪ್ರಿಸೈಡಿಂಗ್ ಅಧಿಕಾರಿಯು ಅಣಕು ಮತದಾನವನ್ನು ನಡೆಸುವರು.

(2) ಅಣಕು ಮತದಾನವನ್ನು ನಡೆಸಿ ಫಲಿತಾಂಶವನ್ನು ತೋರಿಸಿದ ನಂತರ ಪ್ರಿಸೈಡಿಂಗ್ ಅಧಿಕಾರಿಯು 'ಕ್ಲಿಯರ್' ಬಟನನ್ನು ಒತ್ತುವ ಮೂಲಕ ಅಣಕು ಮತದಾನದ ಸಂದರ್ಭದಲ್ಲಿ ಕಂಟ್ರೋಲ್ ಯೂನಿಟ್‌ನಲ್ಲಿ ದಾಖಲಾಗಿರುವ ಅಂಕಿ ಅಂಶಗಳನ್ನು ಅಳಿಸಿಹಾಕುವರು.

(3) ಹಾಗೆ ಅಳಿಸಿ ಹಾಕಿದ ನಂತರ ಪ್ರಿಸೈಡಿಂಗ್ ಅಧಿಕಾರಿಯು ಕಂಟ್ರೋಲ್ ಯೂನಿಟ್‌ನ್ನು ಸ್ವಿಚ್ ಆಫ್ ಮಾಡಿ ರಿಸಲ್ಟ್ ಸೆಕ್ಷನ್‌ನ ಒಳ ಬಾಗಿಲಿನ ಕಿಟಕಿಗಳು ಮುಚ್ಚಿಕೊಳ್ಳುವಂತೆ ಗ್ರೀನ್ ಪೇಪರ್ ಸೀಲನ್ನು ತೂರಿಸುವರು. ಗ್ರೀನ್ ಪೇಪರ್ ಸೀಲನ್ನು ಒಳಗೆ ತೂರಿಸುವಾಗ ಅದನ್ನು ಮುಚ್ಚಿದ ನಂತರ ಸೀಲ್‌ನ ಹಸಿರು ಭಾಗವು ಒಳದ್ವಾರದ ಕಿಟಕಿಗಳ ಮೂಲಕ ಕಣ್ಣಿಗೆ ಕಾಣುವಂತೆ ಮಾಡಲು ಎಚ್ಚರಿಕೆ ವಹಿಸುವುದು ಅವಶ್ಯ.

(4) ಗ್ರೀನ್ ಪೇಪರ್ ಸೀಲುಗಳನ್ನು ಒಳ ಸೇರಿಸಿದ ನಂತರ ರಿಸಲ್ಟ್ ಬಟನ್‌ಗಳ ಮೇಲಿನ ಒಳಬಾಗಿಲನ್ನು ಮುಚ್ಚಲಾಗುವುದು.

(5) ನಂತರ ರಿಸಲ್ಟ್ ಸೆಕ್ಷನ್‌ನ ಒಳಬಾಗಿಲನ್ನು ವಿಶೇಷ ಟ್ಯಾಗಿನಿಂದ ಮೊಹರು ಮಾಡಬೇಕು.

(6) ವಿಶೇಷ ಟ್ಯಾಗನ್ನು ಅಳವಡಿಸಿದ ನಂತರ ಗ್ರೀನ್ ಪೇಪರ್ ಸೀಲ್‌ನ ಮುಕ್ತ ತುದಿಗಳು ಮುಚ್ಚಲಾದ ಹೊರಬಾಗಿಲಿನ ಎರಡೂ ಕಡೆಗಳಿಂದ ಹೊರ ಚಾಚಿಕೊಂಡಿವೆ ಎಂಬುದನ್ನು ಖಚಿತಪಡಿಸಿಕೊಂಡು ರಿಸಲ್ಟ್ ಸೆಕ್ಷನ್‌ನ ಹೊರಬಾಗಿಲನ್ನು ಮುಚ್ಚಲಾಗುವುದು.

(7) ನಂತರ ಪ್ರಿಸೈಡಿಂಗ್ ಅಧಿಕಾರಿಯು ದಾರ ಹಾಗೂ ವಿಳಾಸದ ಟ್ಯಾಗಿನಿಂದ ಹೊರಬಾಗಿಲನ್ನು ಮೊಹರು ಮಾಡುವರು.

(8) ನಂತರ ಅವರು, ಸಂಪೂರ್ಣವಾಗಿ ಹೊರಭಾಗದಿಂದ ರಿಸಲ್ಟ್ ಸೆಕ್ಷನ್‌ನ್ನು ಮೊಹರು ಮಾಡಲು ಕಂಟ್ರೋಲ್ ಯೂನಿಟ್‌ನ ಸುತ್ತಲೂ ಸ್ಟ್ರಿಪ್ ಸೀಲನ್ನು ಅಳವಡಿಸಲು ಮುಂದಾಗಬೇಕು. ಹೀಗೆ ಮಾಡುವುದರಿಂದ ಈ ಸೆಕ್ಷನನ್ನು ಮತದಾನ ಪ್ರಾರಂಭವಾದ ನಂತರ ಸ್ಟ್ರಿಪ್ ಸೀಲ್‌ನ್ನು ಹಾನಿಗೊಳಿಸದೆ ತೆರೆಯಲು ಸಾಧ್ಯವಿರುವುದಿಲ್ಲ. ನಂತರ ಸ್ಟ್ರಿಪ್ ಸೀಲ್‌ನ್ನು 'ಕ್ಲೋಸ್' ಬಟನ್‌ನ ಸ್ವಲ್ಪ ಕೆಳಗೆ ಇರಿಸಬೇಕು. ಬಿಇಎಲ್ ತಯಾರಿಸಿರುವ ಯಂತ್ರಗಳಿಗೆ ಸ್ಟ್ರಿಪ್ ಸೀಲನ್ನು ಅಳವಡಿಸುವ ವಿವರವಾದ ವಿಧಾನವನ್ನು ಈ ಕೆಳಗೆ ನೀಡಲಾಗಿದೆ.

## 27. ಸ್ಟ್ರಿಪ್ ಸೀಲ್‌ನಿಂದ ಬಿಇಎಲ್ ತಯಾರಿಸಿರುವ ಯಂತ್ರಗಳನ್ನು ಮೊಹರು ಮಾಡುವ ವಿಧಾನ

**ಕ್ರಮ 1:** ಬಾಗಿಲಿನ ಒಳ ತುದಿಯಿಂದ ಮುಂದಕ್ಕೆ ಚಾಚಿಕೊಂಡಿರುವ ಗ್ರೀನ್ ಪೇಪರ್ ಸೀಲ್‌ನ ಬೇಸ್ ಬಳಿ, ಮೊದಲೇ ಗೋಂದು ಹಾಕಿದ ಸ್ಟ್ರಿಪ್ ಸೀಲಿನ 'ಎ' ಭಾಗ ಬರುವಂತೆ ಪ್ರಿಸೈಡಿಂಗ್ ಅಧಿಕಾರಿಯು ಸ್ಟ್ರಿಪ್ ಸೀಲ್‌ನ್ನು ಇಡಬೇಕು. 'ಎ' ಭಾಗದ ಮೇಲಿರುವ ವ್ಯಾಕ್ಸ್ ಪೇಪರನ್ನು ತೆಗೆಯಬೇಕು. ಅನಂತರ ಗೋಂದು ಹಾಕಿದ 'ಎ' ಭಾಗದ ಮೇಲೆ ಗ್ರೀನ್ ಪೇಪರ್ ಸೀಲಿನ ಒಳಪದರವನ್ನು ಇಟ್ಟು ಅದುಮಿ ಗ್ರೀನ್ ಪೇಪರ್ ಸೀಲಿನ ಹೊರ ಪದರವನ್ನು ಹೊರ ಬಾಗಿಲಿನ ಕೆಳಭಾಗದಿಂದ ಮುಂಚಾಚುವ ಒಳ ಪದರದ ಮೇಲೆ ಇಡಬೇಕಾಗುವುದು.



**ಕ್ರಮ 2:** ಮೊದಲೇ ಗೋಂದು ಹಾಕಿದ 'ಬಿ' ಭಾಗದ ಮೇಲಿನ ವ್ಯಾಕ್ಸ್ ಪೇಪರನ್ನು ತೆಗೆದು ಹೊರಬಾಗಿಲಿನ ಕೆಳಭಾಗದಿಂದ ಮುಂಚಾಚಿರುವ ಗ್ರೀನ್ ಪೇಪರ್ ಸೀಲಿನ ಹೊರ ಪದರದ ಮೇಲೆ ಈ ಮೊದಲೇ ಗೋಂದು ಹಾಕಿದ 'ಬಿ' ಭಾಗವನ್ನು ಇಟ್ಟು ಒತ್ತುವರು.



ಗ್ರೀನ್ ಪೇಪರ್ ಸೀಲಿನ ಮೇಲೆ 'ಬಿ' ಭಾಗವನ್ನು ಅಂಟಿಸಿದ ನಂತರ ಮೊದಲೇ ಗೋಂದು ಹಾಕಿದ 'ಸಿ' ಭಾಗವು ಮೇಲಿನ ಸ್ಥಾನಕ್ಕೆ ಬರುತ್ತದೆ.



**ಕ್ರಮ 3:** ಪ್ರಿಸೈಡಿಂಗ್ ಅಧಿಕಾರಿಯು ಮೊದಲೇ ಗೋಂದು ಹಾಕಿರುವ 'ಸಿ' ಭಾಗದ ಮೇಲಿನ ವ್ಯಾಕ್ಸ್ ಪೇಪರನ್ನು ತೆಗೆದು, ಗ್ರೀನ್ ಪೇಪರ್ ಸೀಲಿನ ಒಳಪದರ 'ಸಿ'ಗೆ ಗಟ್ಟಿಯಾಗಿ ಅಂಟಿಕೊಳ್ಳುವ ಹಾಗೆ ಹೊರಬಾಗಿಲಿನ ಮೇಲ್ಭಾಗದಿಂದ ಹೊರಚಾಚಿರುವ ಗ್ರೀನ್ ಪೇಪರ್ ಸೀಲಿನ ಎರಡೂ ತುದಿಗಳನ್ನು ಒತ್ತುವರು.





**ಕ್ರಮ 4:** ಸ್ಟ್ರಿಪ್ ಸೀಲ್‌ನ ಉಳಿದ ಭಾಗ 'ಕ್ಲೋಸ್' ಬಟನ್ನು ಮುಚ್ಚಿಕೊಳ್ಳುವ ರಬ್ಬರ್ ಮುಚ್ಚಳಿಕೆಯ ಕೆಳಗೆ ಹಾದುಹೋಗುವ ಹಾಗೆ ಎಚ್ಚರಿಕೆ ವಹಿಸಿ, ಎಡಭಾಗದಿಂದ ಕಂಟ್ರೋಲ್ ಯೂನಿಟ್‌ನ ಸುತ್ತಲೂ ತಂದು ಮೊದಲೇ ಗೋಂದು ಹಾಕಿರುವ 'ಎ', 'ಬಿ' ಮತ್ತು 'ಸಿ' ಭಾಗಗಳನ್ನು ಅಂಟಿಸಲಾಗಿರುವ ಕಂಟ್ರೋಲ್ ಯೂನಿಟ್‌ನ ಹೊರ ಬಾಗಿಲ ತುದಿಯಲ್ಲಿ ಕಂಟ್ರೋಲ್ ಯೂನಿಟ್‌ನ ಬಲಭಾಗದಿಂದ ಸ್ಟ್ರಿಪ್ ಸೀಲ್‌ನ ಮತ್ತೊಂದು ತುದಿಯನ್ನು ತರುವರು.





**ಕ್ರಮ 5:** ಈಗ ಪ್ರಿಸೈಡಿಂಗ್ ಅಧಿಕಾರಿಯು ಮೊದಲೇ ಗೋಂದು ಹಾಕಿರುವ ಭಾಗ 'ಡಿ'ಯನ್ನು ಮುಚ್ಚಿರುವ ವ್ಯಾಕ್ಸ್ ಪೇಪರನ್ನು ತೆಗೆದು ಅದನ್ನು ಹೊರ ಬಾಗಿಲ ಮೇಲ್ಭಾಗದಿಂದ ಹೊರಚಾಚಿರುವ ಗ್ರೀನ್ ಪೇಪರ್ ಸೀಲಿನ ಹೊರ ಪದರದ ಮೇಲೆ ಇಟ್ಟು ಗಟ್ಟಿಯಾಗಿ ಒತ್ತಿ ಮೊದಲೇ ಗೋಂದು ಹಾಕಲಾದ 'ಡಿ' ಭಾಗ 'ಕ್ಲೋಸ್' ಬಟನ್ ನ ಕೆಳಗಿರುವ ಸ್ಟ್ರಿಪ್ ಸೀಲ್‌ನ ಮೇಲೆ ಚಾಚಿಕೊಂಡಿರುತ್ತದೆ, ಚಾಚಿಕೊಂಡಿರುವ 'ಡಿ' ಭಾಗವನ್ನು ಸ್ಟ್ರಿಪ್ ಸೀಲ್‌ನ ಮೇಲೆ ಇಟ್ಟು ಗಟ್ಟಿಯಾಗಿ ಒತ್ತುವರು.



ಮೇಲ್ಕಂಡ ಪ್ರಕ್ರಿಯೆಯ ಮೂಲಕ ಹೊರಬಾಗಿಲ ಎರಡೂ ಕಡೆಗಳಿಂದ ಹೊರಚಾಚಿಕೊಂಡಿರುವ ಗ್ರೀನ್ ಪೇಪರ್ ಸೀಲ್‌ನ ಎರಡು ಮುಕ್ತ ತುದಿಗಳನ್ನು ಗಟ್ಟಿಯಾಗಿ ಅಂಟಿಸಿ, ಸ್ಟ್ರಿಪ್ ಸೀಲ್‌ನಿಂದ ಭದ್ರಪಡಿಸಿದಂತಾಗುತ್ತದೆ. ಅದೇ ಸಮಯದಲ್ಲಿ ರಿಸಲ್ಟ್ ಸೆಕ್ಷನ್ ಮೇಲಿನ ಹೊರ ಬಾಗಿಲನ್ನು ಸಹ ಎಲ್ಲ ಕಡೆಗಳಿಂದ ಈ ಸ್ಟ್ರಿಪ್ ಸೀಲನ್ನು ಮೊಹರು ಮಾಡಿ ಈಗ ಈ ಸೀಲನ್ನು ಹಾನಿಗೊಳಿಸದೆ ಈ ಸೆಕ್ಷನನ್ನು ತೆರೆಯಲಾಗುವುದಿಲ್ಲ.

## ಸ್ಟ್ರಿಪ್ ಸೀಲ್‌ಅನ್ನು ಅಳವಡಿಸಿದ ನಂತರ

ಸ್ಟ್ರಿಪ್ ಸೀಲ್‌ನಿಂದ ಕಂಟ್ರೋಲ್ ಯೂನಿಟ್‌ಅನ್ನು ಮೊಹರು ಮಾಡಿದ ತರುವಾಯ ಪ್ರಿಸೈಡಿಂಗ್ ಅಧಿಕಾರಿಯು ಮತದಾನದ ಸಮಯದಲ್ಲಿ ಸ್ಟ್ರಿಪ್ ಸೀಲ್‌ಗೆ ಹಾನಿಯಾಗದ ಹಾಗೆ ಅಥವಾ ಅದರ ಬಗ್ಗೆ ಹಸ್ತಕ್ಷೇಪ ಮಾಡದ ಹಾಗೆ ಎಚ್ಚರಿಕೆ ವಹಿಸುವರು ಮತ್ತು ಮತಗಟ್ಟೆಯಲ್ಲಿ ಮತದಾನದ ಸಮಯದಲ್ಲಿ ಅಥವಾ ಮತದಾನದ ನಂತರ ಈ ಸೀಲನ್ನು ತೆಗೆಯುವುದಿಲ್ಲ.

ನಿರ್ದಿಷ್ಟಪಡಿಸಿದ ಸಮಯದಲ್ಲಿ ಮತದಾನ ಕೊನೆಯಲ್ಲಿ, ಪ್ರಿಸೈಡಿಂಗ್ ಅಧಿಕಾರಿಯು ಸ್ಟ್ರಿಪ್ ಸೀಲ್‌ಗೆ ತೊಂದರೆಯಾಗದಂತೆ 'ಕ್ಲೋಸ್' ಬಟನ್‌ನ ಮೇಲಿರುವ ಮುಚ್ಚಳವನ್ನು ತೆಗೆದು ಮತದಾನವನ್ನು ಮುಕ್ತಾಯಗೊಳಿಸಲು 'ಕ್ಲೋಸ್' ಬಟನನ್ನು ಒತ್ತುವರು ಹಾಗೂ ಮುಚ್ಚಳವನ್ನು ಮತ್ತೆ ಹಾಗೇ ಇಡುವುದು. ಮತದಾನದ ಕೊನೆಯಲ್ಲಿ ಇತರೆ ಔಪಚಾರಿಕತೆಗಳನ್ನು ಪೂರ್ಣಗೊಳಿಸಿದ ನಂತರ, ಪ್ರಿಸೈಡಿಂಗ್ ಅಧಿಕಾರಿಯು ಕಂಟ್ರೋಲ್ ಯೂನಿಟ್‌ನ್ನು ಒಯ್ಯುವ ಪೆಟ್ಟಿಗೆಯಲ್ಲಿ ಇಟ್ಟು ಎಚ್ಚರಿಕೆಯಿಂದ ಭದ್ರಪಡಿಸಿ ಅಡ್ರೆಸ್ ಟ್ಯಾಗ್‌ನೊಂದಿಗೆ ಒಯ್ಯುವ ಪೆಟ್ಟಿಗೆಯನ್ನು ಸೀಲ್ ಮಾಡುವರು ಈ ಮೊಹರು ಮಾಡಿದ ಒಯ್ಯುವ ಪೆಟ್ಟಿಗೆಯನ್ನು ಮತಎಣಿಕೆ ಕೇಂದ್ರಕ್ಕೆ ತಲುಪಿಸುವರು.

ಮತ ಎಣಿಕೆ ಮಾಡುವ ದಿವಸ, ಸ್ಟ್ರಿಪ್ ಸೀಲ್‌ನಿಂದ ಭದ್ರವಾಗಿರುವ ಕಂಟ್ರೋಲ್ ಯೂನಿಟ್‌ನ್ನು ಎಣಿಕೆ ಮೇಜಿನಲ್ಲಿ ಹಾಜರಿರುವ ಅಭ್ಯರ್ಥಿಗಳು/ ಎಣಿಕೆ ಏಜೆಂಟರುಗಳು ಪರೀಕ್ಷಿಸುವುದಕ್ಕೆ ಅವಕಾಶವಿದೆ.

ಆ ನಂತರ ಮಾತ್ರವೇ ಮೊಹರನ್ನು ತೆಗೆಯಲಾಗುವುದು. ಮೊಹರು ತೆಗೆಯುವಾಗ ಗ್ರೀನ್ ಪೇಪರ್ ಸೀಲ್ ಹಾನಿಗೊಳ್ಳದಂತೆ ಎಚ್ಚರಿಕೆಯಿಂದ ವಹಿಸಬೇಕು. ಹೊರಕ್ಕೆ ಚಾಚಿಕೊಂಡಿರುವ ಗ್ರೀನ್ ಪೇಪರ್ ಸೀಲನ್ನು ಪರೀಕ್ಷಿಸಿದ ನಂತರ ಕಂಟ್ರೋಲ್ ಯೂನಿಟ್‌ನ ಹೊರಬಾಗಿಲಿನ ಮೇಲಿರುವ ದಾರದ ಮೊಹರನ್ನು ತೆರೆಯಲಾಗುತ್ತದೆ.

**28.ಮತಯಂತ್ರವು ವಾಸ್ತವಿಕ ಮತದಾನಕ್ಕೆ ಸಿದ್ಧವಾಗಿದೆ.**

28.1 ಮತಯಂತ್ರವು ಈಗ ವಾಸ್ತವಿಕ ಮತದಾನಕ್ಕೆ ಬಳಸಲು ಎಲ್ಲಾ ವಿಧದಲ್ಲೂ ಸಿದ್ಧವಾಗಿದೆ.

28.2 ಮತದಾನವನ್ನು ಪ್ರಾರಂಭಿಸುವುದಕ್ಕೂ ಮುಂಚೆ ಪ್ರಿಸೈಡಿಂಗ್ ಅಧಿಕಾರಿಯು ವೋಟಿಂಗ್ ಕಂಪಾರ್ಟ್‌ಮೆಂಟಿನೊಳಗೆ ಬ್ಯಾಲೆಟಿಂಗ್ ಯೂನಿಟ್‌ಗಳನ್ನು ಇರಿಸುವರು ಈಗಾಗಲೇ ಸೂಚಿಸಲಾದಂತೆ ವೋಟಿಂಗ್ ಕಂಪಾರ್ಟ್‌ಮೆಂಟನ್ನು, ಕಂಟ್ರೋಲ್ ಯೂನಿಟ್‌ಅನ್ನು ನಿರ್ವಹಿಸತಕ್ಕಂತಹ ಮೇಜಿನಿಂದ ಸಾಕಷ್ಟು ದೂರದಲ್ಲಿ ಸ್ಥಾಪಿಸುವರು. ಬ್ಯಾಲೆಟಿಂಗ್ ಯೂನಿಟ್ ಮತ್ತು ಕಂಟ್ರೋಲ್ ಯೂನಿಟ್ ನಡುವೆ ಪರಸ್ಪರ ಸಂಪರ್ಕ ಕಲ್ಪಿಸುವ ಕೇಬಲ್ ಸರಿಸುಮಾರು ಐದು ಮೀಟರ್‌ಗಳಷ್ಟು ಉದ್ದವಿರುತ್ತದೆ. ಆದ್ದರಿಂದ ವೋಟಿಂಗ್ ಕಂಪಾರ್ಟ್‌ಮೆಂಟ್‌ನ್ನು ಯುಕ್ತ ಅಂತರದಲ್ಲಿ ಸ್ಥಾಪಿಸುವರು. ಅಲ್ಲದೇ ಕೇಬಲನ್ನು ಮತಗಟ್ಟೆಯ ಒಳಗೆ ಮತದಾರರ ಚಲನವಲನಕ್ಕೆ ಅಡ್ಡಿಯುಂಟು ಮಾಡದಿರುವ ಹಾಗೆ ಮತ್ತು ಅವರು ಅದನ್ನು ತುಳಿದುಕೊಂಡು ಹೋಗದ ಅಥವಾ ಎಡವದ ಹಾಗೆ ತೆಗೆದುಕೊಂಡು ಹೋಗುವರು. ವಿದ್ಯುನ್ಮಾನ ಮತಯಂತ್ರವನ್ನು ವೋಟಿಂಗ್ ಕಂಪಾರ್ಟ್‌ಮೆಂಟಿನಲ್ಲಿ ಇರಿಸುವಾಗ ಮತದಾನದ ಗೌಪ್ಯತೆ ಉಲ್ಲಂಘನೆಯಾಗುವುದಿಲ್ಲ ಎಂಬುದನ್ನು ತಪ್ಪದೆ ಖಚಿತಪಡಿಸಿಕೊಳ್ಳುವರು.

**29. ಪೇಪರ್ ಸೀಲ್‌ಗಳ ಲೆಕ್ಕ.**

29.1 ಪ್ರಿಸೈಡಿಂಗ್ ಅಧಿಕಾರಿಯು ಮತಗಟ್ಟೆಯಲ್ಲಿ ಉಪಯೋಗಿಸುವುದಕ್ಕಾಗಿ ಅವರಿಗೆ ಪೂರೈಸಿದ ಪೇಪರ್ ಸೀಲ್‌ಗಳ ಮತ್ತು ಕಂಟ್ರೋಲ್ ಯೂನಿಟ್ ಮೊಹರು ಮಾಡುವುದಕ್ಕಾಗಿ ಹಾಗೂ ಭದ್ರಪಡಿಸುವುದಕ್ಕಾಗಿ ತಾವು ವಾಸ್ತವವಾಗಿ ಉಪಯೋಗಿಸಿದ ಪೇಪರ್ ಸೀಲ್‌ಗಳ ಸರಿಯಾದ ಲೆಕ್ಕವನ್ನು ಇಡಬೇಕಾಗುವುದು. ಅಂತಹ ಲೆಕ್ಕಗಳನ್ನು ಅವರು ಚುನಾವಣೆಗಳನ್ನು ನಡೆಸುವ ನಿಯಮಗಳು 1977ರ ಪ್ರಕಾರ ಈ ಉದ್ದೇಶಕ್ಕಾಗಿ ವಿಶೇಷವಾಗಿ ನಿರ್ದಿಷ್ಟಪಡಿಸಲಾದ ನಮೂನೆ 17A (EVM) ಭಾಗ–Iರ ಐಟಂ 09ರಲ್ಲಿ ಇಡುವರು.

29.2 ಪೂರೈಸಲಾದ ಮತ್ತು ವಾಸ್ತವವಾಗಿ ಉಪಯೋಗಿಸಲಾದ ಪೇಪರ್ ಸೀಲ್‌ಗಳ ಕ್ರಮ ಸಂಖ್ಯೆಗಳನ್ನು ಬರೆದುಕೊಳ್ಳುವುದಕ್ಕೆ ಹಾಜರಿರುವ ಅಭ್ಯರ್ಥಿಗಳಿಗೆ ಅಥವಾ ಅವರ ಪೋಲಿಂಗ್ ಏಜೆಂಟ್‌ರಿಗೆ ಪ್ರಿಸೈಡಿಂಗ್ ಅಧಿಕಾರಿಯು ಅನುಮತಿ ನೀಡುವರು.

**30. ಮತದಾನದ ಗೌಪ್ಯತೆಯನ್ನು ಕಾಪಾಡುವುದು.**

30.1 **KM Act 1964ರ ಸೆಕ್ಷನ್ 30ರ** ಪ್ರಕಾರ ಪ್ರತಿಯೊಬ್ಬ ಮತಗಟ್ಟೆ ಏಜೆಂಟನು ಮತದಾನದ ಗೌಪ್ಯತೆಯನ್ನು ಕಾಪಾಡಬೇಕು ಹಾಗೂ ಕಾಪಾಡುವಲ್ಲಿ ಸಹಕರಿಸಬೇಕು, ಹಾಗೂ ಅಂತಹ ಗೌಪ್ಯತೆಯನ್ನು ಯಾವುದೇ ವ್ಯಕ್ತಿಯೊಂದಿಗೆ ಸಂಪರ್ಕಿಸುವ ಮೂಲಕ, ವಿವರಗಳನ್ನು ನೀಡುವ ಮೂಲಕ ಉಲ್ಲಂಘಿಸಬಾರದು. ಯಾವುದೇ ವ್ಯಕ್ತಿಯು ಮೇಲಿನ ಅಂಶಗಳನ್ನು ಉಲ್ಲಂಘಿಸಿದ್ದೇ ಆದಲ್ಲಿ ಅಂತಹ ವ್ಯಕ್ತಿಯು 3 ತಿಂಗಳವರೆಗೆ ವಿಸ್ತರಿಸಬಹುದಾದ ಸೆರೆಮನೆ ವಾಸ ಅಥವಾ ದಂಡ ಅಥವಾ ಎರಡರಿಂದಲೂ ಶಿಕ್ಷಾರ್ಹನಾಗುತ್ತಾನೆ.

30.2 ಮತದಾನ ಪ್ರಾರಂಭವಾಗುವುದಕ್ಕೂ ಮುಂಚೆ ಹಾಜರಿರುವ ಎಲ್ಲರಿಗೂ, ಪ್ರಿಸೈಡಿಂಗ್ ಅಧಿಕಾರಿಯು ಮತದಾನದ ರಹಸ್ಯವನ್ನು ಕಾಪಾಡುವ ಬಗ್ಗೆ ಅವರ ಕರ್ತವ್ಯ ಮತ್ತು ಅದರ ಉಲ್ಲಂಘನೆಗಾಗಿ ವಿಧಿಸುವ ದಂಡ ಇವುಗಳಿಗೆ ಸೆಕ್ಷನ್ 30ರಡಿ ಬರುವ ಅಂಶಗಳನ್ನು ವಿವರಿಸಿ ಹೇಳುವರು.

30.3 ಆದಾಗ್ಯೂ ಘನ ಸರ್ವೋಚ್ಛ ನ್ಯಾಯಾಲಯದ ಸಲಹೆಗಳಂತೆ, ಮತಗಟ್ಟೆಯ ಒಳಗಡೆ ನಡೆಯುವ ಮತದಾನ ಪ್ರಕ್ರಿಯೆಯನ್ನೂ ಸಹ ಚಿತ್ರೀಕರಿಸಲು ಆಯೋಗವು ನಿರ್ದೇಶನ ನೀಡಿದೆ. ಯಾವುದೇ ಮತಗಟ್ಟೆಯಲ್ಲಿ ಚಿತ್ರೀಕರಣ ನಡೆಸುವುದು ಅವಶ್ಯಕ ಎಂದು ವೀಕ್ಷಕರು ಗುರುತಿಸಿದಲ್ಲಿ, ಅಂತಹ ಮತಗಟ್ಟೆಗಳಲ್ಲಿ ಮಾತ್ರ ಅದೂ ಸಹ ಅಧಿಕೃತ ವ್ಯಕ್ತಿಗಳಿಂದ ಚಿತ್ರೀಕರಣ ನಡೆಸಲಾಗುವುದು. ಆದಾಗ್ಯೂ ದೃಶ್ಯ ಚಿತ್ರೀಕರಣ ಮಾಡುತ್ತಿರುವಾಗ, ಅದು ಮತದಾನದ ಗೌಪ್ಯತೆಗೆ ಅಡ್ಡಿಯಾಗಬಾರದು, ಅಂದರೆ ಮತದಾರನು ಮತವನ್ನು ಚಲಾಯಿಸುತ್ತಿರುವುದನ್ನು ದಾಖಲು ಮಾಡದಿರುವಂತೆ ಸೂಕ್ತ ಎಚ್ಚರಿಕೆಯಿಂದ ಖಚಿತ ಪಡಿಸಿಕೊಳ್ಳಲಾಗುವುದು. ಸಾಮಾನ್ಯ ಆದೇಶವನ್ನು ನಿರ್ವಹಿಸಬೇಕಾಗಿರುವುದರಿಂದ ಮತ್ತು ಮತದಾನದ ಗೌಪ್ಯತೆಯನ್ನು ಕಾಪಾಡಿಕೊಂಡು ಬರಬೇಕಾಗಿರುವುದರಿಂದ ಮತಗಟ್ಟೆಯೊಳಗೆ ಯಾವುದೇ ಕಾರಣಕ್ಕೂ ಛಾಯಾಚಿತ್ರ ತೆಗೆಯಲು/ ದೃಶ್ಯ ಚಿತ್ರೀಕರಣವನ್ನು ಮಾಡಲು ಮಾಧ್ಯಮದ ವ್ಯಕ್ತಿಗಳಿಗೆ ಅಥವಾ ಯಾರೇ ಇತರೆ ಅನಧಿಕೃತ ವ್ಯಕ್ತಿಗಳಿಗೆ ಅವಕಾಶ ನೀಡಲಾಗುವುದಿಲ್ಲ.

## 31. ಮತದಾನ ಪ್ರಾರಂಭವಾಗುವುದಕ್ಕಿಂತ ಮುಂಚೆ ಪ್ರಿಸೈಡಿಂಗ್ ಅಧಿಕಾರಿಯಿಂದ ಘೋಷಣೆ.

ಪೂರ್ವಭಾವಿ ಸಿದ್ಧತೆಗಳನ್ನು ಮುಗಿಸಿದ ನಂತರ, ಪ್ರಿಸೈಡಿಂಗ್ ಅಧಿಕಾರಿಯು ನಿಗದಿತ ನಮೂನೆ (ಅನುಬಂಧ III ಭಾಗ I)ಯಲ್ಲಿ ಘೋಷಣೆ ನೀಡಬೇಕಿರುತ್ತದೆ. ಮತಗಟ್ಟೆಯಲ್ಲಿ ಹಾಜರಿರುವ ಎಲ್ಲಾ ವ್ಯಕ್ತಿಗಳಿಗೆ ಅಂತಹ ಘೋಷಣೆಯನ್ನು ಓದಿ ತಿಳಿಸುವರು, ಹಾಗೂ ಅದಕ್ಕೆ ಸಹಿ ಮಾಡಿ ಹಾಜರಿರುವ ಮತಗಟ್ಟೆ ಏಜೆಂಟರು ಇಚ್ಛಿಸಿದಲ್ಲಿ ಅವರ ಸಹಿಯನ್ನು ಪಡೆಯುವರು. ಒಂದು ವೇಳೆ ಯಾರೇ ಮತಗಟ್ಟೆ ಏಜೆಂಟನು ಸಹಿ ಮಾಡಲು ನಿರಾಕರಿಸಿದಲ್ಲಿ, ಘೋಷಣೆಯ ನಮೂನೆಯಲ್ಲಿ ಅದಕ್ಕಾಗಿಯೇ ಒದಗಿಸಲಾದ ಸ್ಥಳದಲ್ಲಿ ಪ್ರಿಸೈಡಿಂಗ್ ಅಧಿಕಾರಿಯು ಅಂತಹ ಮತಗಟ್ಟೆ ಏಜೆಂಟನ ಹೆಸರನ್ನು ಬರೆದುಕೊಳ್ಳುವರು.

## 32. ಮತದಾನದ ಪ್ರಾರಂಭ.

32.1 ಮತದಾನವನ್ನು ನಿಗದಿಪಡಿಸಿದ ವೇಳೆಗೆ ಸರಿಯಾಗಿ ಪ್ರಾರಂಭಿಸಲಾಗುವುದು. ಅಷ್ಟರೊಳಗೆ, ಪ್ರಿಸೈಡಿಂಗ್ ಅಧಿಕಾರಿಯು ಪೂರ್ವಭಾವಿ ಸಿದ್ಧತೆಗಳನ್ನು ಪೂರ್ಣಗೊಳಿಸಿರುತ್ತಾರೆ. ಒಂದುವೇಳೆ ಯಾವುದೇ ಕಾರಣಗಳಿಂದಾಗಿ ಪೂರ್ವಭಾವಿ ಸಿದ್ಧತೆಗಳು ಪೂರ್ಣಗೊಳ್ಳದಿದ್ದ ಪಕ್ಷದಲ್ಲಿ, ಪ್ರಿಸೈಡಿಂಗ್ ಅಧಿಕಾರಿಯು ಮತದಾನವನ್ನು ಪ್ರಾರಂಭಿಸಲು ನಿಗದಿಪಡಿಸಿದ ವೇಳೆಗೆ 3 ಅಥವಾ 4 ಮತದಾರರನ್ನು ಮತಗಟ್ಟೆ ಒಳಗೆ ಪ್ರವೇಶಿಸಲು ಅನುವುಮಾಡಿಕೊಟ್ಟು, ಅವರುಗಳನ್ನು ಮತದಾನದ ಪ್ರಕ್ರಿಯೆಯಲ್ಲಿ ತೊಡಗಿಸುವಂತೆ ಮತದಾನ ಅಧಿಕಾರಿಗಳಿಗೆ ತಿಳಿಸುವರು.

32.2 ಯಾವುದೇ ಸಂದರ್ಭದಲ್ಲೂ ಪ್ರಿಸೈಡಿಂಗ್ ಅಧಿಕಾರಿಯು ಮತದಾನದ ಮುಕ್ತಾಯದ ಸಮಯವನ್ನು ಮುಂದೂಡುವಂತಿಲ್ಲ, ಆದರೆ ಮತದಾನದ ಮುಕ್ತಾಯದ ವೇಳೆಗೆ ತಮ್ಮ ಮತವನ್ನು ಚಲಾಯಿಸಲು ಮತಗಟ್ಟೆಗೆ ಬಂದು ಸಾಲಿನಲ್ಲಿ ನಿಂತಿರುವ ಮತದಾರರಿಗೆ ಮತವನ್ನು ಚಲಾಯಿಸಲು ಅನುಮತಿಸಬಹುದು. ಮತದಾನದ ಮುಕ್ತಾಯದ ವೇಳೆಗೆ ಮತಗಟ್ಟೆಯಲ್ಲಿ ಹಾಜರಿರುವ ಮತದಾರರಿಗೆ, ಸರದಿಯ ಕೊನೆ/ ಅಂತ್ಯದಿಂದ ಪ್ರಾರಂಭದವರೆಗೆ ಈ ಉದ್ದೇಶಕ್ಕಾಗಿ ಪ್ರಿಸೈಡಿಂಗ್ ಅಧಿಕಾರಿಯು ತಾನು ಸಹಿ ಮಾಡಿರುವಂತಹ ಚೀಟಿಗಳನ್ನು ಮತದಾರರಿಗೆ ನೀಡಿ ಸರದಿಯಲ್ಲಿದ್ದು ಚೀಟಿ ಪಡೆದುಕೊಂಡವರೆಲ್ಲರಿಗೂ ಮತ ಚಲಾಯಿಸಲು ಅವಕಾಶ ನೀಡುವರು.

## 33. ಮತಗಟ್ಟೆಯಲ್ಲಿ ಮತದಾರರ ಪ್ರವೇಶ.

ಸಾಮಾನ್ಯವಾಗಿ ಪುರುಷ ಮತ್ತು ಮಹಿಳಾ ಮತದಾರರಿಗಾಗಿ ಪ್ರತ್ಯೇಕ ಸಾಲುಗಳು ಇರುತ್ತವೆ. ಸಾಲುಗಳನ್ನು ನಿಯಂತ್ರಿಸುವ ವ್ಯಕ್ತಿಯು ಪ್ರಿಸೈಡಿಂಗ್ ಅಧಿಕಾರಿಯ ನಿರ್ದೇಶನದಂತೆ ಒಂದು ಸಲಕ್ಕೆ

ಮೂರು ಅಥವಾ ನಾಲ್ಕು ಮತದಾರರನ್ನು ಮತಗಟ್ಟೆಯೊಳಗೆ ಬಿಡುತ್ತಾರೆ. ಒಳಗೆ ಬರಲು ಕಾದಿರುವ ಇತರೆ ಮತದಾರರು ಹೊರಗೆ ಸಾಲಿನಲ್ಲಿ ನಿಂತಿರಬೇಕು. ಪುರುಷ ಮತ್ತು ಮಹಿಳಾ ಮತದಾರರ ತಂಡಗಳನ್ನು ಸರದಿಯಂತೆ ಮತಗಟ್ಟೆಯೊಳಗೆ ಬಿಡಲಾಗುವುದು. ಪುರುಷ ಮತದಾರರಿಗಾಗಿ ಅಥವಾ ಮಹಿಳಾ ಮತದಾರರಿಗಾಗಿ ಒಂದಕ್ಕಿಂತ ಹೆಚ್ಚು ಸಾಲುಗಳನ್ನು ಮಾಡುವುದಕ್ಕೆ ಅವಕಾಶ ಕೊಡಲಾಗುವುದಿಲ್ಲ. ಪ್ರಿಸೈಡಿಂಗ್ ಅಧಿಕಾರಿಯು ದುರ್ಬಲ ಮತದಾರರು ಮತ್ತು ಕೈಗೂಸುಗಳನ್ನು ಎತ್ತಿಕೊಂಡಿರುವ ಮಹಿಳಾ ಮತದಾರರಿಗೆ ಸಾಲಿನಲ್ಲಿರುವ ಇತರೆ ಮತದಾರರಿಗಿಂತ ಹೆಚ್ಚಿನ ಆದ್ಯತೆ ನೀಡಬಹುದು. ಇದಕ್ಕೆ ಮತಗಟ್ಟೆ ಏಜೆಂಟರು ಆಕ್ಷೇಪಿಸುವಂತಿಲ್ಲ.

## 34. ಮತದಾರರನ್ನು ಗುರುತಿಸುವುದು ಹಾಗೂ ಅಳಿಸಲಾಗದ ಶಾಯಿಯನ್ನು ಹಚ್ಚುವುದು.

34.1 ಗುರುತು ಮಾಡಿದ ಮತದಾರರ ಪಟ್ಟಿಯ ಪ್ರತಿಯ ಪ್ರಭಾರ/ ಜವಾಬ್ದಾರಿಯನ್ನು ಹೊಂದಿರುವ ಹಾಗೂ ಮತದಾರರನ್ನು ಗುರುತಿಸುವ ಜವಾಬ್ದಾರಿ ಹೊಂದಿರುವ ಮೊದಲನೇ ಪೋಲಿಂಗ್ ಅಧಿಕಾರಿಯು, ಮತದಾರನ ಭಾವಚಿತ್ರವಿರುವ ಗುರುತಿನ ಚೀಟಿಯಿಂದ ಅವನನ್ನು ಗುರುತಿಸುವನು. ಒಬ್ಬ ಮತದಾರನು ಗುರುತಿನ ಬಗ್ಗೆ ಆಯೋಗವು ನಿಗದಿಪಡಿಸಿದ ಯಾವುದಾದರೂ ದಾಖಲೆಯನ್ನು ಮತಗಟ್ಟೆಯಲ್ಲಿ ಹಾಜರು ಪಡಿಸುವುದು ಕಡ್ಡಾಯವಾಗಿದೆ. ಗುರುತಿನ ಚೀಟಿಯನ್ನು ಹಾಜರುಪಡಿಸಲು ಅಸಮರ್ಥರಾದ ಮತದಾರರು, ಆಯೋಗವು ವಿಶೇಷವಾಗಿ ಅನುಮತಿಸಿರುವ ಬದಲಿ ಗುರುತಿನ ದಸ್ತಾವೇಜುಗಳಲ್ಲಿ ಒಂದನ್ನು ಹಾಜರುಪಡಿಸಬೇಕು. ಮತದಾರನ ಹೆಸರು, ತಂದೆಯ/ ತಾಯಿಯ/ ಗಂಡನ ಹೆಸರು, ಲಿಂಗ, ವಯಸ್ಸು (2 ಅಥವಾ 3 ವರ್ಷಗಳೊಳಗೆ ಮಾತ್ರ) ಅಥವಾ ಮತದಾರನ ಭಾವಚಿತ್ರವಿರುವ ಗುರುತಿನ ಚೀಟಿಯಲ್ಲಿನ ವಿಳಾಸಕ್ಕೆ ಸಂಬಂಧಪಟ್ಟ ನಮೂದುಗಳಲ್ಲಿ ಸಣ್ಣಪುಟ್ಟ ವ್ಯತ್ಯಾಸಗಳಿವೆಯೆಂದು ಕಂಡು ಬಂದರೆ ಅವುಗಳನ್ನು ಕಡೆಗಣಿಸಬಹುದು ಮತ್ತು ಮತದಾರರ ಗುರುತನ್ನು ಆ ಚೀಟಿಯ ಮುಖಾಂತರ ಸಾಬೀತುಪಡಿಸಿದರೆ ಮತದಾರನು ತನ್ನ ಮತವನ್ನು ಚಲಾಯಿಸಲು ಅವಕಾಶ ನೀಡಲಾಗುತ್ತದೆ. ಒಬ್ಬ ಮತದಾರನು, ಮತ್ತೊಂದು ವಿಧಾನಸಭಾ ಕ್ಷೇತ್ರದ ಮತದಾರ ನೋಂದಣಿ ಅಧಿಕಾರಿಯು ನೀಡಿರುವ ಮತದಾರರ ಭಾವಚಿತ್ರವಿರುವ ಗುರುತಿನ ಚೀಟಿಯನ್ನು ಹಾಜರುಪಡಿಸಿದರೆ, ಅಂತಹ ಚೀಟಿಯನ್ನು ಸಹಾ ಪ್ರಿಸೈಡಿಂಗ್ ಅಧಿಕಾರಿಯು ಪರಿಗಣನೆಗೆ ತೆಗೆದುಕೊಳ್ಳುವರು. ಪರಂತು, ಆ ಮತದಾರನು ಮತದಾನ ಮಾಡಲು ಹಾಜರಿರುವ ಮತಗಟ್ಟೆಗೆ ಸಂಬಂಧಪಟ್ಟ ಮತದಾರರ ಪಟ್ಟಿಯಲ್ಲಿ ಆ ಮತದಾರನ ಹೆಸರು ಇರಬೇಕು ಹಾಗೂ ಅಂತಹ ಪ್ರಕರಣಗಳಲ್ಲಿ ಮತದಾರನ ಎಡಗೈಯ ತೋರುಬೆರಳಿನ ಮೇಲೆ ಅಳಿಸಲಾಗದ ಶಾಯಿ ಗುರುತು ಇಲ್ಲವೆಂಬುದನ್ನು ನೋಡಲು ಆ ಬೆರಳನ್ನು ಸಂಪೂರ್ಣವಾಗಿ ಪರಿಶೀಲಿಸುವ ಮೂಲಕ ಆತನು ಒಂದಕ್ಕಿಂತ ಹೆಚ್ಚಿನ ಸ್ಥಳದಲ್ಲಿ ಮತವನ್ನು ಚಲಾಯಿಸಿರುವುದಿಲ್ಲವೆಂಬುದನ್ನು ಖಾತ್ರಿಪಡಿಸಿಕೊಳ್ಳಲಾಗುತ್ತದೆ.

34.2 ಆಯೋಗವು ಮತದಾರರ ಬೆರಳಿಗೆ ಅಳಿಸಲಾಗದ ಶಾಯಿಯನ್ನು ಹಚ್ಚುವ ವಿಧಾನದಲ್ಲೂ ಬದಲಾವಣೆಯನ್ನು ತಂದಿದೆ. ಈ ಕೆಳಗಿನ ರೇಖಾಚಿತ್ರದಲ್ಲಿ ತೋರಿಸಿರುವಂತೆ ಮತದಾರನ ಎಡಗೈ ತೋರುಬೆರಳಿನ ಉಗುರಿನ ಮೇಲ್ಭಾಗದಿಂದ ಎಡಗೈ ತೋರುಬೆರಳಿನ ಮೊದಲನೆ ಸಂದಿವರೆಗೆ ಅಳಿಸಲಾಗದ ಶಾಯಿಯಿಂದ ಗೆರೆ/ ರೇಖೆಯನ್ನು ಹಾಕಲಾಗುವುದು.



## **35. ಮತಯಂತ್ರಗಳಿಂದ ಮತಗಳನ್ನು ದಾಖಲು ಮಾಡುವ ವಿಧಾನ.**

35.1 ಮತಗಟ್ಟೆಯಲ್ಲಿ ಮತಯಂತ್ರದಲ್ಲಿ ಮತಗಳನ್ನು ದಾಖಲು ಮಾಡುವ ಪದ್ಧತಿಯನ್ನು ನೀವು ಪೂರ್ಣ ಪ್ರಮಾಣದಲ್ಲಿ ತಿಳಿದಿರತಕ್ಕದ್ದು. **ಮತಗಟ್ಟೆಯಲ್ಲಿ ಅನುಸರಿಸುವ ಈ ಪ್ರಕ್ರಿಯೆಗಳ ಬಗ್ಗೆ ಯಾವುದೇ ಅನವಶ್ಯಕ ಆಕ್ಷೇಪಣೆ ಎತ್ತಲು ಅವಕಾಶವಿಲ್ಲ.**

**35.2 ಈ ಕೆಳಗಿನ ವಿವರಗಳನ್ನು ನೀವು ತಿಳಿದಿರತಕ್ಕದ್ದು:–**

ಮತದಾರರನ್ನು ಗುರುತಿಸುವ ಹಾಗೂ ಅವನ ಎಡಗೈ ತೋರು ಬೆರಳಿಗೆ ಅಳಿಸಲಾಗದ ಶಾಯಿಯನ್ನು ಹಚ್ಚುವ ಸಂಬಂಧದ ಪ್ರಕ್ರಿಯೆಗಳು ಮುಗಿದ ನಂತರ ಹಾಗೂ ಅವನ ಸಹಿ/ಹೆಬ್ಬೆಟ್ಟಿನ ಗುರುತನ್ನು (ಮುಂದಿನ ಕಂಡಿಕೆಗಳಲ್ಲಿ ವಿವರವಾಗಿ ತಿಳಿಸಿರುವಂತೆ) ಪಡೆದ ನಂತರ ಹಾಗೂ ಮತದಾರನಿಗೆ ಮತ ಯಂತ್ರದಲ್ಲಿ ತನ್ನ ಮತವನ್ನು ಚಲಾಯಿಸಲು ಅನುಮತಿಸಿದ ನಂತರ, ಕಂಟ್ರೋಲ್ ಯೂನಿಟ್ಟಿನ ಪ್ರಭಾರವನ್ನು ಹೊಂದಿರುವಂತಹ ಪ್ರಿಸೈಡಿಂಗ್ ಅಧಿಕಾರಿ/ಪೋಲಿಂಗ್ ಅಧಿಕಾರಿಯು ಕಂಟ್ರೋಲ್ ಯೂನಿಟ್ಟಿನಲ್ಲಿ 'ಬ್ಯಾಲೆಟ್' (Ballot) ಬಟನನ್ನು ಒತ್ತುವರು. ಇದರಿಂದಾಗಿ ಬ್ಯಾಲೆಟ್ ಯೂನಿಟ್(ಗಳು) ಮತದಾರನ ಮತವನ್ನು ದಾಖಲು ಮಾಡಿಕೊಳ್ಳಲು ಸಿದ್ಧವಾಗುತ್ತದೆ. 'ಬ್ಯಾಲೆಟ್' ಬಟನನ್ನು ಒತ್ತಿದಾಗ, ಕಂಟ್ರೋಲ್ ಯೂನಿಟ್ಟಿನಲ್ಲಿರುವ 'ಬ್ಯುಸಿ' (Busy) ಬಟನ್ ಕೆಂಪಾಗಿ ಬೆಳಗಲು ಪ್ರಾರಂಭಿಸುತ್ತದೆ. ಅದೇ ಸಮಯಕ್ಕೆ, ಪ್ರತಿಯೊಂದು ಬ್ಯಾಲೆಟ್ ಯೂನಿಟ್ಟಿನ ವೋಟಿಂಗ್ ಕಂಪಾರ್ಟ್‌ಮೆಂಟ್‌ನಲ್ಲಿರುವ 'ರೆಡಿ' (Ready) ದೀಪವು ಹಸಿರು ಬಣ್ಣದಲ್ಲಿ ಬೆಳಗಲು ಪ್ರಾರಂಭಿಸುತ್ತದೆ. ಮತದಾರನು ತನ್ನ ಮತವನ್ನು ಚಲಾಯಿಸಲು, ಮತ ನೀಡಲು ಬಯಸುವ ಅಭ್ಯರ್ಥಿಯ ಹೆಸರು ಮತ್ತು ಅವರ ಚಿಹ್ನೆಯ ಎದುರು ಬ್ಯಾಲೆಟಿಂಗ್ ಯೂನಿಟ್‌ನಲ್ಲಿ ಒದಗಿಸಲಾದ ನೀಲಿ ಗುಂಡಿಯನ್ನು (ಇದನ್ನು ಕ್ಯಾಂಡಿಡೇಟ್ಸ್ ಬಟನ್ ಎನ್ನುತ್ತಾರೆ) ಒತ್ತುವ ಮೂಲಕ ತನ್ನ ಮತವನ್ನು ದಾಖಲಿಸುತ್ತಾನೆ. (ಪ್ರತಿಯೊಬ್ಬ ಅಭ್ಯರ್ಥಿಗೂ ಅವನ ಹೆಸರು ಹಾಗೂ ಚಿಹ್ನೆಯ ಮುಂದೆ ಪ್ರತ್ಯೇಕವಾದ ನೀಲಿ ಗುಂಡಿಗಳನ್ನು ನೀಡಲಾಗಿರುತ್ತದೆ). ಮತದಾರನು ಆ ಗುಂಡಿಯನ್ನು ಒತ್ತಿದಾಗ, ಅಭ್ಯರ್ಥಿಯ ಹೆಸರು ಮತ್ತು ಚಿಹ್ನೆಯ ಎದುರು ಬ್ಯಾಲೆಟಿಂಗ್ ಯೂನಿಟ್‌ನ ಮೇಲೆ ಒದಗಿಸಲಾದ ದೀಪ ಕೆಂಪಗೆ ಬೆಳಗಲು ಪ್ರಾರಂಭಿಸುತ್ತದೆ ಹಾಗೂ ಬ್ಯಾಲೆಟಿಂಗ್ ಯೂನಿಟ್‌ನಲ್ಲಿನ ಹಸಿರು ದೀಪ ಆರಿ ಹೋಗುತ್ತದೆ. ಅಲ್ಲದೆ, ಕಂಟ್ರೋಲ್ ಯೂನಿಟ್‌ನಿಂದ 'ಬೀಪ್' ಶಬ್ದವೂ ಕೂಡ ಕೇಳಿಸುತ್ತದೆ. ಕೆಲವು ಸೆಕೆಂಡುಗಳ ನಂತರ, ಬೀಪ್ ಶಬ್ದ ಮತ್ತು ಬ್ಯಾಲೆಟಿಂಗ್ ಯೂನಿಟ್‌ನ ಮೇಲಿರುವ ಅಭ್ಯರ್ಥಿಯ ದೀಪದಲ್ಲಿನ ಕೆಂಪು ದೀಪ ಮತ್ತು ಕಂಟ್ರೋಲ್ ಯೂನಿಟ್‌ನ ಮೇಲಿನ 'ಬ್ಯುಸಿ' ದೀಪವೂ ಸಹ ಆರಿಹೋಗುತ್ತದೆ. ಈ ಕಾಣಬರುವ ಹಾಗೂ ಕೇಳಿಬರುವ ಚಿಹ್ನೆಗಳು ವೋಟಿಂಗ್ ಕಂಪಾರ್ಟ್‌ಮೆಂಟ್ ಒಳಗಿರುವ ಮತದಾರನು ತನ್ನ ಮತವನ್ನು ದಾಖಲಿಸಿರುವುದರ ಸೂಚನೆಗಳಾಗಿರುತ್ತವೆ. ನಂತರ ಬ್ಯಾಲೆಟ್ ಯೂನಿಟ್ ತನ್ನಷ್ಟಕ್ಕೆತಾನೆ ಲಾಕ್ ಆಗುತ್ತದೆ ಹಾಗೂ ಮುಂದಿನ ಮತದಾರನ ಮತವನ್ನು ಚಲಾಯಿಸಲು ಅನುಮತಿಸಿ ಕಂಟ್ರೋಲ್ ಯೂನಿಟ್ಟಿನಲ್ಲಿರುವ 'ಬ್ಯಾಲೆಟ್' ಬಟನನ್ನು ಒತ್ತಿದಾಗ ಮಾತ್ರ ಮುಂದಿನ ಮತವನ್ನು ದಾಖಲಿಸಬಹುದಾಗಿರುತ್ತದೆ.

35.3 ಒಂದುವೇಳೆ ಯಾರೇ ಮತದಾರನು ವಿದ್ಯುನ್ಮಾನ ಮತಯಂತ್ರವನ್ನು ಬಳಸಿ ಮತ ಚಲಾಯಿಸುವ ಪದ್ಧತಿಯ ಬಗ್ಗೆ ಅರಿಯದವನಾಗಿದ್ದಲ್ಲಿ, ಪ್ರಿಸೈಡಿಂಗ್ ಅಧಿಕಾರಿಯು ಮತದಾರನಿಗೆ ಅರ್ಥವಾಗುವಂಥ ರೀತಿಯಲ್ಲಿ ವಿದ್ಯುನ್ಮಾನ ಮತಯಂತ್ರದ ಕಾರ್ಡ್‌ಬೋರ್ಡಿನ ಮಾದರಿ ಬಳಸಿ ಮತದಾನ ಪ್ರಕ್ರಿಯೆಯನ್ನು ಅವನಿಗೆ ವಿವರಿಸಬಹುದು. ಯಾವುದೇ ಕಾರಣಕ್ಕಾಗಿ ಪ್ರಿಸೈಡಿಂಗ್ ಅಧಿಕಾರಿಯು ಮತದಾನದ ಕಂಪಾರ್ಟ್‌ಮೆಂಟ್‌ನ ಒಳಗೆ ಪ್ರವೇಶಿಸಲು ಅವಕಾಶವಿಲ್ಲ.

## 36. ಮತಗಟ್ಟೆಯಲ್ಲಿ ಮತದಾನದ ಪ್ರಕ್ರಿಯೆ.

ಮತದಾನದ ಪ್ರಕ್ರಿಯೆಯ ಸಂಕ್ಷಿಪ್ತ ವಿವರ ಈ ಕೆಳಕಂಡಂತಿದೆ:–

36.1 ಮತದಾರನು ಮತಗಟ್ಟೆಯನ್ನು ಪ್ರವೇಶಿಸಿದ ಮೇಲೆ ನೇರವಾಗಿ ಮೊದಲನೇ ಪೋಲಿಂಗ್ ಆಫೀಸರ್ ಬಳಿಗೆ ಹೋಗುತ್ತಾನೆ. ಈ ಆಫೀಸರ್‌ರವರು ಮತದಾರನನ್ನು ಗುರ್ತಿಸುವ ಹಾಗೂ ಮತದಾರರ (ಮಾರ್ಕ್ಡ್) ಅಧಿಕೃತ ಪಟ್ಟಿಯ ಪ್ರಭಾರವನ್ನು ಹೊಂದಿರುತ್ತಾರೆ. ಅವರ ಗುರುತು ಖಚಿತವಾದ ನಂತರ ಹಾಗೂ ಯಾರೇ ಪೋಲಿಂಗ್ ಏಜೆಂಟರಿಂದ ಅವರ ಗುರುತಿನ ಬಗ್ಗೆ ಆಕ್ಷೇಪಣೆ ಕಂಡುಬರದಿದ್ದಲ್ಲಿ ಮತದಾರನ ಎಡಗೈಯ ತೋರು ಬೆರಳಿನ ಮೇಲೆ ಎರಡನೇ ಪೋಲಿಂಗ್ ಆಫೀಸರ್‌ರವರು ಮೇಲಿನ 34ನೇ ಪ್ಯಾರಾದಲ್ಲಿ ವಿವರಿಸಿದಂತೆ ಅಚ್ಚಳಿಯದ ಶಾಯಿಯಿಂದ ಗುರುತನ್ನು ಹಾಕುತ್ತಾರೆ. 'ಮತದಾರರ ರಿಜಿಸ್ಟರಿ'ನ (ನಮೂನೆ 20A) ಪ್ರಭಾರದಲ್ಲಿಯೂ ಸಹ ಇರುವ ಈ ಎರಡನೇ ಪೋಲಿಂಗ್ ಆಫೀಸರರು ಮತದಾರರ ರಿಜಿಸ್ಟರಿನಲ್ಲಿ (ನಮೂನೆ 20A) ನಮೂದುಗಳನ್ನು ಮಾಡಿಕೊಳ್ಳುವುದಕ್ಕೆ ಮೊದಲು ಮತದಾರನು ಮತಗಟ್ಟೆಯನ್ನು ಬಿಡುವುದಕ್ಕೆ ಮುಂಚೆ ಅಚ್ಚಳಿಯದ ಶಾಯಿಯ ಗುರುತು ಒಣಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವರು. ರಿಜಿಸ್ಟರಿನ 2ನೇ ಕಾಲಂನಲ್ಲಿರುವಂತೆ ಮತದಾರನ ಕ್ರಮಸಂಖ್ಯೆಯನ್ನು ಬರೆದುಕೊಂಡ ನಂತರ ಅದೇ ರಿಜಿಸ್ಟರ್‌ನ ಮೂರನೇ ಕಾಲಂನಲ್ಲಿ ಮತದಾರನಿಗೆ ಸಂಬಂಧಿಸಿದ ನಮೂದುಗಳ ಎದುರಿಗೆ ಮತದಾರರ ಸಹಿ ಅಥವಾ ಹೆಬ್ಬೆಟ್ಟಿನ ಗುರುತನ್ನು ಆ ಪೋಲಿಂಗ್ ಆಫೀಸರರು ಪಡೆಯುತ್ತಾರೆ. ಈ ಕೆಳಗಿನ ನಮೂನೆಯಂತೆ ಮತದಾರರಿಗಾಗಿ ಮತದಾರರ ಸ್ಲಿಪ್ಪನ್ನು ಸಹ ಎರಡನೇ ಪೋಲಿಂಗ್ ಆಫೀಸರ್‌ರವರು ಸಿದ್ಧಪಡಿಸುತ್ತಾರೆ.

**ಮತದಾರರ ಸ್ಲಿಪ್**

ಮತದಾರರ ರಿಜಿಸ್ಟರ್ ಕಾಲಂ 1ರಲ್ಲಿರುವಂತೆ ಮತದಾರರ

ಕ್ರಮ ಸಂಖ್ಯೆ–––––––––––––––

ಅಧಿಕೃತ (ಮಾರ್ಕ್ಡ್) ಮತದಾರರ ಪಟ್ಟಿಯ ಪ್ರತಿಯಲ್ಲಿರುವಂತೆ

ಮತದಾರರ ಕ್ರಮ ಸಂಖ್ಯೆ––––––––––––

36.2 ಮತಗಟ್ಟೆಯಲ್ಲಿನ ಮತದಾರರ ಸಂಖ್ಯೆಯು 1500ಕ್ಕಿಂತಲೂ ಜಾಸ್ತಿಯಿದ್ದ ಸಂದರ್ಭದಲ್ಲಿ, ಅಂತಹ ಮತಗಟ್ಟೆ ಒಳಗೊಂಡ ಕಟ್ಟಡದೊಳಗೆ ಪ್ರತ್ಯೇಕ ಕೊಠಡಿಯಲ್ಲಿ ಆಕ್ಸಿಲರಿ ಮತಗಟ್ಟೆ ತೆರೆಯುವುದು ಸೂಕ್ತವಾಗಿರುತ್ತದೆ ಹಾಗೂ ಯಾವುದೇ ಕಾರಣದಿಂದ ಆ ಮತಗಟ್ಟೆಯನ್ನು ಬೇರೆ ಕಟ್ಟಡ ತೆರೆಯುವುದು ಸೂಕ್ತವಲ್ಲ. ಆ ಮತಗಟ್ಟೆಯ ಒಟ್ಟು ಮತದಾರರನ್ನು ಮತಗಟ್ಟೆ ಹಾಗೂ ಆಕ್ಸಿಲರಿ ಮತಗಟ್ಟೆಗಳಿಗೆ ಹಂಚಲಾಗಿರುತ್ತದೆ.

ಪ್ರಿಸೈಡಿಂಗ್ ಅಧಿಕಾರಿಯು ಆ ಮತಗಟ್ಟೆಗೆ ಸಂಬಂಧಿಸಿದ ಅಧಿಕೃತ ಮತದಾರರ ಪಟ್ಟಿಯಲ್ಲಿ ನಿಗದಿಪಡಿಸಿದ ಸಂಖ್ಯೆಯ ಮತದಾರರ ಹೆಸರನ್ನು ಉಳಿಸಿಕೊಂಡು ಉಳಿದ ಮತದಾರರ ಹೆಸರನ್ನು ಅಡ್ಡಗೆರೆ ಎಳೆಯುವ ಮೂಲಕ ತೆಗೆದು ಹಾಕಿರುತ್ತಾರೆ.

**ಉದಾ:** ಮತಗಟ್ಟೆ ಸಂಖ್ಯೆ 04ರಲ್ಲಿ ಒಟ್ಟು ಮತದಾರರು 1795 ಇದ್ದಲ್ಲಿ ಆಕ್ಸಿಲರಿ ಮತಗಟ್ಟೆ 4'A' ಸ್ಥಾಪಿಸುತ್ತಾರೆ. ಮತಗಟ್ಟೆ '4'ಕ್ಕೆ ಕ್ರಮ ಸಂಖ್ಯೆ 1ರಿಂದ 1000ರ ವರೆಗಿನ ಮತದಾರರನ್ನು ಹಾಗೂ ಮತಗಟ್ಟೆ 4'A' ಗೆ ಕ್ರಮ ಸಂಖ್ಯೆ 1001ರಿಂದ 1795ರ ವರೆಗಿನ (ಒಟ್ಟು 795) ಮತದಾರರನ್ನು ಹಂಚಿರುತ್ತಾರೆ.

ಮತಗಟ್ಟೆ '4'ರ ಪ್ರಿಸೈಡಿಂಗ್ ಅಧಿಕಾರಿಯ ಬಳಿಯ ಅಧಿಕೃತ ಮತದಾರರ ಪಟ್ಟಿಯಲ್ಲಿ ಕ್ರ.ಸಂ. 1001ರಿಂದ 1795ರ ವರೆಗಿನ ಮತದಾರರ ಹೆಸರಿನ ಮೇಲೆ ಅಡ್ಡಗೆರೆ ಎಳೆದು ಅದೇ ರೀತಿ ಮತಗಟ್ಟೆ 4'A' ರ ಪ್ರಿಸೈಡಿಂಗ್ ಅಧಿಕಾರಿಯ ಬಳಿಯ ಅಧಿಕೃತ ಮತದಾರರ ಪಟ್ಟಿಯಲ್ಲಿ ಕ್ರ.ಸಂ. 1ರಿಂದ 1000 ರ ವರೆಗಿನ ಮತದಾರರ ಹೆಸರಿನ ಮೇಲೆ ಅಡ್ಡಗೆರೆ ಎಳೆಯಲಾಗಿರುತ್ತದೆ.

36.3 ಪ್ರಿಸೈಡಿಂಗ್ ಆಫೀಸರ್‌ರು/ ಮೂರನೇ ಪೋಲಿಂಗ್ ಆಫೀಸರ್‌ರು ಮತದಾರರ ಎಡಗೈಯ ತೋರು ಬೆರಳಿನ ಮೇಲಿರುವ ಅಚ್ಚಳಿಯದ ಶಾಯಿಯ ಗುರುತನ್ನು ಪರಿಶೀಲಿಸಿ ಈ ಮೇಲೆ ಹೇಳಿದ ಮತದಾರರ ಸ್ಲಿಪ್ಪಿನ ಆಧಾರದ ಮೇಲೆ ಮತದಾರ ಮತಯಂತ್ರದಲ್ಲಿ ತನ್ನ ಮತವನ್ನು ಚಲಾಯಿಸಲು ಅನುಮತಿಸುತ್ತಾರೆ. ಮತಯಂತ್ರದ ಮೂಲಕ ಮತವನ್ನು ಚಲಾಯಿಸುವ ಕಾರ್ಯವಿಧಾನವನ್ನು ಈ ಹಿಂದಿನ ಪ್ಯಾರಾಗಳಲ್ಲಿ ವಿವರಿಸಲಾಗಿದೆ.

36.4 ಮತದಾರರ ರಿಜಿಸ್ಟರಿನಲ್ಲಿ ಅವರ ಹೆಸರುಗಳು ನೋಂದಣಿಯಾಗಿರುವ ಕ್ರಮದಲ್ಲಿಯೇ ಮತದಾರರು ಮತಯಂತ್ರದಲ್ಲಿ ತಮ್ಮ ಮತಗಳನ್ನು ಚಲಾಯಿಸಲು ಅನುಮತಿ ನೀಡಲಾಗುತ್ತದೆ. ಯಾವುದೇ ಅನಿವಾರ್ಯ ಕಾರಣಗಳಿಂದಾಗಿ ಯಾರೇ ಮತದಾರರಿಗೆ ಸಂಬಂಧಿಸಿದಂತೆ ಮೇಲಿನ ಕ್ರಮ ಕಟ್ಟುನಿಟ್ಟಾಗಿ ಪಾಲಿಸಲು ಸಾಧ್ಯವಾಗದಿದ್ದ ಪಕ್ಷದಲ್ಲಿ ಪ್ರಿಸೈಡಿಂಗ್ ಆಫೀಸರ್‌ರು ಮತದಾರರ ರಿಜಿಸ್ಟರ್‌ನ ಷರಾ ಕಾಲಂನಲ್ಲಿ ಬಾಧಿತರಾದ ಮತದಾರರು ತಮ್ಮ ಮತಗಳನ್ನು ದಾಖಲಿಸಿದ ನಿಖರವಾದ ಕ್ರಮಸಂಖ್ಯೆಯನ್ನು ಸೂಚಿಸುವರು.

36.5 ಮತದಾರನ ಎಡಗೈಯ ತೋರು ಬೆರಳಿನಲ್ಲಿ ಅಚ್ಚಳಿಯದ ಶಾಯಿಯ ಸ್ಪಷ್ಟವಾದ ಗುರುತಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಮತದಾರನ ಎಡ ತೋರು ಬೆರಳನ್ನು ಪರಿಶೀಲಿಸಿ ನೋಡುವ ಕೆಲಸವನ್ನು ಪ್ರಿಸೈಡಿಂಗ್ ಆಫೀಸರ್‌ರು ತನ್ನ ತಂಡದ ಮತ್ತೊಬ್ಬ ಸದಸ್ಯರಿಗೆ ವಹಿಸಿಕೊಡಬಹುದು. ಆತನು ಅಂತಹ ಗುರುತು ಸ್ಪಷ್ಟವಾಗಿ ಕಣ್ಣಿಗೆ ಕಾಣುವುದಿಲ್ಲ ಇಲ್ಲವೇ ಅಚ್ಚಳಿಯದ ಶಾಯಿಯನ್ನು ಒರೆಸಿ ಹಾಕಲಾಗಿದೆ ಎಂಬುದನ್ನು ಗುರುತಿಸಿದರೆ ಆತ ಮತದಾರನ ಎಡಗೈ ತೋರು ಬೆರಳಿಗೆ ಮತ್ತೊಮ್ಮೆ ಅಚ್ಚಳಿಯದ ಶಾಯಿಯಿಂದ ಗುರುತು ಮಾಡಬಹುದು.

## 37.ಮತದಾರರ ಗುರುತನ್ನು ಪ್ರಶ್ನಿಸುವುದು.

37.1 ಮೇಲೆ ಹೇಳಿರುವಂತೆ ನಕಲಿ ಮತದಾರರನ್ನು ಕಂಡುಹಿಡಿಯುವುದು ಮತ್ತು ಅಂಥವರಿಂದ ಮತದಾನ ಆಗದಂತೆ ತಡೆಯುವುದರಲ್ಲಿ ಪ್ರಿಸೈಡಿಂಗ್ ಆಫೀಸರ್‌ರವರಿಗೆ ಸಹಾಯ ಮಾಡುವುದು ಪೋಲಿಂಗ್ ಏಜೆಂಟನ ಮುಖ್ಯ ಕರ್ತವ್ಯಗಳಲ್ಲಿ ಒಂದು. ಆದ್ದರಿಂದ, ತಾನು ಮತದಾರನೆಂದು ಬರುವ ವ್ಯಕ್ತಿಯು, ಮತದಾರನಲ್ಲವೆಂದು ಆತನಿಗೆ ವೈಯಕ್ತಿಕವಾದ ಪರಿಚಯವಿದ್ದರೆ, ಆತನು ಆ ಮತದಾರನನ್ನು ಪ್ರಶ್ನಿಸಲು ಅಧಿಕಾರ ಇದೆ. ಆದರೆ, ಪೋಲಿಂಗ್ ಏಜೆಂಟರು ಗೊತ್ತುಗುರಿಯಿಲ್ಲದೆ ಪ್ರಶ್ನಿಸಕೂಡದು. ಏಕೆಂದರೆ, ಇಂತಹ ಸಂದರ್ಭಗಳಲ್ಲಿ ಕೆಲವು ಮತದಾರರು ಬೇಸರಗೊಂಡು ಮತದಾನ ಮಾಡದೇ ಸರತಿ ಸಾಲನ್ನು ಬಿಟ್ಟುಹೋಗುವ ಸಾಧ್ಯತೆಯೂ ಇರುತ್ತದೆ ಮತ್ತು ಮತದಾನವು ಸುಸೂತ್ರವಾಗಿ ಮುಂದುವರಿಯದೇ ವಿಳಂಬಕ್ಕೆ ಎಡೆಮಾಡಿಕೊಡುತ್ತದೆ.

37.2 ಮತದಾರರು ಮತದಾನ ಮಾಡುವಾಗ ಭಾರತ ಚುನಾವಣಾ ಆಯೋಗವು ನೀಡಿರುವ ಮತದಾರರ ಭಾವಚಿತ್ರದ ಗುರುತಿನ ಚೀಟಿ ಅಥವಾ ಈ ಕೆಳಕಂಡ 22 ದಾಖಲೆಗಳ ಪೈಕಿ ಯಾವುದಾದರೂ ಒಂದನ್ನು ಹಾಜರುಪಡಿಸುವುದನ್ನು ಕಡ್ಡಾಯ ಮಾಡಲಾಗಿದೆ. ಮತದಾರರಿಗೆ ಮತ ಚಲಾಯಿಸಲು ಅನುಮತಿ ನೀಡುವ ಮುನ್ನ ಅವರು ತಮ್ಮ ಗುರುತನ್ನು ಸಾಬೀತುಪಡಿಸತಕ್ಕದ್ದು.

**<u>ಕುಟುಂಬದ ಮುಖ್ಯಸ್ಥರ ಹೆಸರಿನಲ್ಲಿ ನೀಡಲಾಗಿರುವ ಈ ಕೆಳಕಂಡ 22 ದಾಖಲೆಗಳ ಪೈಕಿ ಯಾವುದಾದರೊಂದು ದಾಖಲೆಯನ್ನು ಆ ಕುಟುಂಬದ ಇನ್ನಿತರ ಸದಸ್ಯರ ಗುರುತಿಗಾಗಿ ಬಳಸಬಹುದು.</u>**

1. ಪಾಸ್‌ಪೋರ್ಟ್.
2. ಡ್ರೈವಿಂಗ್ ಲೈಸನ್ಸ್.
3. ಆದಾಯ ತೆರಿಗೆ ಗುರುತಿನ ಚೀಟಿ (PAN).
4. ರಾಜ್ಯ/ ಕೇಂದ್ರ ಸರ್ಕಾರ ಹಾಗೂ ಸಾರ್ವಜನಿಕ ಉದ್ದಿಮೆಗಳು ಅಥವಾ ಇತರೆ ಖಾಸಗಿ ಔದ್ಯಮಿಕ ಸಂಸ್ಥೆಗಳು ಅವರ ಕೆಲಸಗಾರರಿಗೆ ನೀಡಿರುವ ಭಾವಚಿತ್ರವಿರುವ ಸೇವಾ ಗುರುತಿನ ಚೀಟಿಗಳು.
5. ಸಾರ್ವಜನಿಕ ವಲಯದ ಬ್ಯಾಂಕ್/ ಕಿಸಾನ್ ಮತ್ತು ಅಂಚೆ ಕಛೇರಿ ನೀಡಿರುವ ಭಾವಚಿತ್ರವಿರುವ ಪಾಸ್ ಪುಸ್ತಕ.
6. ಮಾನ್ಯತೆ ಪಡೆದ ನೋಂದಾಯಿತ ವಿದ್ಯಾ ಸಂಸ್ಥೆಗಳು ವಿದ್ಯಾರ್ಥಿಗಳಿಗೆ ಕೊಟ್ಟಿರುವ ಗುರುತಿನ ಚೀಟಿಗಳು.
7. ಭಾವಚಿತ್ರವಿರುವ ನೋಂದಾಯಿತ ಡೀಡ್‌ಗಳು/ ಪಟ್ಟಾಗಳು ಮುಂತಾದ ಆಸ್ತಿ ದಾಖಲೆಗಳು.
8. ಭಾವಚಿತ್ರವಿರುವ ಪಡಿತರ ಚೀಟಿಗಳು (Ration Card).
9. ಸಕ್ಷಮ ಪ್ರಾಧಿಕಾರ ನೀಡಿರುವ SC/ ST/ OBC ಭಾವಚಿತ್ರವಿರುವ ಪ್ರಮಾಣ ಪತ್ರಗಳು.
10. ಸಕ್ಷಮ ಪ್ರಾಧಿಕಾರ ನೀಡಿರುವ ಭಾವಚಿತ್ರವಿರುವ ಪಿಂಚಣಿ ಪಾವತಿ ಆದೇಶಗಳು ಅಥವಾ ಮಾಜಿ ಯೋಧರ ಪಿಂಚಣಿ ಪುಸ್ತಕ/ ಪಿಂಚಣಿ ಸಂದಾಯ ಆದೇಶಗಳಂತಹ ಪಿಂಚಣಿ ದಾಖಲೆಗಳು, ವೃದ್ಧಾಪ್ಯ ವೇತನ ಆದೇಶಗಳು, ವಿಧವಾ ವೇತನ ಆದೇಶಗಳು.
11. ಭಾವಚಿತ್ರವಿರುವ ಸ್ವಾತಂತ್ರ್ಯ ಯೋಧರ ಗುರುತಿನ ಚೀಟಿಗಳು
12. ಸಕ್ಷಮ ಪ್ರಾಧಿಕಾರ ನೀಡಿರುವ ಭಾವಚಿತ್ರವಿರುವ ಶಸ್ತ್ರ ಪರವಾನಗಿ.
13. ಅಂಗವಿಕಲರಿಗೆ ಸಕ್ಷಮ ಪ್ರಾಧಿಕಾರ ನೀಡಿರುವ ಭಾವಚಿತ್ರವಿರುವ ಗುರುತಿನ ಚೀಟಿಗಳು.
14. ಮಾಜಿ ಯೋಧರ ಭಾವಚಿತ್ರವಿರುವ ಸಿ.ಎಸ್.ಡಿ. ಕ್ಯಾಂಟೀನ್ ಕಾರ್ಡ್.
15. ಸಂಧ್ಯಾ ಸುರಕ್ಷಾ ಯೋಜನೆಯ ಭಾವಚಿತ್ರವಿರುವ ಗುರುತಿನ ಚೀಟಿ.
16. NREG ಯೋಜನೆಯ ಅಡಿಯಲ್ಲಿ ನೀಡಿರುವ ಭಾವಚಿತ್ರವಿರುವ ಉದ್ಯೋಗ ಕಾರ್ಡ್.
17. ಭಾವಚಿತ್ರವಿರುವ ಯಶಸ್ವಿನಿ ಕಾರ್ಡ್.
18. ಮಹಾನಗರ ಪಾಲಿಕೆ, ನಗರಸಭೆ, ಪುರಸಭೆ, ಗ್ರಾಮ ಪಂಚಾಯತಿಗಳು ಇತ್ಯಾದಿ ಸ್ಥಳೀಯ ಸಂಸ್ಥೆಗಳು ನೀಡಿರುವ ಭಾವಚಿತ್ರವಿರುವ ಸೇವಾ ಗುರುತಿನ ಚೀಟಿಗಳು
19. ಸರ್ಕಾರಿ ಇಲಾಖೆ ನೀಡಿರುವ ಭಾವಚಿತ್ರವಿರುವ ಹಿರಿಯ ನಾಗರಿಕರ ಗುರುತಿನ ಚೀಟಿ.
20. ಕರ್ನಾಟಕ ಸರ್ಕಾರದ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯು ನೀಡಿರುವ ಕುಟುಂಬದ ಸದಸ್ಯರ ಹೆಸರು ಮತ್ತು ವಯಸ್ಸು ಹಾಗೂ ಕುಟುಂಬದ ಯಜಮಾನನೊಂದಿಗೆ ಹೊಂದಿರುವ ಸದಸ್ಯರ ಸಂಬಂಧ ಒಳಗೊಂಡ ಭಾವಚಿತ್ರವಿರುವ ತಾತ್ಕಾಲಿಕ/ ಮೂಲ ಪಡಿತರ ಚೀಟಿ.

21. ಭಾವಚಿತ್ರವಿರುವ ಆರೋಗ್ಯ ವಿಮಾ ಯೋಜನೆ ಸ್ಮಾರ್ಟ್ ಕಾರ್ಡ್‌ಗಳು (ಕಾರ್ಮಿಕ ಮಂತ್ರಾಲಯ ಯೋಜನೆ)

22. ಆಧಾರ್ ಕಾರ್ಡ್

## 38.ಮೃತರಾದ, ಗೈರುಹಾಜರಾದ ಮತ್ತು ಅನುಮಾನಾಸ್ಪದರೆಂದು ಆಪಾದಿಸಲಾದ ಮತದಾರರ ಪಟ್ಟಿ.

ಪೋಲಿಂಗ್ ಏಜೆಂಟ್‌ರ ಬಳಿ ಮತದಾರರ ಪಟ್ಟಿಯ ಪ್ರತಿ ಮತ್ತು **ತನ್ನ ಪಕ್ಷದ ಉಮೇದುವಾರನು ಅಥವಾ ಅವನ ಪಕ್ಷ ಸಿದ್ಧಪಡಿಸಿರಬಹುದಾದಂತಹ ಮೃತರ, ಗೈರು ಹಾಜರಾದವರ ಮತ್ತು ಅನುಮಾನಾಸ್ಪದರೆಂದು ಆಪಾದಿಸಲಾದ ಮತದಾರರ ಹೆಸರುಗಳು ಇರುವ ಪಟ್ಟಿಯ ಒಂದು ಪ್ರತಿ ಇರಬೇಕು.** ಆ ಪಟ್ಟಿಯ ಒಂದು ಪ್ರತಿಯನ್ನು ಪ್ರಿಸೈಡಿಂಗ್ ಆಫೀಸರ್‌ರಿಗೂ ಸಹ ಸಲ್ಲಿಸಬೇಕು. ಅಂತಹ ಪಟ್ಟಿಯಲ್ಲಿ ನಮೂದಿಸಿರುವ ಹೆಸರಿನ ಯಾರೇ ವ್ಯಕ್ತಿಯು ತಾನು ಮತದಾರನೆಂದು ಹೇಳಿದರೆ, ಪೋಲಿಂಗ್ ಏಜೆಂಟ್‌ನು ಆ ಬಗ್ಗೆ ಪ್ರಿಸೈಡಿಂಗ್ ಆಫೀಸರ್ ಅವರ ಗಮನವನ್ನು ಸೆಳೆಯಬೇಕು. ಇದು ಔಪಚಾರಿಕ ಆಕ್ಷೇಪಣೆ ಎನಿಸುವುದಿಲ್ಲ. ಪ್ರಿಸೈಡಿಂಗ್ ಆಫೀಸರ್‌ರವರು ಆ ವ್ಯಕ್ತಿಗಳ ಗುರುತನ್ನು ಪರೀಕ್ಷಿಸುತ್ತಾರೆ.

## 39. ಮತದಾರರ ಗುರುತಿನ ಬಗ್ಗೆ ಔಪಚಾರಿಕವಾಗಿ ಪ್ರಶ್ನಿಸುವುದು.

39.1 ಪ್ರಿಸೈಡಿಂಗ್ ಆಫೀಸರ್‌ರವರು ಪಟ್ಟಿಯನ್ನು ಪರಿಗಣಿಸದಿದ್ದರೆ, ಸಂಬಂಧಪಟ್ಟ ವ್ಯಕ್ತಿಯು ನಕಲಿ ಮತದಾರನೆಂದು ನಿಮಗೆ ಮನವರಿಕೆಯಾದರೆ ಆ ವ್ಯಕ್ತಿಯ ಗುರುತನ್ನು ಔಪಚಾರಿಕವಾಗಿ ನೀವು ಪ್ರಶ್ನಿಸಬಹುದು.

39.2 ಮೃತರಾದವರ, ಗೈರುಹಾಜರಾಗಿರುವವರ ಮತ್ತು ಅನುಮಾನಾಸ್ಪದವೆಂದು ಆಪಾದಿಸಲಾದ ಮತದಾರರ ಮೇಲ್ಕಂಡ ಪಟ್ಟಿಯಲ್ಲಿ ಮತದಾರನ ಹೆಸರು, ನಮೂದಾಗದೇ ಇದ್ದರೂ ಸಹ ಮತದಾರನೆಂದು ಹೇಳುತ್ತಿರುವ ವ್ಯಕ್ತಿಯು ನಿಜವಾದ ಮತದಾರನಲ್ಲವೆಂದು ನಿಮಗೆ ವೈಯಕ್ತಿಕವಾಗಿ ಗೊತ್ತಿದ್ದರೆ, ನೀವು ಆ ವ್ಯಕ್ತಿಯ ಗುರುತನ್ನು ಔಪಚಾರಿಕವಾಗಿ ಪ್ರಶ್ನಿಸಬಹುದು (ಚಾಲೆಂಜ್ ಮಾಡಬಹುದು).

39.3 ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿತವಾಗಿರುವ ಪ್ರತಿಯೊಬ್ಬ ವ್ಯಕ್ತಿಗೆ ಚುನಾವಣೆಯಲ್ಲಿ ಮತ ನೀಡಲು ಹಕ್ಕಿರುತ್ತದೆ. ಮತದಾರನೆಂದು ಹೇಳುವ ವ್ಯಕ್ತಿಯು ನೀಡುವ ಹೆಸರು ಮತ್ತು ಇತರ ವಿವರಗಳು ಸರಿಯಾಗಿ ಇದ್ದರೆ ಮತ್ತು ನಿರ್ದಿಷ್ಟವಾಗಿ ಈ ಚುನಾವಣೆಗೆ ಆಯೋಗವು ಅನುಮೋದಿಸಿರುವ ಭಾವಚಿತ್ರವಿರುವ ಚುನಾವಣಾ ಗುರುತಿನ ಚೀಟಿ ಅಥವಾ ಪರ್ಯಾಯ ದಸ್ತಾವೇಜುಗಳಲ್ಲಿ ಯಾವುದಾದರೂ ಒಂದನ್ನು ಹಾಜರುಪಡಿಸಿದರೆ ಆತನೇ ಮತದಾರನೆಂದು ಭಾವಿಸಲಾಗುವುದು. ಆದುದರಿಂದ ನೀವು ಮತದಾರನ ಗುರುತನ್ನು ಚೆನ್ನಾಗಿ ತಿಳಿದಿದ್ದರೆ ಮಾತ್ರ ಪ್ರಶ್ನಿಸಬೇಕೇ ಹೊರತು ಅನ್ಯಥಾ ಅಲ್ಲ.

## 40. ಚಾಲೆಂಜ್ ಫೀಜು (ಪ್ರಶ್ನಿಸಲು ಶುಲ್ಕ)

ಪ್ರಶ್ನಿಸುವ ವ್ಯಕ್ತಿಯು ನಗದು 2 ರೂ.ಗಳನ್ನು ಸಲ್ಲಿಸುವವರೆಗೆ ಪ್ರಿಸೈಡಿಂಗ್ ಆಫೀಸರ್‌ರವರು ಪೋಲಿಂಗ್ ಏಜೆಂಟನ ಯಾವುದೇ ಆಕ್ಷೇಪಣೆಯನ್ನು ಗಮನಕ್ಕೆ ತೆಗೆದುಕೊಳ್ಳುವುದಿಲ್ಲ. ಹಣವನ್ನು ಸಂದಾಯ ಮಾಡಿದ ನಂತರ, ಅದಕ್ಕೆ ಪ್ರಿಸೈಡಿಂಗ್ ಆಫೀಸರ್‌ರವರು ಚುನಾವಣಾ ಆಯೋಗವು ಗೊತ್ತುಪಡಿಸಿರುವ ನಿಗದಿತ ನಮೂನೆಯಲ್ಲಿ ಪ್ರಶ್ನಿಸಿದ ವ್ಯಕ್ತಿಗೆ ಒಂದು ರಸೀತಿಯನ್ನು ಕೊಡುತ್ತಾರೆ.

## 41. ಪ್ರಶ್ನಿಸುವ ಬಗ್ಗೆ ಸಂಕ್ಷಿಪ್ತ ವಿಚಾರಣೆ.

41.1 ಪೋಲಿಂಗ್ ಏಜೆಂಟನು ಮತದಾರನ ಗುರುತಿನ ಬಗ್ಗೆ ಔಪಚಾರಿಕವಾಗಿ ಪ್ರಶ್ನಿಸಿದಾಗ ಪ್ರಿಸೈಡಿಂಗ್ ಆಫೀಸರ್‌ರವರು, ಪ್ರಶ್ನೆಗೆ ಗುರಿಯಾದವರಿಗೆ, ಅವನು ಖೋಟಾ ಮತದಾರನಾಗಿ ವರ್ತಿಸಿದರೆ ಯಾವ ದಂಡನೆ ವಿಧಿಸಲಾಗುತ್ತದೆ ಎಂಬ ಬಗ್ಗೆ ತಿಳುವಳಿಕೆ ಕೊಟ್ಟು ಎಚ್ಚರಿಕೆ ನೀಡುತ್ತಾರೆ.

ಮತದಾರರ ಪಟ್ಟಿಯಲ್ಲಿನ ಸಂಬಂಧಪಟ್ಟ ನಮೂದನ್ನು ಪೂರ್ಣವಾಗಿ ಓದುತ್ತಾರೆ ಮತ್ತು ಆ ನಮೂದಿತ ವ್ಯಕ್ತಿಯು ನೀವೇನಾ, ಎಂದು ಕೇಳುತ್ತಾರೆ ಮತ್ತು ಪ್ರಶ್ನಿತ ಮತಗಳ ಪಟ್ಟಿಯಲ್ಲಿ (ಅನುಬಂಧ IV) ಆತನ ಹೆಸರು ಮತ್ತು ವಿಳಾಸವನ್ನು ದಾಖಲು ಮಾಡಿಕೊಳ್ಳುತ್ತಾರೆ ಮತ್ತು ಆತನಿಗೆ ರುಜು ಮಾಡಲು ಅಥವಾ ಹೆಬ್ಬೆಟ್ಟಿನ ಗುರುತನ್ನು ಹಾಕಲು ಹೇಳುತ್ತಾರೆ. ಪ್ರಶ್ನೆಗೆ ಒಳಗಾದ ಆ ವ್ಯಕ್ತಿಯು ಹಾಗೆ ಮಾಡಲು ನಿರಾಕರಿಸಿದರೆ, ಪ್ರಿಸೈಡಿಂಗ್ ಆಫೀಸರ್‌ರವರು ಆತನಿಗೆ ಮತ ನೀಡಲು ಅನುಮತಿ ಕೊಡುವುದಿಲ್ಲ.

41.2 ಪ್ರಿಸೈಡಿಂಗ್ ಆಫೀಸರ್‌ರವರು ಪ್ರಶ್ನಿತ ಮತಗಳ ಪಟ್ಟಿಯಲ್ಲಿ ನಮೂದನ್ನು ಪೂರ್ಣಗೊಳಿಸಿದ ನಂತರ ಮತ್ತು ಆ ಪಟ್ಟಿಯಲ್ಲಿ ಸಂಬಂಧಪಟ್ಟ ಅಂಕಣದಲ್ಲಿ, ಪ್ರಶ್ನಿಸಿದ ವ್ಯಕ್ತಿಯ ಸಹಿ ಅಥವಾ ಹೆಬ್ಬೆಟ್ಟಿನ ಗುರುತನ್ನು ಪಡೆದುಕೊಂಡು ಪ್ರಶ್ನಿತನಾದ ಆ ವ್ಯಕ್ತಿಯು ಮತದಾರನಲ್ಲವೆಂಬುದನ್ನು ಸಾಬೀತುಪಡಿಸುವಂತೆ ಪ್ರಶ್ನಿಸಿದ ವ್ಯಕ್ತಿಯನ್ನು ಕೇಳುತ್ತಾರೆ. ಪ್ರಶ್ನಿಸಿದ ವ್ಯಕ್ತಿಯು ತನ್ನ ಪ್ರಶ್ನೆಗೆ ಸಮರ್ಥನೆಯಾಗಿ ಮೇಲು ನೋಟದ ಪುರಾವೆಯನ್ನು ಒದಗಿಸಲು ವಿಫಲನಾದರೆ ಪ್ರಿಸೈಡಿಂಗ್ ಆಫೀಸರ್‌ರವರು ಪ್ರಶ್ನೆಯನ್ನು ತಳ್ಳಿಹಾಕಿ ಪ್ರಶ್ನೆಗೆ ಗುರಿಯಾದ ವ್ಯಕ್ತಿಗೆ ಮತ ನೀಡಲು ಅನುಮತಿ ಕೊಡುತ್ತಾರೆ. ಆ ವ್ಯಕ್ತಿಯು ಮೇಲು ನೋಟಕ್ಕೆ, ಮತದಾರ ಅಲ್ಲವೆಂಬುದನ್ನು ಪ್ರಶ್ನಿಸಿದ ವ್ಯಕಿಯು ಸಾಬೀತುಪಡಿಸಿದರೆ, ಅನಂತರ ಪ್ರಿಸೈಡಿಂಗ್ ಆಫೀಸರ್‌ರು ಪ್ರಶ್ನಿಸಿರುವುದನ್ನು ಖಂಡಿಸುವ ಸಾಕ್ಷ್ಯವನ್ನು ಹಾಜರುಪಡಿಸಲು, ಅಂದರೆ ತಾನೇ ಮತದಾರನೆಂಬುದನ್ನು ರುಜುವಾತುಪಡಿಸಲು ಹೇಳುತ್ತಾರೆ. ಈ ವಿಚಾರಣೆಯ ಸಮಯದಲ್ಲಿ, ಪ್ರಿಸೈಡಿಂಗ್ ಅಧಿಕಾರಿಯು ಆ ವ್ಯಕ್ತಿಯ ಗುರುತನ್ನು ಕಂಡುಕೊಳ್ಳುವ ಉದ್ದೇಶಕ್ಕಾಗಿ ಅವಶ್ಯವಾದ ಯಾವುದೇ ಪ್ರಶ್ನೆಗಳನ್ನು ಹಾಕಿ ನಿಜವಾದ ವಿಷಯವನ್ನು ದೃಢಪಡಿಸಿಕೊಳ್ಳಲು ಸ್ವತಂತ್ರರಿರುತ್ತಾರೆ. ಅವರು ವಿಚಾರಣೆ ಮಾಡುವಾಗ, ಸೂಕ್ತವೆಂದು ಭಾವಿಸುವ ಯಾರೇ ವ್ಯಕ್ತಿಯನ್ನು, ಎಂದರೆ, ಗ್ರಾಮಾಧಿಕಾರಿಯ, ಮತದಾರನ ಅಕ್ಕಪಕ್ಕದ ಮನೆಯವರ ಅಥವಾ ಹಾಜರಿರುವ ಇತರ ಯಾರೇ ವ್ಯಕ್ತಿಯ ಸಾಕ್ಷ್ಯವನ್ನು ತೆಗೆದುಕೊಳ್ಳಬಹುದು. ಆ ರೀತಿಯ ಸಾಕ್ಷ್ಯವನ್ನು ತೆಗೆದುಕೊಳ್ಳುವಾಗ, ಪ್ರಶ್ನಿಸಿದ ಅಥವಾ ಸಾಕ್ಷ್ಯ ನೀಡುವ ಇತರ ಯಾರೇ ವ್ಯಕ್ತಿಯು ಪ್ರಮಾಣಮಾಡಿ ಹೇಳಬೇಕಾಗುತ್ತದೆ.

41.3 ವಿಚಾರಣೆಯು ಮುಗಿದ ನಂತರ ಪ್ರಿಸೈಡಿಂಗ್ ಆಫೀಸರ್ ಅವರು ಪ್ರಶ್ನೆಯು/ಆಕ್ಷೇಪಣೆಯು ಸಾಬೀತಾಗಲಿಲ್ಲವೆಂದು ಭಾವಿಸಿದರೆ, ಆ ವ್ಯಕ್ತಿಗೆ ಮತ ನೀಡಲು ಅನುಮತಿ ಕೊಡುತ್ತಾರೆ. ಪ್ರಶ್ನೆಯು ಸಾಬೀತಾಗಿದೆ ಎಂದು ಪರಿಗಣಿಸಿದರೆ ಪ್ರಿಸೈಡಿಂಗ್ ಆಫೀಸರ್ ಅವರು ಆ ವ್ಯಕ್ತಿಯು ಮತ ನೀಡದಂತೆ ನಿಷೇಧಿಸುತ್ತಾರೆ. ಅಂತಹ ಸಂದರ್ಭದಲ್ಲಿ ಮತಗಟ್ಟೆಯು ಯಾವ ಪೊಲೀಸ್ ಠಾಣೆಯ ವ್ಯಾಪ್ತಿಗೊಳಪಡುವುದೋ ಆ ಪೊಲೀಸ್ ಠಾಣಾಧಿಕಾರಿಗೆ ಲಿಖಿತ ದೂರನ್ನು ನೀಡಿ, ನಕಲಿ ಮತದಾರನು ಅಪರಾಧವನ್ನು ಮಾಡಿದ್ದಕ್ಕಾಗಿ ಸಂಬಂಧಪಟ್ಟ ಆ ವ್ಯಕ್ತಿಯ ಮೇಲೆ ಕಾನೂನು ಕ್ರಮ ನಡೆಸಲು ಕರ್ತವ್ಯದ ಮೇಲಿರುವ ಪೊಲೀಸಿನವರ ವಶಕ್ಕೆ ಆ ವ್ಯಕ್ತಿಯನ್ನು ಒಪ್ಪಿಸುವಂತೆ ಪ್ರಿಸೈಡಿಂಗ್ ಆಫೀಸರ್ ಅವರಿಗೆ ಸಹ ಸೂಚಿಸಲಾಗಿದೆ.

## 42. ಪ್ರಶ್ನಿಸಲು ನೀಡುವ ಶುಲ್ಕ (ಚಾಲೆಂಜ್ ಫೀಜು)ವನ್ನು ವಾಪಸ್ಸು ಮಾಡುವುದು ಅಥವಾ ಮುಟ್ಟುಗೋಲು ಹಾಕಿಕೊಳ್ಳುವುದು.

42.1 ವಿಚಾರಣೆಯು ಮುಗಿದ ನಂತರ ಮೇಲೆ ಹೇಳಿರುವ (ಅನುಬಂಧ IV) ಚಾಲೆಂಜ್ ಮಾಡಲಾದ (ಆಕ್ಷೇಪಿತ) ಮತಗಳ ಪಟ್ಟಿಯಲ್ಲಿರುವ ಸೂಕ್ತ ಅಂಕಣದಲ್ಲಿ (ಅಂಕಣ 10) ಮತ್ತು ರಸೀದಿ ಪುಸ್ತಕದಲ್ಲಿ ಆ ರಸೀದಿಯ ಕೌಂಟರ್ ಫಾಯಿಲ್‌ನ ಮೇಲೆ ಆತನಿಂದ ಸ್ವೀಕೃತ ಷರಾ ಬರೆಸಿಕೊಂಡ ನಂತರ ಪ್ರಿಸೈಡಿಂಗ್ ಆಫೀಸರ್‌ರವರು 2/-ರೂ.ಗಳ ಪ್ರಶ್ನಿಸಲು ನೀಡುವ ಶುಲ್ಕ (ಚಾಲೆಂಜ್ ಫೀಜು)ವನ್ನು ಪ್ರಶ್ನಿಸಿದವನಿಗೆ ಹಿಂದಿರುಗಿಸುತ್ತಾರೆ.

42.2 ಆದರೆ, ಪ್ರಶ್ನೆಯು ಸುಳ್ಳೆಂದು ಅಥವಾ ಸದ್ಭಾವನೆಯಿಂದ ಮಾಡಿದ್ದಲ್ಲವೆಂದು ಪ್ರಿಸೈಡಿಂಗ್ ಆಫೀಸರ್ ಅವರಿಗೆ ಕಂಡುಬಂದರೆ, ಅವರು ಪ್ರಶ್ನಿಸಲು ನೀಡಿದ ಶುಲ್ಕ (ಚಾಲೆಂಜ್ ಫೀಜು)ವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುತ್ತಾರೆ ಮತ್ತು ಅದನ್ನು ಪ್ರಶ್ನಿಸಿದ ವ್ಯಕ್ತಿಗೆ ಹಿಂದಿರುಗಿಸುವುದಿಲ್ಲ.

## 43. ಮತದಾರರ ಪಟ್ಟಿಯಲ್ಲಿ ಲಿಪಿಕ ಹಾಗೂ ಮುದ್ರಣ ದೋಷಗಳಿಗೆ ಪ್ರಾಮುಖ್ಯತೆ ಕೊಡಬಾರದು.

ಮತದಾರರ ಪಟ್ಟಿಯಲ್ಲಿ ನಮೂದಿಸಿರುವ ಮತದಾರನಿಗೆ ಸಂಬಂಧಿಸಿದ ವಿವರಗಳು ಕೆಲವು ಬಾರಿ, ಉದಾಹರಣೆಗೆ ಮತದಾರನ ಸರಿಯಾದ ವಯಸ್ಸಿನ ಬಗ್ಗೆ ತಪ್ಪಾಗಿ ಮುದ್ರಿತವಾಗಿರುವ ಅಥವಾ ಹಳೆಯದಾಗಿರುವ ಸಂಭವವಿರುತ್ತದೆ. ಮತದಾನದಲ್ಲಿ ಮತದಾರನ ವಯಸ್ಸಿನ ನಮೂದಿನಲ್ಲಿ ಕೇವಲ 2/3 ವರ್ಷಗಳಷ್ಟು ವ್ಯತ್ಯಾಸವಿದ್ದಲ್ಲಿ, ಲಿಪಿಕ ತಪ್ಪುಗಳಿದ್ದರೆ ಅಥವಾ ಮುದ್ರಣ ದೋಷಗಳಿದ್ದರೆ ಅವುಗಳಿಗೆ ಪ್ರಾಮುಖ್ಯತೆ ಕೊಡಬಾರದು. ಆದರೆ, ನೀವು ಮತದಾರನೆಂದು ಹೇಳಿಕೊಳ್ಳುವ ವ್ಯಕ್ತಿಯ ಗುರುತಿನ ಬಗ್ಗೆ ಮತದಾರರ ಪಟ್ಟಿಯಲ್ಲಿ ನಮೂದಾಗಿರುವ ಇತರ ವಿವರಗಳ ಪ್ರಕಾರ ಖಚಿತವಾಗಿ ಮನವರಿಕೆ ಮಾಡಿಕೊಂಡಿರಬೇಕು. ಒಂದುವೇಳೆ ಮತದಾರರ ಪಟ್ಟಿಯನ್ನು ಒಂದಕ್ಕಿಂತ ಹೆಚ್ಚು ಭಾಷೆಗಳಲ್ಲಿ ಸಿದ್ದಪಡಿಸಲಾಗಿದ್ದು, ಒಬ್ಬ ವ್ಯಕ್ತಿಯ ಹೆಸರನ್ನು ಮತದಾರರ ಅಧಿಕೃತ ಪಟ್ಟಿಯ ಪ್ರತಿಯಲ್ಲಿ ಸೇರಿಸಿರದಿದ್ದರೆ, ಆತನ ಹೆಸರು ಇತರ ಭಾಷೆಯಲ್ಲಿರುವ ಮತದಾರರ ಪಟ್ಟಿಯಲ್ಲಿ ಇದ್ದರೆ ಅಂತಹ ವ್ಯಕ್ತಿಗೆ ಪ್ರಿಸೈಡಿಂಗ್ ಅಧಿಕಾರಿಯು ಮತ ಚಲಾಯಿಸಲು ಅನುಮತಿಸತಕ್ಕದ್ದು. ಅಂತಹ ಮತದಾರನ ಬಗ್ಗೆ ಆಕ್ಷೇಪಣೆ ವ್ಯಕ್ತಪಡಿಸಬಾರದು.

## 44. ಮತದಾರನ ಅರ್ಹತೆಯನ್ನು ಪ್ರಶ್ನಿಸತಕ್ಕದ್ದಲ್ಲ.

ಗುರುತು ಮಾಡಿದ ಮತದಾರರ ಪಟ್ಟಿಯಲ್ಲಿ ಹೆಸರು ನಮೂದಾಗಿರುವ ಪ್ರತಿಯೊಬ್ಬ ವ್ಯಕ್ತಿಯೂ ಚುನಾವಣೆಯಲ್ಲಿ ಮತ ಚಲಾಯಿಸಲು ಹಕ್ಕುಳ್ಳವನಾಗಿರುತ್ತಾನೆ. ಅಂತಹ ಮತದಾರನ ಗುರುತಿನ ಬಗ್ಗೆ ಯಾವುದೇ ಅನುಮಾನಗಳು ಇಲ್ಲದಿದ್ದಲ್ಲಿ, ಮತಗಟ್ಟೆಯಲ್ಲಿ ಯಾರೇ ಮತಗಟ್ಟೆ ಏಜೆಂಟನು ಪ್ರಿಸೈಡಿಂಗ್ ಅಧಿಕಾರಿಗೆ ಈ ಕುರಿತು ಪ್ರಶ್ನಿಸತಕ್ಕದ್ದಲ್ಲ.

## 45. ಕಡಿಮೆ ವಯಸ್ಸಿನ ಮತದಾರರಿಂದ ಮತ ಚಲಾಯಿಸುವುದನ್ನು ತಡೆಗಟ್ಟುವ ಬಗ್ಗೆ ಮುನ್ನೆಚ್ಚರಿಕೆ.

45.1 ಮೇಲೆ ತಿಳಿಸಿರುವಂತೆ, ಮತದಾರರ ಪಟ್ಟಿಯಲ್ಲಿ ಹೆಸರು ನಮೂದಾಗಿರುವ ಮತದಾರರ ಅರ್ಹತೆಯ (eligibility) ಬಗ್ಗೆ ಮತಗಟ್ಟೆಯ ಒಳಗೆ ಪ್ರಿಸೈಡಿಂಗ್ ಅಧಿಕಾರಿಯು ಪ್ರಶ್ನಿಸುವಂತಿಲ್ಲ ಅಥವಾ ವಿಚಾರಣೆ ನಡೆಸುವಂತಿಲ್ಲ. ಆದರೆ, ಅರ್ಹತಾದಾಯಕ ವಯಸ್ಸಿಗಿಂತ ತುಂಬಾ ಕಡಿಮೆ ವಯಸ್ಸಿನ ವ್ಯಕ್ತಿಯೆಂದು ಪ್ರಿಸೈಡಿಂಗ್ ಅಧಿಕಾರಿಯು ಯಾರೇ ಮತದಾರರನ್ನು ಪರಿಗಣಿಸಿದಲ್ಲಿ, ಅಂತಹ ಮತದಾರರಿಂದ ನಿಗದಿತ ನಮೂನೆ (ಅನುಬಂಧ–V) ಯಲ್ಲಿ ಅವನ ವಯಸ್ಸಿನ ಬಗ್ಗೆ ಘೋಷಣೆಯನ್ನು ಪಡೆಯುವಂತೆ ಪ್ರಿಸೈಡಿಂಗ್ ಅಧಿಕಾರಿಗೆ ಆಯೋಗವು ಸೂಚಿಸಿದೆ. ಅಂತಹ ಮತದಾರನಿಂದ ಘೋಷಣೆಯನ್ನು ಪಡೆಯುವ ಮೊದಲು, ತನ್ನ ಹೆಸರನ್ನು ಮತದಾರರ ಪಟ್ಟಿಯಲ್ಲಿ ತಪ್ಪು ದಾಖಲೆಗಳನ್ನು ನೀಡಿ ಸೇರಿಸಿರುವ ಬಗ್ಗೆ ದಂಡನೆಗೆ ಗುರಿಯಾಗಬೇಕಾಗುತ್ತದೆ ಎಂಬುದನ್ನು ಪ್ರಿಸೈಡಿಂಗ್ ಅಧಿಕಾರಿಯು ಆತನಿಗೆ ಮನವರಿಕೆ ಮಾಡಿಕೊಡುವರು ಮತ್ತು 1950ರ ಜನತಾ ಪ್ರಾತಿನಿಧ್ಯ ಅಧಿನಿಯಮ, 31 ನೇ ಪ್ರಕರಣದಲ್ಲಿರುವ ದಂಡನೆ ಕುರಿತು ಉಪಬಂಧವನ್ನು ಆತನಿಗೆ ತಿಳಿಹೇಳುವರು.

45.2 ಒಂದುವೇಳೆ ಮತದಾರರ ಪಟ್ಟಿಯಲ್ಲಿ ಹೆಸರು ನಮೂದಾಗಿರುವ ಯಾವುದೇ ಮತದಾರನು ನೋಡಲು ಕಡಿಮೆ ವಯಸ್ಸಿನವರಂತೆ ಕಂಡುಬಂದಲ್ಲಿ, ನೀವು ಅದನ್ನು ಪ್ರಿಸೈಡಿಂಗ್ ಅಧಿಕಾರಿಯ ಗಮನಕ್ಕೆ ತರಬಹುದು. ಹಾಗೂ ಮೇಲೆ ತಿಳಿಸಿರುವಂತೆ ಪ್ರಿಸೈಡಿಂಗ್ ಅಧಿಕಾರಿಯು ಅಂತಹ ಮತದಾರರ ವಿರುದ್ಧ ಪ್ಯಾರಾ 45.1 ರಲ್ಲಿ ತಿಳಿಸಿರುವಂತೆಯೇ ಕ್ರಮ ಜರುಗಿಸುತ್ತಾರೆ.

## 46. ಅಂಧ ಅಥವಾ ದುರ್ಬಲ ಮತದಾರರಿಂದ ಮತದಾನ.

46.1 ಅಂಧತ್ವ ಅಥವಾ ಇತರ ದೈಹಿಕ ದುರ್ಬಲತೆಯ ಕಾರಣದಿಂದ ಯಾರೇ ಮತದಾರನು ಬ್ಯಾಲೆಟಿಂಗ್ ಯೂನಿಟ್‌ನ ಮೇಲೆ ಅಂಟಿಸಿರುವ ಬ್ಯಾಲೆಟಿಂಗ್ ಪೇಪರ್‌ನಲ್ಲಿರುವ ಸಂಕೇತವನ್ನು ಗುರುತಿಸಲು ಅಸಮರ್ಥನಾಗಿದ್ದಾನೆಂದು ಅಥವಾ ಸಹಾಯಕರ ನೆರವಿಲ್ಲದೆ ಸಮುಚಿತವಾದ ಬಟನನ್ನು ಒತ್ತುವ ಮೂಲಕ ತನ್ನ ಮತ ದಾಖಲಿಸಲು ಅಸಮರ್ಥನಾಗಿದ್ದಾನೆಂದು ಪ್ರಿಸೈಡಿಂಗ್ ಅಧಿಕಾರಿಗೆ ಮನವರಿಕೆಯಾದರೆ, ಅವರು ಆ ಮತದಾರನಿಗೆ ಸಹಾಯಕವಾಗಿ 18 ವರ್ಷಕ್ಕಿಂತ ಕಡಿಮೆ ವಯಸ್ಸಿನವನಲ್ಲದ ಸಂಗಡಿಗನೊಬ್ಬನನ್ನು ತನ್ನ ಪರವಾಗಿ ಮತ್ತು ತನ್ನ ಇಚ್ಛೆಯನುಸಾರ ಮತವನ್ನು ದಾಖಲಿಸಲು ತನ್ನ ಜೊತೆಗೆ ವೋಟಿಂಗ್ ಕಂಪಾರ್ಟ್‌ಮೆಂಟ್‌ಗೆ ಕರೆದೊಯ್ಯಲು ಅನುಮತಿ ನೀಡುವರು. ಆದರೆ **ಮತದಾರನು ಅನಕ್ಷರಸ್ಥನಾಗಿದ್ದಲ್ಲಿ ಅವನಿಗೆ ಮತದಾನ ಚಲಾಯಿಸಲು ಸಹಾಯಕ್ಕಾಗಿ ಸಂಗಡಿಗನನ್ನು ನೀಡುವುದು ಸಮಂಜಸ ಕಾರಣವಲ್ಲ. ಹಾಗೂ, ಅವರಿಗೆ ಮತ ಚಲಾಯಿಸುವಲ್ಲಿ ಸಹಕರಿಸಲು ಯಾವುದೇ ಪೋಲಿಂಗ್ ಸಿಬ್ಬಂದಿಯು ಸಂಗಡಿಗನಾಗಿ ವರ್ತಿಸತಕ್ಕದ್ದಲ್ಲ.**

46.2 ಯಾರೇ ಅಭ್ಯರ್ಥಿ, ಅವನ ಚುನಾವಣಾ ಏಜೆಂಟ್ ಅಥವಾ ಮತಗಟ್ಟೆ ಏಜೆಂಟನು (18 ವರ್ಷಗಳಿಗಿಂತ ಕಡಿಮೆ ಇರದ) ಅಂಧ ಅಥವಾ ದುರ್ಬಲ ಮತದಾರನಿಗೆ ಸಂಗಡಿಗನಾಗಿ ವರ್ತಿಸಬಹುದಾಗಿರುತ್ತದೆ. ಆದರೆ ಆ ದಿನದಂದು ಯಾವುದೇ ಮತಗಟ್ಟೆಯಲ್ಲಿ ಒಬ್ಬರಿಗೆ ಮಾತ್ರ ಸಂಗಡಿಗನಾಗಿ ಕೆಲಸ ಮಾಡಬಹುದಾಗಿರುತ್ತದೆ. ಮತದಾರನ ಸಂಗಡಿಗನಾಗಿ ಕಾರ್ಯ ನಿರ್ವಹಿಸಲು ಯಾರೇ ವ್ಯಕ್ತಿಯು, ಮತದಾರನ ಪರವಾಗಿ ಆತನು ದಾಖಲಿಸಿದ ಮತದ ರಹಸ್ಯವನ್ನು ಕಾಪಾಡುವುದಾಗಿ ಮತ್ತು ಆ ದಿನ ಆತನು ಯಾವುದೇ ಇತರ ಮತಗಟ್ಟೆಯಲ್ಲಿ ಈಗಾಗಲೇ ಇತರ ಯಾರೇ ಮತದಾರನಿಗೆ ಸಂಗಡಿಗನಾಗಿ ಕಾರ್ಯ ನಿರ್ವಹಿಸಿಲ್ಲ ಎಂಬುದಾಗಿ ಘೋಷಣೆಯನ್ನು ನಿಗದಿತ ನಮೂನೆ (ಅನುಬಂಧ– VI) ರಲ್ಲಿ ನೀಡಬೇಕಿರುತ್ತದೆ.

## 47. ಟೆಂಡರ್ಡ್ ಮತಗಳು.

ತಾನೇ ಮತದಾರನೆಂದು ಹೇಳಿ ಬೇರೊಬ್ಬ ವ್ಯಕ್ತಿಯು ಈಗಾಗಲೇ ಮತ ಚಲಾಯಿಸಿ ಹೋದ ತರುವಾಯ ತಾನೇ ನಿಜವಾದ ಮತದಾರನೆಂದು ಹೇಳಿಕೊಂಡು ಮತಗಟ್ಟೆಗೆ ಬರುವ ಒಬ್ಬ ವ್ಯಕ್ತಿ ತನ್ನ ಮತ ಚಲಾಯಿಸಬೇಕೆಂದು ಕೇಳಬಹುದು. ಅಂಥ ಸಂದರ್ಭದಲ್ಲಿ ಆತನ ಗುರುತಿನ ಬಗ್ಗೆ ಖಾತರಿಪಡಿಸಿಕೊಳ್ಳಲು ಅವಶ್ಯಕವೆಂದು ಪ್ರಿಸೈಡಿಂಗ್ ಅಧಿಕಾರಿಯು ಭಾವಿಸುವಂತಹ ಪ್ರಶ್ನೆಗಳನ್ನು ಆತನಿಗೆ ಹಾಕಬಹುದು. ಆತನು ಗುರುತನ್ನು ರುಜುವಾತುಪಡಿಸಿದ ಮೇಲೆ ಆತನ ಗುರುತಿನ ಬಗ್ಗೆ ಪ್ರಿಸೈಡಿಂಗ್ ಅಧಿಕಾರಿಗೆ ಮನವರಿಕೆಯಾದರೆ ಅವರು ಆ ಮತದಾರನಿಗೆ ಟೆಂಡರ್ಡ್ ಮತಪತ್ರದ ಮೂಲಕ ಮತ ಚಲಾವಣೆಗೆ ಅನುಮತಿಸುವರು. **ಆದರೆ ಮತಯಂತ್ರದ ಮೂಲಕ ಅಲ್ಲ.** ಆ ಉದ್ದೇಶಕ್ಕಾಗಿ ಪ್ರಿಸೈಡಿಂಗ್ ಅಧಿಕಾರಿಯು ಟೆಂಡರ್ಡ್ ಮತಗಳ ಪಟ್ಟಿಯಲ್ಲಿ ಅವಶ್ಯಕ ದಾಖಲಾತಿಗಳನ್ನು ಮಾಡಿ (Form 19B) ಸಂಬಂಧಿಸಿದ ಮತದಾರನ ಸಹಿ ಅಥವಾ ಹೆಬ್ಬೆಟ್ಟಿನ ಗುರುತನ್ನು ಪಡೆಯುವರು. ಅಂತಹ ಮತದಾರನಿಗೆ ಮತಗಟ್ಟೆಯಲ್ಲಿನ ಮತಯಂತ್ರದ ಬ್ಯಾಲೆಟ್ ಯೂನಿಟ್‌ನ ಮೇಲೆ ಅಂಟಿಸಲಾದ ಮತಪತ್ರದಂತಹ ವಿನ್ಯಾಸವನ್ನೇ ಹೊಂದಿರುವ ಟೆಂಡರ್ಡ್ ಮತಪತ್ರವನ್ನು ನೀಡಲಾಗುವುದು ಹಾಗೂ ಅದರ ಹಿಂಬದಿಯಲ್ಲಿ "ಟೆಂಡರ್ಡ್ ಮತಪತ್ರ" ಎನ್ನುವ ಪದಗಳು ಮುದ್ರಿತವಾಗಿರುತ್ತದೆ ಅಥವಾ ಬರೆಯಲಾಗಿರುತ್ತದೆ. ಮತದಾರನು ಟೆಂಡರ್ಡ್ ಮತಪತ್ರದಲ್ಲಿ ಬಾಣದ ಕತ್ತರಿ ಗುರುತಿನ ರಬ್ಬರ್ ಸ್ಟ್ಯಾಂಪನ್ನು ಉಪಯೋಗಿಸಿ ಮತವನ್ನು ದಾಖಲಿಸತಕ್ಕದ್ದು. ಇಂತಹ ಸ್ಟ್ಯಾಂಪನ್ನು ಮತಪತ್ರಗಳು ಹಾಗೂ ಮತಪೆಟ್ಟಿಗೆಗಳನ್ನು ಬಳಸುವ ಸಾಂಪ್ರದಾಯಿಕ ಪದ್ಧತಿಯಲ್ಲಿ ಉಪಯೋಗಿಸಲಾಗುತ್ತದೆ. ಸಂಬಂಧಪಟ್ಟ ಮತದಾರನು ಟೆಂಡರ್ಡ್ ಮತಪತ್ರದ ಮೇಲೆ ತನ್ನ ಮತವನ್ನು ವೋಟಿಂಗ್ ಕಂಪಾರ್ಟ್‌ಮೆಂಟ್‌ನಲ್ಲಿ ಚಲಾಯಿಸಿದ ನಂತರ, ಅದನ್ನು ಮಡಚಿ ಪ್ರಿಸೈಡಿಂಗ್ ಅಧಿಕಾರಿಗೆ ನೀಡತಕ್ಕದ್ದು. ಅವರು ಈ

ಉದ್ದೇಶಕ್ಕಾಗಿ ವಿಶೇಷವಾಗಿ ಒದಗಿಸಿರುವ ಲಕೋಟೆಯಲ್ಲಿ ಎಲ್ಲ ಟೆಂಡರ್ಡ್ ಮತಪತ್ರಗಳನ್ನು ಇಡಲಾಗುತ್ತದೆ.

## 48. ಮತದಾರರು ಮತ ಚಲಾಯಿಸದಿರಲು ನಿರ್ಧರಿಸುವುದು.

ಒಬ್ಬ ಮತದಾರನು ತನ್ನ ಮತದಾರನ ಪಟ್ಟಿಯ ಸಂಖ್ಯೆಯನ್ನು ಯುಕ್ತವಾಗಿ ಮತದಾರರ ರಿಜಿಸ್ಟರ್‌ನಲ್ಲಿ (Form 20A) ನಮೂದಿಸಿದ ಮತ್ತು ಆ ರಿಜಿಸ್ಟರಿನಲ್ಲಿ ತನ್ನ ಸಹಿ/ ಹೆಬ್ಬೆಟ್ಟಿನ ಗುರುತನ್ನು ಹಾಕಿದ ನಂತರ ತನ್ನ ಮತವನ್ನು ದಾಖಲು ಮಾಡದಿರಲು ನಿರ್ಧರಿಸಿದರೆ, ಆತನು ತನ್ನ ಮತ ದಾಖಲಿಸುವಂತೆ ಅವನನ್ನು ಬಲವಂತಪಡಿಸತಕ್ಕದ್ದಲ್ಲ ಅಥವಾ ಒತ್ತಾಯಿಸತಕ್ಕದ್ದಲ್ಲ. ಅವನು ಮತವನ್ನು ದಾಖಲಿಸದಿರಲು ತೀರ್ಮಾನಿಸಿದ್ದರೆ "ಮತ ಚಲಾಯಿಸಲು ನಿರಾಕರಿಸಿದ್ದಾನೆ" ಎಂಬ ಷರಾವನ್ನು ಪ್ರಿಸೈಡಿಂಗ್ ಅಧಿಕಾರಿಯು ಮತದಾರರ ರಿಜಿಸ್ಟರಿನಲ್ಲಿ ಆತನಿಗೆ ಸಂಬಂಧಿಸಿದ ನಮೂದಿನ ಎದುರಿನ ಷರಾ ಅಂಕಣದಲ್ಲಿ ಮಾಡಿ ಕರ್ನಾಟಕ ಮುನಿಸಿಪಾಲಿಟೀಸ್(ಕೌನ್ಸಿಲರುಗಳ ಚುನಾವಣೆ) (ತಿದ್ದುಪಡಿ / ನಿಯಮಗಳು 2010ರ ನಿಯಮ 64 O ರನ್ವಯ ಅದರ ಕೆಳಗೆ ಆತನ ಸಹಿ ಅಥವಾ ಹೆಬ್ಬೆಟ್ಟಿನ ಗುರುತನ್ನು ಪಡೆಯತಕ್ಕದ್ದು. ಆದರೆ, ಮತದಾರರ ರಿಜಿಸ್ಟರಿನ ಅಂಕಣ (1) ರಲ್ಲಿ ಮತದಾರನ ಅಥವಾ ಯಾರೇ ತರುವಾಯದ ಮತದಾರರ ಕ್ರಮ ಸಂಖ್ಯೆಯಲ್ಲಿ ಯಾವುದೇ ಬದಲಾವಣೆ ಮಾಡುವ ಅವಶ್ಯಕತೆ ಇರುವುದಿಲ್ಲ. ಮತದಾರನು ಮತವನ್ನು ದಾಖಲಿಸುವುದಕ್ಕಾಗಿ ಬ್ಯಾಲೆಟ್ ಯೂನಿಟ್ಟನ್ನು ಸಿದ್ಧಗೊಳಿಸಲು ಕಂಟ್ರೋಲ್ ಯೂನಿಟ್‌ನಲ್ಲಿರುವ 'ಮತಪತ್ರ' ಗುಂಡಿಯನ್ನು ಒತ್ತಿದ ಮೇಲೆ ಮತದಾರನು ಮತ ಚಲಾಯಿಸಲು ನಿರಾಕರಿಸಿದರೆ, ಕಂಟ್ರೋಲ್ ಯೂನಿಟ್‌ನ ಜವಾಬ್ದಾರಿ ಹೊಂದಿರುವ ಪ್ರಿಸೈಡಿಂಗ್ ಅಧಿಕಾರಿ/ ಮೂರನೇ ಪೋಲಿಂಗ್ ಅಧಿಕಾರಿಯಾಗಲಿ, ಮುಂದಿನ ಮತದಾರನನ್ನು, ಮತ ದಾಖಲಿಸಲು ನೇರವಾಗಿ ವೋಟಿಂಗ್ ಕಂಪಾರ್ಟ್‌ಮೆಂಟ್‌ಗೆ ಹೋಗುವಂತೆ ನಿರ್ದೇಶಿಸುವರು ಅಥವಾ ಕಂಟ್ರೋಲ್ ಯೂನಿಟ್‌ನ ಹಿಂಬದಿಯ ಕಂಪಾರ್ಟ್‌ಮೆಂಟ್‌ನಲ್ಲಿರುವ 'ಪವರ್' ಸ್ವಿಚ್ಚನ್ನು 'OFF' ಸ್ಥಿತಿಗೆ ತಂದು ಮತ್ತೇ 'ON' ಸ್ಥಿತಿಗೆ ತರತಕ್ಕದ್ದು, ಹಾಗೂ "ಬ್ಯಾಲೆಟ್" ಬಟನನ್ನು ಅದುಮಿ ಮುಂದಿನ ಮತದಾರನಿಗೆ ವೋಟಿಂಗ್ ಕಂಪಾರ್ಟ್‌ಮೆಂಟಿಗೆ ಹೋಗಿ ತನ್ನ ಮತವನ್ನು ಚಲಾಯಿಸುವಂತೆ ಸೂಚಿಸಬಹುದು. ಒಂದು ವೇಳೆ ಕಂಟ್ರೋಲ್ ಯೂನಿಟ್‌ನ ಮೇಲಿರುವ "ಬ್ಯಾಲೆಟ್" ಬಟನ್ ಅನ್ನು ಬ್ಯಾಲೆಟ್ ಯೂನಿಟ್‌ನಲ್ಲಿ ಮತವನ್ನು ದಾಖಲಿಸಲು ಒತ್ತಿದ ತರುವಾಯ ಕೊನೆಯ ಮತದಾರನು ಮತ ಚಲಾಯಿಸಲು ನಿರಾಕರಿಸಿದರೆ, ಕಂಟ್ರೋಲ್ ಯೂನಿಟ್‌ನ ಪ್ರಭಾರದಲ್ಲಿರುವ ಪ್ರಿಸೈಡಿಂಗ್ ಆಫೀಸರ್/ ಮೂರನೇ ಪೋಲಿಂಗ್ ಆಫೀಸರ್‌ರವರು ಕಂಟ್ರೋಲ್ ಯೂನಿಟ್‌ನ ಹಿಂಬದಿಯ ಕಂಪಾರ್ಟ್‌ಮೆಂಟ್‌ನಲ್ಲಿನ 'ಪವರ್' ಸ್ವಿಚ್ಚನ್ನು 'ಆಫ್' ಸ್ಥಿತಿಗೆ ತರಬಹುದು ಮತ್ತು ಕಂಟ್ರೋಲ್ ಯೂನಿಟ್‌ನಿಂದ ಬ್ಯಾಲೆಟಿಂಗ್ ಯೂನಿಟ್(ಗಳ)ನ ಸಂಪರ್ಕವನ್ನು ಕಡಿತಗೊಳಿಸಬಹುದು. ಕಂಟ್ರೋಲ್ ಯೂನಿಟ್‌ನಿಂದ ಬ್ಯಾಲಟಿಂಗ್ ಯೂನಿಟ್(ಗಳ)ನ ಸಂಪರ್ಕವನ್ನು ಕಡಿತಗೊಳಿಸಿದ ನಂತರ ಮತ್ತೆ 'ಪವರ್' ಸ್ವಿಚ್ಚನ್ನು 'ಆನ್' ಸ್ಥಿತಿಗೆ ತರಬೇಕು. ಇದರಿಂದ 'ಬಿಜಿ' ದೀಪವು ಆರಿಹೋಗುತ್ತದೆ ಮತ್ತು 'ಕ್ಲೋಸ್' ಬಟನ್ ಒತ್ತಿದಾಗ ಮತದಾನ ಮುಕ್ತಾಯವಾಗುತ್ತದೆ.

## 49. ಮತದಾನ ರಹಸ್ಯದ ಉಲ್ಲಂಘನೆ.

ಮತ ಚಲಾಯಿಸಲು ಅನುಮತಿಸಲಾದ ಪ್ರತಿಯೊಬ್ಬ ಮತದಾರನೂ ಮತಗಟ್ಟೆಯಲ್ಲಿ ಮತದಾನದ ರಹಸ್ಯವನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು ಹಾಗೂ ಆತ ಮತದಾನ ವಿಧಾನವನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು. ಪ್ರಿಸೈಡಿಂಗ್ ಅಧಿಕಾರಿಯು ಮತದಾನದ ವಿಧಾನವನ್ನು ಪಾಲಿಸುವಂತೆ ಎಚ್ಚರಿಕೆ ನೀಡಿದ ನಂತರವೂ ಯಾರೇ ಮತದಾರನು ಅದನ್ನು ಪಾಲಿಸಲು ನಿರಾಕರಿಸಿದರೆ, ಪ್ರಿಸೈಡಿಂಗ್ ಅಧಿಕಾರಿ ಅಥವಾ ಅವರ ನಿರ್ದೇಶನದ ಮೇರೆಗೆ ಪೋಲಿಂಗ್ ಅಧಿಕಾರಿ ಅಂತಹ ಮತದಾರನಿಗೆ ಮತ ಚಲಾವಣೆ ಮಾಡಲು ಅನುಮತಿ ನಿರಾಕರಿಸಬಹುದು. ಮತದಾರನಿಗೆ ಈಗಾಗಲೇ ಮತದಾರನ ಚೀಟಿಯನ್ನು ನೀಡಿದ್ದರೆ ಅಂತಹ ಚೀಟಿಯನ್ನು ಅವನಿಂದ ಹಿಂತೆಗೆದುಕೊಂಡು ಅದನ್ನು ರದ್ದುಪಡಿಸುವರು. ಪ್ರಿಸೈಡಿಂಗ್

ಅಧಿಕಾರಿಯು ಮತದಾರರ ರಿಜಿಸ್ಟರಿನಲ್ಲಿ ತಮ್ಮ ಸಹಿಯ ಕೆಳಗಡೆ "ಮತ ಚಲಾಯಿಸಲು ಅವಕಾಶ ನೀಡಿಲ್ಲ ಮತದಾನದ ವಿಧಾನವನ್ನು ಉಲ್ಲಂಘಿಸಲಾಗಿದೆ" ಎಂದು ಷರಾ ಬರೆಯುವರು. ಆ ಮತದಾರನ ಕ್ರಮ ಸಂಖ್ಯೆಯಲ್ಲಿ ಅಥವಾ ಮತದಾರರ ರಿಜಿಸ್ಟರಿನ ಅಂಕಣದಲ್ಲಿ ಯಾವುದೇ ತರುವಾಯದ ಮತದಾರನ ಕ್ರಮ ಸಂಖ್ಯೆಯಲ್ಲಿ ಯಾವುದೇ ಬದಲಾವಣೆ ಮಾಡುವ ಅವಶ್ಯಕತೆ ಇರುವುದಿಲ್ಲ.

**50. ಮತದಾನ ನಡೆಯುತ್ತಿರುವ ಸಂದರ್ಭದಲ್ಲಿ ಪ್ರಿಸೈಡಿಂಗ್ ಅಧಿಕಾರಿಯು ವೋಟಿಂಗ್ ಕಂಪಾರ್ಟ್‌ಮೆಂಟಿಗೆ ಹೋಗುವುದು.**

50.1 ಕೆಲವೊಮ್ಮೆ, ವೋಟಿಂಗ್ ಕಂಪಾರ್ಟ್‌ಮೆಂಟ್‌ನಲ್ಲಿ ಇರಿಸಲಾದ ಬ್ಯಾಲೆಟ್ ಯೂನಿಟ್, ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ ಎಂದು ಪ್ರಿಸೈಡಿಂಗ್ ಅಧಿಕಾರಿಯು ಅನುಮಾನಿಸಬಹುದು ಅಥವಾ ಅನುಮಾನಿಸಲು ಕಾರಣಗಳೂ ಇರಬಹುದು, ಅಥವಾ ತನ್ನ ಮತ ಚಲಾಯಿಸಲು ವೋಟಿಂಗ್ ಕಂಪಾರ್ಟ್‌ಮೆಂಟಿಗೆ ಹೋಗಿರುವ ಮತದಾರನು ಬ್ಯಾಲೆಟ್ ಯೂನಿಟ್ಟನ್ನು ಹಾನಿಗೊಳಿಸುತ್ತಿದ್ದಾನೆ ಅಥವಾ ಅವನು ತುಂಬಾ ಸಮಯ ವೋಟಿಂಗ್ ಕಂಪಾರ್ಟ್‌ಮೆಂಟ್‌ನಲ್ಲೇ ಉಳಿದಿದ್ದಲ್ಲಿ ಪ್ರಿಸೈಡಿಂಗ್ ಅಧಿಕಾರಿಯು ಅನುಮಾನಿಸಬಹುದಾಗಿರುತ್ತದೆ. ಅಂತಹ ಸಂದರ್ಭದಲ್ಲಿ ಪ್ರಿಸೈಡಿಂಗ್ ಅಧಿಕಾರಿಯು ವೋಟಿಂಗ್ ಕಂಪಾರ್ಟ್‌ಮೆಂಟ್ ಒಳಗೆ ಹೋಗಲು ನಿಯಮ 64 Q ರಡಿ ಹಕ್ಕುಳ್ಳವರಾಗಿರುತ್ತಾರೆ ಹಾಗೂ ಬ್ಯಾಲೆಟ್ ಯೂನಿಟ್ ಹಾನಿಗೊಳಗಾಗಿಲ್ಲ ಅಥವಾ ಯಾವುದೇ ರೀತಿ ಹಾನಿಗೊಂಡಿಲ್ಲ ಎಂಬುದನ್ನು ಹಾಗೂ ಮತದಾನವು ಸುಲಲಿತವಾಗಿ ಸಾಗುವ ಬಗ್ಗೆ ಖಾತ್ರಿ ಪಡಿಸಿಕೊಳ್ಳಲು ಅವಶ್ಯಕ ಕ್ರಮ ಕೈಗೊಳ್ಳಬಹುದಾಗಿದೆ.

50.2 ಪ್ರಿಸೈಡಿಂಗ್ ಅಧಿಕಾರಿಯು ವೋಟಿಂಗ್ ಕಂಪಾರ್ಟ್‌ಮೆಂಟನ್ನು ಪ್ರವೇಶಿಸಿದಾಗಲೆಲ್ಲಾ, ಮತಗಟ್ಟೆ ಏಜೆಂಟರು ಇಚ್ಛಿಸಿದಲ್ಲಿ ಅವರನ್ನೂ ತಮ್ಮೊಂದಿಗೆ ಬರಲು ಅನುಮತಿಸುವರು.

50.3 ಒಂದುವೇಳೆ ಮತದಾರನು ವೋಟಿಂಗ್ ಕಂಪಾರ್ಟ್‌ಮೆಂಟ್‌ನೊಳಗೆ ವಿದ್ಯುನ್ಮಾನ ಮತಯಂತ್ರವನ್ನು ಹಾಳುಗೆಡವುತ್ತಿದ್ದಾನೆ ಎಂಬುದಾಗಿ ಅನುಮಾನ ಬಂದಲ್ಲಿ ಮತ್ತು ವೋಟಿಂಗ್ ಕಂಪಾರ್ಟ್‌ಮೆಂಟ್‌ನಲ್ಲಿ ತುಂಬಾ ಸಮಯ ಉಳಿದಿದ್ದಲ್ಲಿ, ಮತಗಟ್ಟೆ ಏಜೆಂಟರ ದುಗುಡವನ್ನು ಪರಿಹರಿಸಲು, ಪ್ರಿಸೈಡಿಂಗ್ ಅಧಿಕಾರಿಯು ತನ್ನೊಂದಿಗೆ ಯಾರೇ ಒಬ್ಬ ಮತಗಟ್ಟೆ ಏಜೆಂಟನನ್ನು ವೋಟಿಂಗ್ ಕಂಪಾರ್ಟ್‌ಮೆಂಟ್‌ಗೆ ಬರಲು ಸೂಚಿಸಬಹುದು.

**51. ಮತದಾನದ ಮುಕ್ತಾಯದ ಸಮಯಕ್ಕೆ ಹಾಜರಿರುವ ವ್ಯಕ್ತಿಗಳಿಂದ ಮತ ಚಲಾವಣೆ.**

ಮತದಾನದ ಮುಕ್ತಾಯಕ್ಕೆ ನಿಗದಿಪಡಿಸಿದ ಸಮಯಕ್ಕೆ ಪ್ರಿಸೈಡಿಂಗ್ ಅಧಿಕಾರಿಯು ಮತಗಟ್ಟೆಯನ್ನು ಮುಚ್ಚತಕ್ಕದ್ದು ಹಾಗೂ ತದನಂತರ ಬರುವ ಯಾವುದೇ ಮತದಾರರನ್ನು ಪ್ರವೇಶಿಸಲು ಅನುಮತಿಸತಕ್ಕದ್ದಲ್ಲ. ಆದರೆ ಮತದಾನದ ಮುಕ್ತಾಯದ ವೇಳೆಯೊಳಗೆ ಮತವನ್ನು ಚಲಾಯಿಸಲು ಮತಗಟ್ಟೆಗೆ ಬಂದು ಸಾಲಿನಲ್ಲಿ ನಿಂತಿರುವ ಮತದಾರರಿಗೆ ಮತವನ್ನು ಚಲಾಯಿಸಲು ಅನುಮತಿಸಬೇಕಾಗುತ್ತದೆ. ಈ ಉದ್ದೇಶಕ್ಕಾಗಿ ನಿಗದಿಪಡಿಸಿದ ಸಮಯ ಮುಗಿದರೂ ಮತದಾನವನ್ನು ಮುಂದುವರಿಸಬಹುದು. ಈ ಮೇಲಿನ ಉದ್ದೇಶಕ್ಕಾಗಿ ಪ್ರಿಸೈಡಿಂಗ್ ಅಧಿಕಾರಿಯು ಸರದಿಯಲ್ಲಿ ನಿಂತಿರುವ ಮತದಾರರಿಗೆ ತನ್ನ ಪೂರ್ಣ ಸಹಿಯನ್ನು ಮಾಡಿರುವ ಹಾಗೂ ಕ್ರ.ಸಂ.1ರ ನಂತರದ ಸಂಖ್ಯೆಗಳನ್ನು ಒಳಗೊಂಡ ಚೀಟಿಗಳನ್ನು ಮತದಾರರಿಗೆ ಸರದಿ ಸಾಲಿನ ಹಿಂಬದಿಯಿಂದ ಅಂದರೆ ಸಾಲಿನ ಕೊನೆಯ ಮತದಾರನಿಗೆ ಕ್ರಮಸಂಖ್ಯೆ 1ರ ಚೀಟಿ ಬರುವಂತೆ ಚೀಟಿ ನೀಡತಕ್ಕದ್ದು. ತದನಂತರ ಬರುವ ಯಾವುದೇ ಮತದಾರರಿಗೆ ಮತ ಚಲಾಯಿಸಲು ಅವಕಾಶನೀಡತಕ್ಕದ್ದಲ್ಲ.

**52. ಮತದಾನದ ಮುಕ್ತಾಯ.**

52.1 ಕೊನೆಯ ಮತದಾರನು ತನ್ನ ಮತವನ್ನು ಚಲಾಯಿಸಿದ ನಂತರ ಮತದಾನ ಕಾರ್ಯ ಮುಕ್ತಾಯವಾಗುತ್ತದೆ. ಇದರಿಂದ ಯಂತ್ರದಲ್ಲಿ ಆ ತರುವಾಯ ಮತಗಳನ್ನು ದಾಖಲಿಸುವ

ಸಾಧ್ಯತೆ ಇರುವುದಿಲ್ಲ. ಈ ಉದ್ದೇಶಕ್ಕಾಗಿ ಪ್ರಿಸೈಡಿಂಗ್ ಅಧಿಕಾರಿಯು ಕಂಟ್ರೋಲ್ ಯೂನಿಟ್‌ನಲ್ಲಿರುವ ಕ್ಲೋಸ್ ಬಟನ್‌ನ್ನು ಒತ್ತಿ ಆ ನಂತರ ಬ್ಯಾಲೆಟ್ ಯೂನಿಟ್‌ಅನ್ನು ಕಂಟ್ರೋಲ್ ಯೂನಿಟ್‌ನಿಂದ ಬೇರ್ಪಡಿಸಿ, ಕಂಟ್ರೋಲ್ ಯೂನಿಟ್‌ನ ಹಿಂದಿನ ಕಂಪಾರ್ಟ್‌ಮೆಂಟ್‌ನಲ್ಲಿರುವ ವಿದ್ಯುತ್ ಸ್ವಿಚ್‌ನ್ನು ಆಫ್ ಸ್ಥಾನಕ್ಕೆ ತರುವರು. ಈ ರೀತಿ ಕ್ಲೋಸ್ ಬಟನ್‌ನ್ನು ಒತ್ತಿದಾಗ ಕಂಟ್ರೋಲ್ ಯೂನಿಟ್ ಮೇಲಿರುವ ಡಿಸ್‌ಪ್ಲೇ ಪ್ಯಾನಲ್‌ನಲ್ಲಿ ಮತದಾನದ ಕೊನೆಯವರೆಗೆ ಮತಯಂತ್ರದಲ್ಲಿ ದಾಖಲಾಗಿರುವ ಮತಗಳ ಒಟ್ಟು ಸಂಖ್ಯೆಯನ್ನು ಕಾಣುವಿರಿ. ಈಗ ಮತ ಯಂತ್ರವು ಯಾವುದೇ ಮತವನ್ನು ದಾಖಲಿಸಿಕೊಳ್ಳುವುದಿಲ್ಲ.

52.2 ಯಂತ್ರದಲ್ಲಿ ದಾಖಲಾದ ಮತಗಳ ಒಟ್ಟು ಸಂಖ್ಯೆಯನ್ನು ಪ್ರಿಸೈಡಿಂಗ್ ಅಧಿಕಾರಿಯು ಕೂಡಲೇ ಫಾರಂ 17A (EVM) ನಲ್ಲಿ ನಮೂದಿಸಿಕೊಳ್ಳುವರು.

## 53. ಪ್ರಿಸೈಡಿಂಗ್ ಅಧಿಕಾರಿಯು ದಾಖಲಿಸಿದ ಮತಗಳ ಲೆಕ್ಕದ (ಫಾರಂ 17A (EVM)) ಪ್ರತಿಯನ್ನು ಒದಗಿಸುವುದು.

ಮತದಾನವು ಮುಕ್ತಾಯವಾದ ನಂತರ ಚುನಾವಣೆಗಳನ್ನು ನಡೆಸುವ ನಿಯಮಗಳು 1977ರ 64 ಎಸ್ ನಿಯಮದ ಮೇರೆಗೆ ಮತಯಂತ್ರದಲ್ಲಿ ದಾಖಲಾದ ಮತಗಳ ಲೆಕ್ಕವನ್ನು ಪ್ರಿಸೈಡಿಂಗ್ ಅಧಿಕಾರಿಯು ಸಿದ್ದಪಡಿಸಬೇಕಾಗುತ್ತದೆ ಎಂಬುದನ್ನು ನೀವು ಅರಿತಿರತಕ್ಕದ್ದು. ಈ ಲೆಕ್ಕವನ್ನು ಫಾರಂ 17A (EVM) ರಲ್ಲಿ ಸಿದ್ಧಪಡಿಸಬೇಕು. ನಿಗದಿತ ಫಾರಂ 17A (EVM)ರ ನಮೂನೆಯನ್ನು ಅನುಬಂಧ– VII ರಲ್ಲಿ ನೀಡಲಾಗಿದೆ. ಮೇಲ್ಕಂಡ ನಿಯಮಗಳನ್ವಯ ಪ್ರಿಸೈಡಿಂಗ್ ಅಧಿಕಾರಿಯು ದಾಖಲಾದ ಮತಗಳ ಲೆಕ್ಕದ ದೃಢೀಕರಿಸಿದ ಪ್ರತಿಗಳನ್ನು ಮತದಾನದ ಮುಕ್ತಾಯದ ವೇಳೆ ಹಾಜರಿರುವ ಪ್ರತಿಯೊಬ್ಬ ಪೋಲಿಂಗ್ ಏಜೆಂಟರಿಗೆ ಒದಗಿಸುವರು. ಮತ ಎಣಿಕೆಯ ಸಮಯದಲ್ಲಿ, **ಚಲಾಯಿತ ಮತಗಳು ಎಷ್ಟು ಎಂಬುದು ಅಭ್ಯರ್ಥಿಗೆ ಅತ್ಯವಶ್ಯಕವಾಗಿರುವುದರಿಂದ ನೀವು ಮೇಲೆ ಹೇಳಿರುವ ಚಲಾಯಿತ ಮತಗಳ ಲೆಕ್ಕದ ಪ್ರತಿಯನ್ನು ಪ್ರಿಸೈಡಿಂಗ್ ಅಧಿಕಾರಿಯಿಂದ ತಪ್ಪದೆ ಪಡೆಯತಕ್ಕದ್ದು**. ಪ್ರಿಸೈಡಿಂಗ್ ಅಧಿಕಾರಿಯಿಂದ ದಾಖಲಾದ ಮತಗಳ ಲೆಕ್ಕದ ಪ್ರತಿಗಳನ್ನು ಪೋಲಿಂಗ್ ಏಜೆಂಟ್‌ನು ಪಡೆದುದ್ದಕ್ಕೆ, ಆಯೋಗದಿಂದ ನಿಗದಿಪಡಿಸಿದ ನಮೂನೆ (ಅನುಬಂಧ-III ಭಾಗ–III)ಯಲ್ಲಿ PRO ರವರು ತಮ್ಮ ಸಹಿಯೊಂದಿಗೆ ಘೋಷಣೆ ನೀಡಬೇಕಿರುತ್ತದೆ. ಇದನ್ನು ಪ್ರಿಸೈಡಿಂಗ್ ಅಧಿಕಾರಿಯು ಮತದಾನ ಮುಗಿದ ನಂತರ ಮಾಡತಕ್ಕದ್ದು. ಒಂದುವೇಳೆ ಯಾರೇ ಮತಗಟ್ಟೆ ಏಜೆಂಟನು ಅಂತಹ ಲೆಕ್ಕದ ಪ್ರತಿಯನ್ನು ಸ್ವೀಕರಿಸಲು ನಿರಾಕರಿಸಿದಲ್ಲಿ, ಅದರ ಬಗ್ಗೆ ಪ್ರಿಸೈಡಿಂಗ್ ಅಧಿಕಾರಿಯು ಮೇಲೆ ತಿಳಿಸಲಾದ ಘೋಷಣೆಯಲ್ಲಿ ನಮೂದಿಸಿಕೊಳ್ಳುವರು.

## 54. ಮತದಾನ ಮುಕ್ತಾಯವಾದ ತರುವಾಯ ಮತಯಂತ್ರವನ್ನು ಸೀಲು ಮಾಡುವುದು.

54.1 ಮತದಾನ ಮುಕ್ತಾಯವಾಗಿ ಮತಯಂತ್ರದಲ್ಲಿ ದಾಖಲಾದ ಮತಗಳ ಲೆಕ್ಕವನ್ನು ನಮೂನೆ 17A (EVM)ನಲ್ಲಿ ತಯಾರಿಸಿದ ಹಾಗೂ ಅದರ ಪ್ರತಿಗಳನ್ನು ಹಾಜರಿರುವ ಪೋಲಿಂಗ್ ಏಜೆಂಟರಿಗೆ ಒದಗಿಸಿದ ತರುವಾಯ, ಪ್ರಿಸೈಡಿಂಗ್ ಆಫೀಸರ್ ಅವರು ಮತಯಂತ್ರವನ್ನು ಎಣಿಕೆ ಸಂಗ್ರಹಣಾ ಕೇಂದ್ರಕ್ಕೆ ಸಾಗಿಸುವುದಕ್ಕಾಗಿ ಸೀಲು ಮಾಡಿ ಭದ್ರಪಡಿಸುವರು.

54.2 ಮತಯಂತ್ರವನ್ನು ಸೀಲು ಮಾಡಿ ಭದ್ರಪಡಿಸುವುದಕ್ಕಾಗಿ ಬ್ಯಾಲೆಟಿಂಗ್ ಯೂನಿಟ್ (ಗಳು) ಮತ್ತು ಕಂಟ್ರೋಲ್ ಯೂನಿಟ್‌ನ ಸಂಪರ್ಕವನ್ನು ಬೇರ್ಪಡಿಸುವರು ಹಾಗೂ ಕಂಟ್ರೋಲ್ ಯೂನಿಟ್‌ನ ಪವರ್ ಸ್ವಿಚ್ಚನ್ನು ಆರಿಸುವರು. ಬ್ಯಾಲೆಟಿಂಗ್ ಯೂನಿಟ್‌ಗಳು ಹಾಗೂ ಕಂಟ್ರೋಲ್ ಯೂನಿಟ್(ಗಳನ್ನು)ಅನ್ನು ಅವುಗಳ ಕ್ಯಾರಿಯಿಂಗ್ ಕೇಸುಗಳಲ್ಲಿ ಇರಿಸುವರು. ಆ ತರುವಾಯ ಕ್ಯಾರಿಯಿಂಗ್ ಕೇಸುಗಳನ್ನು ಅವುಗಳ ಎರಡು ಬದಿಗಳಲ್ಲೂ, ಚುನಾವಣೆ ಹಾಗೂ ಮತಗಟ್ಟೆಗಳ ವಿವರವನ್ನು ತೋರಿಸುವ ವಿಳಾಸದ ಟ್ಯಾಗಿನ ಮೇಲೆ ಪ್ರಿಸೈಡಿಂಗ್ ಆಫೀಸರ್‌ರ ಸೀಲು ಹಾಕಿ ಸೀಲು ಮಾಡುವರು.

54.3 ಹಾಜರಿದ್ದು ತಮ್ಮ ಸೀಲುಗಳನ್ನು ಹಾಕಲು ಇಚ್ಛಿಸುವ ಉಮೇದುವಾರರು ಅಥವಾ ಅವರ ಪೋಲಿಂಗ್ ಏಜೆಂಟರುಗಳು ಕ್ಯಾರಿಯಿಂಗ್ ಕೇಸುಗಳ ಮೇಲೆ ಸೀಲು ಹಾಕಲು ಅವಕಾಶವಿದೆ.

54.4 ಮತದಾನದ ಅಂತ್ಯದಲ್ಲಿ ತಾನು ಮಾಡಲಿರುವ ಘೋಷಣೆಯಲ್ಲಿ ಅನುಬಂಧ III ರ ಭಾಗ IV ನೋಡಿ ಪ್ರಿಸೈಡಿಂಗ್ ಆಫೀಸರ್‌ರು ಬ್ಯಾಲೆಟಿಂಗ್ ಯೂನಿಟ್‌ಗಳು ಮತ್ತು ಕಂಟ್ರೋಲ್ ಯೂನಿಟ್‌ನ ಕ್ಯಾರಿಯಿಂಗ್ ಕೇಸುಗಳ ಮೇಲೆ ತಮ್ಮ ಸೀಲನ್ನು ಹಾಕಿರುವಂತಹ ಉಮೇದುವಾರರ/ ಪೋಲಿಂಗ್ ಏಜೆಂಟ್‌ಗಳ ಹೆಸರುಗಳನ್ನು ಬರೆಯುವರು.

## 55. ಚುನಾವಣಾ ಕಾಗದಪತ್ರಗಳನ್ನು ಮೊಹರು ಮಾಡುವುದು–ಪೋಲಿಂಗ್ ಏಜೆಂಟರು ಅವುಗಳಿಗೆ ತಮ್ಮ ಮೊಹರುಗಳನ್ನು ಹಾಕುವುದು.

55.1 ಮತದಾನ ಮುಕ್ತಾಯವಾದ ನಂತರ ಪ್ರಿಸೈಡಿಂಗ್ ಆಫೀಸರ್‌ರವರು, ನಿಯಮಗಳ ಮತ್ತು ಚುನಾವಣಾ ಆಯೋಗದ ಸೂಚನೆಗಳ ಪ್ರಕಾರ ಎಲ್ಲಾ ಚುನಾವಣಾ ಕಾಗದ ಪತ್ರಗಳನ್ನು ಪ್ರತ್ಯೇಕ ಪ್ಯಾಕೆಟ್ಟುಗಳಲ್ಲಿಟ್ಟು ಮೊಹರು ಮಾಡುತ್ತಾರೆ. ಮತಗಟ್ಟೆಯಲ್ಲಿ ಹಾಜರಿರುವ ಪೋಲಿಂಗ್ ಏಜೆಂಟರಿಗೂ ಸಹ ಈ ಮುಂದಿನ ದಸ್ತಾವೇಜುಗಳು ಇರುವ ಲಕೋಟೆಗಳ ಮೇಲೆ ಹಾಗೂ ಪ್ಯಾಕೆಟ್‌ಗಳ ಮೇಲೆ ಪ್ರಿಸೈಡಿಂಗ್ ಆಫೀಸರ್‌ರ ಮೊಹರಿನ ಜೊತೆಗೆ ತಮ್ಮ ಮೊಹರುಗಳನ್ನು ಹಾಕಲು ಅನುಮತಿ ಕೊಡುತ್ತಾರೆ:–

(i) ಮತದಾರರ ಪಟ್ಟಿಯ ಅಧಿಕೃತ ಪ್ರತಿ (ಮಾರ್ಕ್ಡ್ ಕಾಪಿ);

(ii) ಮತದಾರರ ರಿಜಿಸ್ಟರು;

(iii) ಮತದಾರರ ಚೀಟಿಗಳು (ವೋಟರ್ಸ್ ಸ್ಲಿಪ್ಸ್);

(iv) ಟೆಂಡರ್ಡ್ ಮತಪತ್ರಗಳು ಮತ್ತು ನಮೂನೆ 19B ನಲ್ಲಿರುವ ಟೆಂಡರ್ಡ್ ಮತಗಳ ಪಟ್ಟಿ;

(v) ಬಳಸದೇ ಇರುವ ಟೆಂಡರ್ಡ್ ಮತಗಳು;

(vi) ಆಕ್ಷೇಪಿಸಿದ (ಚಾಲೆಂಜ್ಡ್) ಮತಗಳ ಪಟ್ಟಿ;

(vii) ಬಳಸದ ಮತ್ತು ಹರಿದುಹೋದ ಕಾಗದದ ಸೀಲುಗಳೇನಾದರೂ ಇದ್ದಲ್ಲಿ, ಅವು;

(viii) ಪೋಲಿಂಗ್ ಏಜೆಂಟರ ನೇಮಕ ಪತ್ರಗಳು; ಮತ್ತು

(ix) ಮೊಹರು ಮಾಡಿದ ಪ್ಯಾಕೆಟ್‌ನಲ್ಲಿ ಇಡಲು ಚುನಾವಣಾಧಿಕಾರಿಯು (ರಿಟರ್ನಿಂಗ್ ಆಫೀಸರ್) ಸೂಚಿಸಿರುವ ಇತರೆ ಯಾವುದೇ ಕಾಗದ ಪತ್ರಗಳು.

55.2 ತಮ್ಮ ಉಮೇದುವಾರರ ಹಿತದೃಷ್ಟಿಯಿಂದ, ಚುನಾವಣಾ ಕಾಗದಪತ್ರಗಳನ್ನಿಟ್ಟಿರುವ ಪ್ಯಾಕೆಟ್ಟುಗಳ ಮೇಲೆ ನೀವು ನಿಮ್ಮ ಮೊಹರು ಹಾಕುವುದು ಒಳ್ಳೆಯದು.

## 56. ಸಂಗ್ರಹಣೆ ಮತ್ತು ದಾಸ್ತಾನು ಕೇಂದ್ರಕ್ಕೆ ಮತಯಂತ್ರ ಮತ್ತು ಚುನಾವಣಾ ಕಾಗದಗಳನ್ನು ಸಾಗಿಸುವುದು.

ಮತಯಂತ್ರ ಮತ್ತು ಎಲ್ಲಾ ಚುನಾವಣಾ ಕಾಗದ ಪತ್ರಗಳನ್ನು ಸೀಲು ಮಾಡಿ ಭದ್ರಪಡಿಸಿದ ಮೇಲೆ ಪ್ರಿಸೈಡಿಂಗ್ ಆಫೀಸರ್‌ರು ಅವನ್ನು ಸಂಗ್ರಹಣಾ ದಾಸ್ತಾನು ಕೇಂದ್ರದ ವಶಕ್ಕೆ ನೀಡುತ್ತಾರೆ ಅಥವಾ ವಶಕ್ಕೆ ತಲುಪುವಂತೆ ಕ್ರಮವಹಿಸುತ್ತಾರೆ.

**<u>57. ಮತಯಂತ್ರಗಳನ್ನು ಕೊಂಡೊಯ್ಯುವ ವಾಹನಗಳ ಜೊತೆಯಲ್ಲಿ ಹೋಗುವುದು.</u>**

ಮತಯಂತ್ರ ಮತ್ತು ಚುನಾವಣೆ ಪತ್ರಗಳನ್ನು ಸಂಗ್ರಹಣೆ/ ದಾಸ್ತಾನು ಕೇಂದ್ರಕ್ಕೆ ಕೊಂಡೊಯ್ಯುವ ವಾಹನದ ಜೊತೆಯಲ್ಲಿ ಹೋಗಲು ಪೋಲಿಂಗ್ ಏಜೆಂಟರಾದ ನಿಮಗೆ ಅನುಮತಿ ನೀಡಲಾಗಿದೆ. ಆದರೆ ನೀವು ನಿಮ್ಮದೇ ಆದ ಸಾರಿಗೆ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕು ಮತ್ತು **<u>ಮತಯಂತ್ರ ಹಾಗೂ ಚುನಾವಣಾ ಕಾಗದ ಪತ್ರಗಳನ್ನು ಕೊಂಡೊಯ್ಯುತ್ತಿರುವ ವಾಹನದಲ್ಲಿ ಪ್ರಯಾಣ ಮಾಡಲು ನಿಮಗೆ ಅವಕಾಶ ಇರುವುದಿಲ್ಲ.</u>**

**<u>58. ದೊಂಬಿ, ಮತಗಟ್ಟೆಯನ್ನು ಬಲವಂತವಾಗಿ ವಶಪಡಿಸಿಕೊಳ್ಳುವುದು, ಇತ್ಯಾದಿಗಳಿಗಾಗಿ ಮತದಾನದ ಮುಂದೂಡಿಕೆ.</u>**

ವಾಡಿಕೆಯಂತೆ ಮತದಾನವು ಮುಕ್ತಾಯವಾಗುವುದಕ್ಕೂ ಮೊದಲು ದೊಂಬಿಯಾದಲ್ಲಿ ಅಥವಾ ಯಾವುದೇ ಹಿಂಸಾಚಾರಕ್ಕೆ ಅಥವಾ ಮತಗಟ್ಟೆ ವಶಪಡಿಸಿಕೊಳ್ಳುವುದಕ್ಕೆ ಯಾವುದೇ ಪ್ರಯತ್ನ ಆದಲ್ಲಿ, ಅಂಥ ಪರಿಸ್ಥಿತಿಯು ಪ್ರಿಸೈಡಿಂಗ್ ಆಫೀಸರರ ನಿಯಂತ್ರಣಕ್ಕೆ ಮೀರಿದ್ದು, ಇದರಿಂದಾಗಿ ಮತದಾನವನ್ನು ಮುಂದುವರಿಸಲು ಸಾಧ್ಯವಾಗದಿದ್ದಲ್ಲಿ ಪ್ರಿಸೈಡಿಂಗ್ ಆಫೀಸರರು ಮತದಾನವನ್ನು ಮುಂದೂಡಬಹುದು ಅಥವಾ ನಿಲ್ಲಿಸಬಹುದು. ಮತಯಂತ್ರವನ್ನು ಕಾನೂನು ವಿರುದ್ಧವಾಗಿ ಕೆಡಿಸಿ ಹಾಕಿದರೆ ಅಥವಾ ಯಾವುದೇ ನೈಸರ್ಗಿಕ ವಿಕೋಪ ಅಥವಾ ಇತರ ಸಾಕಷ್ಟು ಕಾರಣದಿಂದಾಗಿ ಮತಗಳನ್ನು ದಾಖಲು ಮಾಡಿಕೊಳ್ಳುವುದು ಅಸಾಧ್ಯವಾದರೆ ಆಗಲೂ ಆತ ಮತದಾನವನ್ನು ಮುಂದೂಡಬಹುದು ಅಥವಾ ನಿಲ್ಲಿಸಿಬಿಡಬಹುದು. ಸ್ವಲ್ಪ ಕಾಲದಲ್ಲಿ ಬಿದ್ದು ನಿಂತು ಹೋಗುವ ಮಳೆ, ಬಲವಾಗಿ ಬೀಸುವ ಗಾಳಿ ಅಥವಾ ಮತಗಟ್ಟೆ ಸುತ್ತ ಸಣ್ಣಪುಟ್ಟ ಗಲಭೆಗಳನ್ನು ಮತದಾನ ಮುಂದೂಡಲು ಸಾಕಷ್ಟು ಕಾರಣವೆಂದು ಪರಿಗಣಿಸಲಾಗುವುದಿಲ್ಲ. ಆದಾಗ್ಯೂ, ಎರಡು ಗಂಟೆಗಳು ಕಳೆದರೂ ಮತದಾನ ಪ್ರಾರಂಭವಾಗಲು ಸಾಧ್ಯವಾಗದ ಮತದಾನ ಕೇಂದ್ರಗಳಲ್ಲಿ ಮತದಾನ ಮುಂದೂಡಿಕೆಯ ಬಗ್ಗೆ ಆದೇಶ ಹೊರಡಿಸಬಹುದೆಂದು ಆಯೋಗವು ತೀರ್ಮಾನಿಸಿದೆ. ಮೇಲ್ಕಂಡ ಕಾರಣಗಳಿಗಾಗಿ ಮತದಾನದ ಕಾರ್ಯವಿಧಾನಗಳನ್ನು ತಾತ್ಕಾಲಿಕವಾಗಿ ನಿಲ್ಲಿಸಿದ್ದರೆ ಅದು ವಿಧ್ಯುಕ್ತವಾಗಿ ಮತದಾನದ ಮುಂದೂಡುವಿಕೆ ಎಂದಾಗುವುದಿಲ್ಲ. ವಿಧ್ಯುಕ್ತವಾಗಿ ಮತದಾನವನ್ನು ಮುಂದೂಡಿದರೆ ಅಥವಾ ನಿಲ್ಲಿಸಿದ್ದರೆ ರಿಟರ್ನಿಂಗ್ ಅಧಿಕಾರಿಯ ಅನುಮತಿ ಪಡೆದು ಪ್ರಿಸೈಡಿಂಗ್ ಆಫೀಸರ್‌ರು ಹಾಜರಿರುವ ಎಲ್ಲರಿಗೂ ತರುವಾಯದಲ್ಲಿ ಅಧಿಸೂಚಿಸುವ ದಿನಾಂಕದಂದು ಮತದಾನ ನಡೆಸುವುದೆಂದು ಪ್ರಕಟಿಸುತ್ತಾರೆ. ಆ ತರುವಾಯ ಅವರು ವಾಡಿಕೆಯಂತೆ ಮತದಾನ ಮುಕ್ತಾಯವಾಗಿದೆ ಎಂಬ ರೀತಿಯಲ್ಲಿ ಪೋಲಿಂಗ್ ಏಜೆಂಟ್‌ರ ಸಮ್ಮುಖದಲ್ಲಿ ಮತಯಂತ್ರ ಮತ್ತು ಚುನಾವಣಾ ದಾಖಲೆಗಳನ್ನು ಸೀಲು ಮಾಡಿ ಭದ್ರಪಡಿಸುತ್ತಾರೆ.

**<u>59. ಮತಗಟ್ಟೆಯ ಒಳಗಡೆ ಅಥವಾ ಅದರ ಸಮೀಪದಲ್ಲಿ ಅಶಿಸ್ತಿನ ನಡತೆ.</u>**

ಮತಗಟ್ಟೆಯ ಒಳಗಡೆ ಅಥವಾ ಅದರ ಸಮೀಪದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ, ಶಿಸ್ತಿನಿಂದ ನಡೆದುಕೊಳ್ಳುವುದು ಮತ್ತು ಪ್ರಿಸೈಡಿಂಗ್ ಆಫೀಸರ್‌ರವರ ಕಾನೂನು ಸಮ್ಮತ ನಿರ್ದೇಶನಗಳನ್ನು ಪಾಲಿಸಬೇಕಾದದ್ದು ಅತ್ಯಗತ್ಯ. ನೀವು ಮತಗಟ್ಟೆಯಲ್ಲಿ ಕಟ್ಟುನಿಟ್ಟಿನ ಶಿಸ್ತಿನಿಂದಿರಬೇಕು ಮತ್ತು ಸರಿಯಾಗಿ ನಡೆದುಕೊಳ್ಳಬೇಕು. **<u>ಯಾರೇ ವ್ಯಕ್ತಿಯು ಅನುಚಿತವಾಗಿ ನಡೆದುಕೊಂಡರೆ ಅಥವಾ ದುರ್ನಡತೆ ಎಸಗಿದರೆ ಅಥವಾ ಪ್ರಿಸೈಡಿಂಗ್ ಆಫೀಸರ್‌ರವರ ಕಾನೂನು ಸಮ್ಮತ ನಿರ್ದೇಶನಗಳನ್ನು ಪಾಲಿಸಲು ತಪ್ಪಿದರೆ ಪ್ರಿಸೈಡಿಂಗ್ ಆಫೀಸರ್‌ರವರಿಗೆ ಅಂತಹ ವ್ಯಕ್ತಿಗಳನ್ನು ಮತಗಟ್ಟೆಯ ಹೊರಕ್ಕೆ ಕಳುಹಿಸುವ ಅಧಿಕಾರ ಇದೆ.</u>** ಅಂತಹ ಯಾರೇ ವ್ಯಕ್ತಿಯು ಪ್ರಿಸೈಡಿಂಗ್ ಆಫೀಸರ್‌ರವರ ಅನುಮತಿ ಇಲ್ಲದೆ ಮತಗಟ್ಟೆಯನ್ನು ಪುನ: ಪ್ರವೇಶಿಸಿದರೆ ಅಂತಹವರನ್ನು ಬಂಧಿಸಬಹುದು ಮತ್ತು 3 ತಿಂಗಳವರೆಗೆ ವಿಸ್ತರಿಸಬಹುದಾದಂತಹ ಸೆರೆಮನೆ ವಾಸವನ್ನು ಅಥವಾ ಜುಲ್ಮಾನೆಯನ್ನು ಅಥವಾ ಎರಡನ್ನೂ ವಿಧಿಸಬಹುದಾದಂತಹ ಚುನಾವಣಾ ಅಪರಾಧಕ್ಕಾಗಿ ಕಾನೂನು ಕ್ರಮ ಜರುಗಿಸುತ್ತಾರೆ. (KM Act 1964ರ ಪ್ರಕರಣ 34)

**60. ಮತಗಟ್ಟೆಗಳಿಂದ ಮತಯಂತ್ರವನ್ನು ತೆಗೆದುಕೊಂಡು ಹೋಗುವುದು ಅಥವಾ ಅದನ್ನು ಹಾಳು ಮಾಡುವುದು ಅಪರಾಧ.**

**60.1 ಯಾವುದೇ ಚುನಾವಣೆಯಲ್ಲಿ ಯಾರೇ ವ್ಯಕ್ತಿಯು, ಮತಗಟ್ಟೆಯಿಂದ ಮತಯಂತ್ರವನ್ನು ಮೋಸದಿಂದ ಅಥವಾ ಅನಧಿಕೃತವಾಗಿ ತೆಗೆದುಕೊಂದು ಹೋದರೆ ಅಥವಾ ತೆಗೆದುಕೊಂಡು ಹೋಗಲು ಪ್ರಯತ್ನಿಸಿದರೆ ಅಥವಾ ಅಂತಹ ಕೆಲಸಕ್ಕೆ ಉದ್ದೇಶಪೂರ್ವಕವಾಗಿ ಸಹಕರಿಸಿದರೆ ಅಥವಾ ಆ ದುಷ್ಕಾರ್ಯದಲ್ಲಿ ನೆರವಾದರೆ ಅಂತಹ ವರ್ತನೆಯು ಚುನಾವಣಾ ಅಪರಾಧವಾಗುತ್ತದೆ. ಆ ಅಪರಾಧವು ಸಂಜ್ಞೇಯವಾದುದಾಗುತ್ತದೆ ಮತ್ತು ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದಂತಹ ಸೆರೆಮನೆ ವಾಸ ಅಥವಾ ರೂ. 500 ರವರೆಗೆ ವಿಸ್ತರಿಸಬಹುದಾದಂತಹ ಜುಲ್ಮಾನೆಯನ್ನು ಅಥವಾ ಇವೆರಡನ್ನೂ ವಿಧಿಸಬಹುದಾದಂತಹ ಅಪರಾಧವಾಗುತ್ತದೆ. (KM Act 1964ರ ಪ್ರಕರಣ 36)**

60.2 ಅದೇ ರೀತಿ, ಸೂಕ್ತ ಅನುಮತಿ ಇಲ್ಲದೆ ಅನಧಿಕೃತವಾಗಿ ಯಾವುದೇ ಮತಯಂತ್ರವನ್ನು ಸ್ವೀಕರಿಸುವುದು ಅಥವಾ ಹೊಂದಿರುವುದು ಅಥವಾ ಯಾವುದೇ ಮತಯಂತ್ರವನ್ನು ಹಾಳು ಮಾಡುವುದು ಸಹ ಸಂಜ್ಞೇಯ ಚುನಾವಣಾ ಅಪರಾಧವಾಗುತ್ತದೆ ಮತ್ತು ಆರು ತಿಂಗಳವರೆಗೆ ವಿಸ್ತರಿಸಬಹುದಾದಂತಹ ಸೆರೆವಾಸವನ್ನು ಅಥವಾ ಜುಲ್ಮಾನೆಯನ್ನು ಅಥವಾ ಎರಡನ್ನೂ ವಿಧಿಸಬಹುದಾದಂತಹ ಅಪರಾಧವಾಗುತ್ತದೆ. (ಅದೇ ಅಧಿನಿಯಮದ ಪ್ರಕರಣ 37)

**61. ಪ್ರಚಾರ ಮಾಡುವುದಕ್ಕೆ ನಿಷೇಧ.**

ಮತಗಟ್ಟೆಯಿಂದ 100 ಮೀಟರುಗಳ ಒಳಗೆ ಪ್ರಚಾರ ಮಾಡುವುದು ಒಂದು ಅಪರಾಧವಾಗುತ್ತದೆ. ಹಾಗೆ ಮಾಡುವ ಯಾರೇ ವ್ಯಕ್ತಿಯನ್ನು ವಾರೆಂಟ್ ಇಲ್ಲದೆಯೇ ಪೋಲೀಸಿನವರು ಬಂಧಿಸಬಹುದು ಮತ್ತು KM Act 1964ರ ಪ್ರಕರಣ 32ರ ಮೇರೆಗೆ ಅವರ ಮೇಲೆ ಕಾನೂನು ಕ್ರಮ ಕೈಗೊಳ್ಳಬಹುದು. ಅದೇ ರೀತಿ ಆಯೋಗದ ನಿರ್ದೇಶನದಂತೆ, ಮತದಾನದ ದಿನ ಮತಗಟ್ಟೆಯಿಂದ 200 ಮೀಟರುಗಳ ಒಳಗೆ ಉಮೇದುವಾರರು ಯಾವುದೇ ಸಹಾಯಕ ಕೇಂದ್ರಗಳನ್ನು ಹಾಕುವುದನ್ನು ನಿಷೇಧಿಸಲಾಗಿದೆ ಮತ್ತು ಅಂತಹ ನಿರ್ದೇಶನಗಳನ್ನು ಉಲ್ಲಂಘಿಸಿ ಸಹಾಯಕ ಕೇಂದ್ರಗಳನ್ನು ಹಾಕಿದರೆ ಸಂಬಂಧಪಟ್ಟ ಅಧಿಕಾರಿಗಳು ಅವುಗಳನ್ನು ತೆಗೆದುಹಾಕುತ್ತಾರೆ.

## ಅನುಬಂಧ– I

### ನಮೂನೆ 10

### ಪೋಲಿಂಗ್ ಏಜೆಂಟರ ನೇಮಕಾತಿ*

| ಪೋಲಿಂಗ್ ಏಜೆಂಟನ ಭಾವಚಿತ್ರ ಅಂಟಿಸತಕ್ಕದ್ದು |
|---|

. . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . ಗೆ ನಡೆಯುವ ಚುನಾವಣೆಯಲ್ಲಿ ಮೇಲ್ಕಂಡ ಚುನಾವಣೆಯಲ್ಲಿ ಅಭ್ಯರ್ಥಿಯಾಗಿರುವ/ ಅಭ್ಯರ್ಥಿಯ ಚುನಾವಣಾ ಏಜೆಂಟ್ ಆಗಿರುವ + . . . . . . . . . . . . ಎಂಬ ನಾನು . . . . . . . . ಸ್ಥಳದಲ್ಲಿ ನಡೆಯುವ ಮತದಾನಕ್ಕಾಗಿ ನಿಗದಿಪಡಿಸಿರುವ ಮತಗಟ್ಟೆ ಸಂಖ್ಯೆ : . . . . . . . . . ಇಲ್ಲಿಗೆ ಪೋಲಿಂಗ್ ಏಜೆಂಟ್ ಆಗಿ ಹಾಜರಿರಲು . . . . . . . . . ಸ್ಥಳದ . . . . . . . . . ಇವರನ್ನು ಈ ಮೂಲಕ ಪೋಲಿಂಗ್ ಏಜೆಂಟ್ ಆಗಿ ನೇಮಕ ಮಾಡಿದ್ದೇನೆ.

ಸ್ಥಳ : . . . . . . . . . .

ದಿನಾಂಕ : . . . . . . . . ಅಭ್ಯರ್ಥಿಯ/ ಚುನಾವಣಾ ಏಜೆಂಟರ ಸಹಿ

ನಾನು ಅಂತಹ ಪೋಲಿಂಗ್ ಏಜೆಂಟ್ ಆಗಿ ಕಾರ್ಯನಿರ್ವಹಿಸಲು ಒಪ್ಪಿದ್ದೇನೆ.

ಸ್ಥಳ : . . . . . . . . . .

ದಿನಾಂಕ : . . . . . . . . ಪೋಲಿಂಗ್ ಏಜೆಂಟರ ಸಹಿ

## ಪ್ರಿಸೈಡಿಂಗ್ ಆಫೀಸರ್ ಸಮ್ಮುಖದಲ್ಲಿ ಪೋಲಿಂಗ್ ಏಜೆಂಟರು ಸಹಿ ಮಾಡಬೇಕಾಗಿರುವ ಘೋಷಣೆ ಪತ್ರ

ನಾನು ಓದಿದ: ನನಗೆ ಓದಿ ಹೇಳಿದ, ಕರ್ನಾಟಕ ಮುನಿಸಿಪಾಲಿಟಿಗಳ ಅಧಿನಿಯಮ 1964ರ 30ನೇ ಪ್ರಕರಣದಲ್ಲಿ ನಿಷೇಧಿಸಿರುವ ಯಾವುದೇ ಕೆಲಸವನ್ನು ಮೇಲ್ಕಂಡ ಚುನಾವಣೆಯಲ್ಲಿ ಮಾಡುವುದಿಲ್ಲವೆಂದು ಈ ಮೂಲಕ ನಾನು ಘೋಷಿಸುತ್ತೇನೆ.

ಸ್ಥಳ: . . . . . .                                        ಪೋಲಿಂಗ್ ಏಜೆಂಟರ ಸಹಿ

ನನ್ನ ಸಮಕ್ಷಮ ಸಹಿ ಮಾಡಲಾಗಿದೆ.

ದಿನಾಂಕ: . . . .                                        ಪ್ರಿಸೈಡಿಂಗ್ ಆಫೀಸರ್

---

* ಮತಗಟ್ಟೆಯಲ್ಲಿ ಅಥವಾ ಮತದಾನಕ್ಕೆ ನಿಗದಿಪಡಿಸಿರುವ ಸ್ಥಳದಲ್ಲಿ ಹಾಜರುಪಡಿಸುವುದಕ್ಕಾಗಿ ಇದನ್ನು ಪೋಲಿಂಗ್ ಏಜೆಂಟನಿಗೆ ಕೊಡಬೇಕು.

+ ಸೂಕ್ತವಲ್ಲದ ಪರ್ಯಾಯ ಪದಗಳನ್ನು ಹೊಡೆದುಹಾಕಿ.

# ಕರ್ನಾಟಕ ಮುನಿಸಿಪಾಲಿಟೀಸ್ ಅಧಿನಿಯಮ 1964ರ 30ನೇ ಪ್ರಕರಣ:–

30. ಮತದಾನದ ರಹಸ್ಯವನ್ನು ಕಾಪಾಡುವುದು : (1) ಚುನಾವಣೆಯ ಮತಗಳ ಎಣಿಕೆಯನ್ನು ದಾಖಲಿಸುವುದಕ್ಕೆ ಸಂಬಂಧಿಸಿದಂತೆ ಪ್ರತಿಯೊಬ್ಬ ಅಧಿಕಾರಿ ಗುಮಾಸ್ತ ಏಜೆಂಟ್ ಅಥವಾ ಯಾವುದೇ ಕರ್ತವ್ಯವನ್ನು ನಿರ್ವಹಿಸುವ ಇತರ ವ್ಯಕ್ತಿಯು ಮತದಾನದ ಗೌಪ್ಯತೆಯನ್ನು ಕಾಪಾಡತಕ್ಕದ್ದು ಮತ್ತು ಕಾಪಾಡುವಲ್ಲಿ ನೆರವಾಗತಕ್ಕದ್ದು ಮತ್ತು ಯಾವುದೇ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ಅಧಿಕೃತಗೊಳಿಸಲಾದ ಕೆಲವು ಉದ್ದೇಶದ ಹೊರತು ಅಂತಹ ಗೌಪ್ಯತೆಯನ್ನು ಉಲ್ಲಂಘಿಸಲು ಉದ್ದೇಶ ಹೊಂದಿರುವ ಯಾವನೇ ವ್ಯಕ್ತಿಗೆ ಯಾವದೇ ಮಾಹಿತಿಯನ್ನು ನೀಡತಕ್ಕುದ್ದಲ್ಲ.

(2) ಉಪ ಪ್ರಕರಣ (1)ರ ಉಪಬಂಧಗಳನ್ನು ಉಲ್ಲಂಘಿಸುವ ಯಾವನೇ ವ್ಯಕ್ತಿಗೆ, ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸ ಅಥವಾ ಜುಲ್ಮಾನೆ ಸಹಿತ ಅಥವಾ ಇವೆರಡೂ ಶಿಕ್ಷೆಗಳಿಗೆ ಗುರಿಪಡಿಸತಕ್ಕುದು.

## ಅನುಬಂಧ– I (ಎ)

**ಅಭ್ಯರ್ಥಿಯ ಮತ್ತು ಅವರ ಚುನಾವಣಾ ಏಜೆಂಟರ ಮಾದರಿ ಸಹಿಗಳ ಸಂಬಂಧದ ನಮೂನೆ**

. . . . . . . . . . . . . . . . . . . . ನಗರಸಭೆ/ಪುರಸಭೆ/ಪಟ್ಟಣ ಪಂಚಾಯತಿಗೆ. . . . . . . . . . . . . . ವಾರ್ಡಿನಿಂದ ಚುನಾವಣೆ

ಮತದಾನದ ಸಮಯದಲ್ಲಿ ಪೋಲಿಂಗ್ ಏಜೆಂಟರ ನೇಮಕ ಪತ್ರದಲ್ಲಿ, ಪ್ರಿಸೈಡಿಂಗ್ ಆಫೀಸರ್‌ರವರು, ಅಭ್ಯರ್ಥಿಯ ಹಾಗೂ ಅವರ ಚುನಾವಣಾ ಏಜೆಂಟರ ಸಹಿಗಳನ್ನು ಹೋಲಿಸಿ ನೋಡುವ ಉದ್ದೇಶಕ್ಕಾಗಿ ಸ್ಪರ್ಧಿಸುವ ಅಭ್ಯರ್ಥಿಯ ಹಾಗೂ ಅವರ ಚುನಾವಣಾ ಏಜೆಂಟರ ಮಾದರಿ ಸಹಿಯನ್ನು ಕೆಳಗೆ ಕೊಡಲಾಗಿದೆ.

| ಕ್ರ. ಸಂ | ಸ್ಪರ್ಧಿಸುವ ಅಭ್ಯರ್ಥಿಯ ಹೆಸರು | ಮಾದರಿ ಸಹಿ | ತನ್ನ ಚುನಾವಣಾ ಏಜೆಂಟನ ಹೆಸರು | ಮಾದರಿ ಸಹಿ |
|---|---|---|---|---|
| 1. | ಶ್ರೀ: ಶ್ರೀಮತಿ: ಕು (ಅಭ್ಯರ್ಥಿ ಸಂ.1) | | ಶ್ರೀ: ಶ್ರೀಮತಿ: ಕು | |
| 2. | ಶ್ರೀ: ಶ್ರೀಮತಿ: ಕು (ಅಭ್ಯರ್ಥಿ ಸಂ.2) | | ಶ್ರೀ: ಶ್ರೀಮತಿ: ಕು | |
| 3. | ಶ್ರೀ: ಶ್ರೀಮತಿ: ಕು (ಅಭ್ಯರ್ಥಿ ಸಂ.3) | | ಶ್ರೀ: ಶ್ರೀಮತಿ: ಕು | |
| | | | | |

ಸ್ಥಳ:

ದಿನಾಂಕ: ಸಹಿ

(ಮೊಹರು)

ರಿಟರ್ನಿಂಗ್ ಆಫೀಸರ್

# ಅನುಬಂಧ– II

## ನಮೂನೆ 12

## ಪೋಲಿಂಗ್ ಏಜೆಂಟರ ನೇಮಕವನ್ನು ರದ್ದುಮಾಡುವುದು.

. . . . . . . . . . . . . . . . . . . . . . . . ಚುನಾವಣೆ.

ಮತಗಟ್ಟೆಯ ಪ್ರಿಸೈಡಿಂಗ್ ಆಫೀಸರ್

. . . . . . . . . . . . . . . . ಇವರಿಗೆ

ಮೇಲಿನ ಚುನಾವಣೆಯಲ್ಲಿ ಅಭ್ಯರ್ಥಿಯಾದ . . . . . . . . . . . . . . . . . . . ಇವರ ಚುನಾವಣಾ ಏಜೆಂಟ್ . . . . . . . . . . . . . . ಆದ ನಾನು ನನ್ನ : ಅವರ ಪೋಲಿಂಗ್ ಏಜೆಂಟರ ನೇಮಕವನ್ನು ಈ ಮೂಲಕ ರದ್ದುಮಾಡಿದ್ದೇನೆ.

ಸ್ಥಳ : . . . . . . . . . . . ಅಭ್ಯರ್ಥಿಯ/

ದಿನಾಂಕ : . . . . . . . . . ರದ್ದುಗೊಳಿಸುವ ವ್ಯಕ್ತಿಯ ಸಹಿ

# ಅನುಬಂಧ– III

## ಪ್ರಿಸೈಡಿಂಗ್ ಆಫೀಸರ್‌ರವರಿಂದ ಘೋಷಣೆ

## ಭಾಗ– I

ಮತದಾನವು ಪ್ರಾರಂಭವಾಗುವುದಕ್ಕೆ ಮೊದಲು ಪ್ರಿಸೈಡಿಂಗ್ ಅಧಿಕಾರಿರವರಿಂದ ಘೋಷಣೆ

________________________ನಗರಸಭೆ/ಪುರಸಭೆ/ಪಟ್ಟಣ ಪಂಚಾಯತಿಗೆ ----------------------------- ವಾರ್ಡಿನಿಂದ ಚುನಾವಣೆ

ಮತದಾರರ ಪಟ್ಟಿಯ ಭಾಗದ ಸಂಖ್ಯೆ ಮತ್ತು ಹೆಸರು________________________________________

ಮತಗಟ್ಟೆ ಸಂಖ್ಯೆ ಮತ್ತು ಹೆಸರು________________________________________________________

ಚುನಾವಣಾ ದಿನಾಂಕ:__________________

ನಾನು ಈ ಮೂಲಕ ಘೋಷಿಸುವುದೇನೆಂದರೆ.

1. ಹಾಜರಿರುವ ಪೋಲಿಂಗ್ ಏಜೆಂಟ್ ಮತ್ತಿತರರಿಗೆ :–
   (ಎ) ಅಣಕು ಮತದಾನ ನಡೆಸಿ ಮತಯಂತ್ರ ಚೆನ್ನಾಗಿ ಕೆಲಸ ಮಾಡುತ್ತಿದೆ ಮತ್ತು ಅದರಲ್ಲಿ ಈಗಾಗಲೇ ಯಾವುದೇ ಮತವನ್ನು ದಾಖಲು ಮಾಡಿಲ್ಲ ಎಂಬುದನ್ನು;
   (ಬಿ) ಮತದಾನದ ಸಮಯದಲ್ಲಿ ಬಳಸುವ ಮತದಾರರ ಅಧಿಕೃತ ಪಟ್ಟಿಯ (ಮಾರ್ಕ್ಡ್ ಕಾಪಿ) ಪ್ರತಿಯಲ್ಲಿ ಅಂಚೆ ಮತ ಪತ್ರಗಳು ಮತ್ತು ಚುನಾವಣಾ ಕರ್ತವ್ಯ ಪ್ರಮಾಣ ಪತ್ರಗಳಿಗೆ ಉಪಯೋಗಿಸುವ ಗುರುತುಗಳನ್ನು ಬಿಟ್ಟು ಇತರ ಯಾವುದೇ ಗುರುತಿಲ್ಲವೆಂಬುದನ್ನು;
   (ಸಿ) ಮತದಾನದ ಸಮಯದಲ್ಲಿ ಬಳಸುವ ಮತದಾರರ ರಿಜಿಸ್ಟರಿನಲ್ಲಿ (ಪ್ರಪತ್ರ–20A) ಯಾರೇ ಮತದಾರರ ಸಂಬಂಧದಲ್ಲಿ ಯಾವುದೇ ನಮೂದು ಇಲ್ಲ ಎಂಬುದನ್ನು ಪ್ರತ್ಯಕ್ಷವಾಗಿ ತೋರಿಸಿರುತ್ತೇನೆ.
2. ಮತಯಂತ್ರದ ಕಂಟ್ರೋಲ್ ಯೂನಿಟ್‌ನ ರಿಸಲ್ಟ್ ಸೆಕ್ಷನನ್ನು ಭದ್ರಪಡಿಸಲು ಬಳಸಿದ ಪೇಪರ್ ಸೀಲ್‌ಗಳ ಮೇಲೆ ನನ್ನ ಸ್ವ ಹಸ್ತಾಕ್ಷರದ ಸಹಿ ಹಾಕಿರುತ್ತೇನೆ ಮತ್ತು ಹಾಜರಿದ್ದು ಸಹಿ ಹಾಕಲು ಇಚ್ಛಿಸಿದ ಪೋಲಿಂಗ್ ಏಜೆಂಟರ ಸಹಿಗಳನ್ನು ಅದರ ಮೇಲೆ ಪಡೆದುಕೊಂಡಿರುತ್ತೇನೆ.
3. ವಿಶೇಷ ಟ್ಯಾಗ್ ಮೇಲೆ ಕಂಟ್ರೋಲ್ ಯೂನಿಟ್‌ನ ಸಂಖ್ಯೆಯನ್ನು ಬರೆದು ವಿಶೇಷ ಟ್ಯಾಗ್‌ನ ಹಿಂಬದಿಯಲ್ಲಿ ನನ್ನ ಸಹಿಯನ್ನ ಹಾಕಿರುತ್ತೇನೆ ಹಾಗೂ ಹಾಜರಿದ್ದು ತಮ್ಮ ಸಹಿ ಹಾಕಲು ಇಚ್ಛಿಸಿದ ಅಭ್ಯರ್ಥಿಗಳ/ ಪೋಲಿಂಗ್ ಏಜೆಂಟರುಗಳ ಸಹಿಯನ್ನು ಅದರ ಮೇಲೆ ಪಡೆದುಕೊಂಡಿರುತ್ತೇನೆ.
4. ಸ್ಟ್ರಿಪ್ ಸೀಲ್ ಮೇಲೆ ನನ್ನ ಸಹಿಯನ್ನು ಹಾಕಿರುತ್ತೇನೆ ಮತ್ತು ಹಾಜರಿದ್ದು ತಮ್ಮ ಸಹಿ ಹಾಕಲು ಇಚ್ಛಿಸಿದ ಅಭ್ಯರ್ಥಿಗಳ/ ಪೋಲಿಂಗ್ ಏಜೆಂಟರುಗಳ ಸಹಿಯನ್ನು ಅದರ ಮೇಲೆ ಪಡೆದುಕೊಂಡಿರುತ್ತೇನೆ.
5. ವಿಶೇಷ ಟ್ಯಾಗ್‌ನ (ಈ ಮೊದಲೇ ಮುದ್ರಿಸಿರುವ) ಕ್ರಮಸಂಖ್ಯೆಯನ್ನು ಅಭ್ಯರ್ಥಿಗಳು/ ಪೋಲಿಂಗ್ ಏಜೆಂಟ್‌ರಿಗೆ ಓದಿ ಹೇಳಿ, ಕ್ರಮ ಸಂಖ್ಯೆಯನ್ನು ಬರೆದುಕೊಳ್ಳಲು ಅವರಿಗೆ ಸೂಚಿಸಿದ್ದೇನೆ.

ಸಹಿ: – – – – – –

ಪ್ರಿಸೈಡಿಂಗ್ ಅಧಿಕಾರಿ

ಪೋಲಿಂಗ್ ಏಜೆಂಟರ ಸಹಿ:

1. . . . . . . . . (. . . . . . . . ಅಭ್ಯರ್ಥಿ) 2. . . . . . . . (. . . . . . . . ಅಭ್ಯರ್ಥಿ)

3. . . . . . . . . (. . . . . . . . ಅಭ್ಯರ್ಥಿ) 4. . . . . . . . (. . . . . . . . ಅಭ್ಯರ್ಥಿ)

5. . . . . . . . . (. . . . . . . . ಅಭ್ಯರ್ಥಿ) 6. . . . . . . . (. . . . . . . . ಅಭ್ಯರ್ಥಿ)

7. . . . . . . . . (. . . . . . . . ಅಭ್ಯರ್ಥಿ) 8. . . . . . . . (. . . . . . . . ಅಭ್ಯರ್ಥಿ)

9. . . . . . . . . (. . . . . . . . ಅಭ್ಯರ್ಥಿ)

ಈ ಮುಂದಿನ ಪೋಲಿಂಗ್ ಏಜೆಂಟ್: ಏಜೆಂಟರು ಈ ಘೋಷಣಾ ಪತ್ರದ ಮೇಲೆ ತಮ್ಮ ಸಹಿ ಹಾಕಲು ನಿರಾಕರಿಸಿದ್ದಾರೆ.

1. . . . . . . . (. . . . . . . . ಅಭ್ಯರ್ಥಿ)

2. . . . . . . . (. . . . . . . . ಅಭ್ಯರ್ಥಿ)

3. . . . . . . . (. . . . . . . . ಅಭ್ಯರ್ಥಿ)

4. . . . . . . . (. . . . . . . . ಅಭ್ಯರ್ಥಿ)

ದಿನಾಂಕ: ಸಹಿ : – – – – – –

ಪ್ರಿಸೈಡಿಂಗ್ ಅಧಿಕಾರಿ

## ಭಾಗ– II

## ಹೆಚ್ಚಿನ ಮತಯಂತ್ರವನ್ನೇನಾದರೂ ಉಪಯೋಗಿಸುವ ಸಮಯದಲ್ಲಿ ಪ್ರಿಸೈಡಿಂಗ್ ಆಫೀಸರ್ ಮಾಡಬೇಕಾದ ಘೋಷಣೆ, ಯಾವುದಾದರೂ ಇದ್ದರೆ

__________________________ನಗರಸಭೆ/ಪುರಸಭೆ/ಪಟ್ಟಣ ಪಂಚಾಯತಿಗೆ ---------------- -----------ವಾರ್ಡಿನಿಂದ ಚುನಾವಣೆ

ಮತದಾರರ ಪಟ್ಟಿಯ ಭಾಗದ ಸಂಖ್ಯೆ ಮತ್ತು ಹೆಸರು____________________________________________

ಮತಗಟ್ಟೆ ಸಂಖ್ಯೆ ಮತ್ತು ಹೆಸರು____________________________________________________________

ನಾನು ಈ ಮೂಲಕ ಘೋಷಿಸುವುದೇನೆಂದರೆ.

1. ಹಾಜರಿರುವ ಪೋಲಿಂಗ್ ಏಜೆಂಟ್ ಮತ್ತಿತರರಿಗೆ;
   - (ಎ) ಅಣಕು ಮತದಾನ ನಡೆಸಿ ಮತಯಂತ್ರ ಚೆನ್ನಾಗಿ ಕೆಲಸ ಮಾಡುತ್ತಿದೆ ಮತ್ತು ಅದರಲ್ಲಿ ಈಗಾಗಲೇ ಯಾವುದೇ ಮತವನ್ನು ದಾಖಲು ಮಾಡಿಲ್ಲ ಎಂಬುದನ್ನು;
   - (ಬಿ) ಮತದಾನದ ಸಮಯದಲ್ಲಿ ಬಳಸುವ ಮತದಾರರ ಅಧಿಕೃತ ಪಟ್ಟಿಯ (ಮಾರ್ಕ್ಡ್ ಕಾಪಿ) ಪ್ರತಿಯಲ್ಲಿ ಅಂಚೆ ಮತ ಪತ್ರಗಳು ಮತ್ತು ಚುನಾವಣಾ ಕರ್ತವ್ಯ ಪ್ರಮಾಣ ಪತ್ರಗಳಿಗೆ ಉಪಯೋಗಿಸುವ ಗುರುತುಗಳನ್ನು ಬಿಟ್ಟು ಇತರ ಯಾವುದೇ ಗುರುತಿಲ್ಲವೆಂಬುದನ್ನು;
   - (ಸಿ) ಮತದಾನದ ಸಮಯದಲ್ಲಿ ಬಳಸುವ ಮತದಾರರ ರಿಜಿಸ್ಟರಿನಲ್ಲಿ (ಪ್ರಪತ್ರ–20A) ಯಾರೇ ಮತದಾರರ ಸಂಬಂಧದಲ್ಲಿ ಯಾವುದೇ ನಮೂದು ಇಲ್ಲ ಎಂಬುದನ್ನು ಪ್ರತ್ಯಕ್ಷವಾಗಿ ತೋರಿಸಿರುತ್ತೇನೆ.
2. ಮತಯಂತ್ರದ ಕಂಟ್ರೋಲ್ ಯೂನಿಟ್‌ನ ರಿಸಲ್ಟ್ ಸೆಕ್ಷನನ್ನು ಭದ್ರಪಡಿಸಲು ಬಳಸಿದ ಪೇಪರ್ ಸೀಲ್‌ಗಳ ಮೇಲೆ ನನ್ನ ಸ್ವ ಹಸ್ತಾಕ್ಷರದ ಸಹಿ ಹಾಕಿರುತ್ತೇನೆ ಮತ್ತು ಹಾಜರಿದ್ದು ಸಹಿ ಹಾಕಲು ಇಚ್ಛಿಸಿದ ಪೋಲಿಂಗ್ ಏಜೆಂಟರ ಸಹಿಗಳನ್ನು ಅದರ ಮೇಲೆ ಪಡೆದುಕೊಂಡಿರುತ್ತೇನೆ.
3. ವಿಶೇಷ ಟ್ಯಾಗ್ ಮೇಲೆ ಕಂಟ್ರೋಲ್ ಯೂನಿಟ್‌ನ ಸಂಖ್ಯೆಯನ್ನು ಬರೆದು ವಿಶೇಷ ಟ್ಯಾಗ್‌ನ ಹಿಂಬದಿಯಲ್ಲಿ ನನ್ನ ಸಹಿಯನ್ನ ಹಾಕಿರುತ್ತೇನೆ ಹಾಗೂ ಹಾಜರಿದ್ದು ತಮ್ಮ ಸಹಿ ಹಾಕಲು ಇಚ್ಛಿಸಿದ ಅಭ್ಯರ್ಥಿಯ/ ಪೋಲಿಂಗ್ ಏಜೆಂಟರುಗಳ ಸಹಿಯನ್ನು ಅದರ ಮೇಲೆ ಪಡೆದುಕೊಂಡಿರುತ್ತೇನೆ.
4. ಸ್ಟ್ರಿಪ್ ಸೀಲ್ ಮೇಲೆ ನನ್ನ ಸಹಿಯನ್ನು ಮಾಡಿರುತ್ತೇನೆ ಮತ್ತು ಹಾಜರಿದ್ದು ತಮ್ಮ ಸಹಿ ಹಾಕಲು ಇಚ್ಛಿಸಿದ ಅಭ್ಯರ್ಥಿಯ/ ಪೋಲಿಂಗ್ ಏಜೆಂಟರುಗಳ ಸಹಿಯನ್ನು ಅದರ ಮೇಲೆ ಪಡೆದುಕೊಂಡಿರುತ್ತೇನೆ.
5. ವಿಶೇಷ ಟ್ಯಾಗ್‌ನ (ಈ ಮೊದಲೇ ಮುದ್ರಿಸಿರುವ) ಕ್ರಮಸಂಖ್ಯೆಯನ್ನು ಉಮೇದುವಾರರಿಗೆ/ ಪೋಲಿಂಗ್ ಏಜೆಂಟ್‌ರಿಗೆ ಓದಿ ಹೇಳಿ, ಕ್ರಮ ಸಂಖ್ಯೆಯನ್ನು ಬರೆದುಕೊಳ್ಳಲು ಅವರಿಗೆ ಸೂಚಿಸಿದ್ದೇನೆ.

ಸಹಿ : – – – – – –

ಪ್ರಿಸೈಡಿಂಗ್ ಅಧಿಕಾರಿ

ಪೋಲಿಂಗ್ ಏಜೆಂಟರ ಸಹಿ:

1. . . . . . . (ಅಭ್ಯರ್ಥಿ ಶ್ರೀ . . . . . . . . . . . . . ರವರ ಏಜೆಂಟ್)
2. . . . . . . (ಅಭ್ಯರ್ಥಿ ಶ್ರೀ . . . . . . . . . . . . . ರವರ ಏಜೆಂಟ್)
3. . . . . . . (ಅಭ್ಯರ್ಥಿ ಶ್ರೀ . . . . . . . . . . . . . ರವರ ಏಜೆಂಟ್)
4. . . . . . . (ಅಭ್ಯರ್ಥಿ ಶ್ರೀ . . . . . . . . . . . . . ರವರ ಏಜೆಂಟ್)
5. . . . . . . (ಅಭ್ಯರ್ಥಿ ಶ್ರೀ . . . . . . . . . . . . . ರವರ ಏಜೆಂಟ್)
6. . . . . . . (ಅಭ್ಯರ್ಥಿ ಶ್ರೀ . . . . . . . . . . . . . ರವರ ಏಜೆಂಟ್)
7. . . . . . . (ಅಭ್ಯರ್ಥಿ ಶ್ರೀ . . . . . . . . . . . . . ರವರ ಏಜೆಂಟ್)
8. . . . . . . (ಅಭ್ಯರ್ಥಿ ಶ್ರೀ . . . . . . . . . . . . . ರವರ ಏಜೆಂಟ್)
9. . . . . . . (ಅಭ್ಯರ್ಥಿ ಶ್ರೀ . . . . . . . . . . . . . ರವರ ಏಜೆಂಟ್)

ಈ ಮುಂದಿನ ಪೋಲಿಂಗ್ ಏಜೆಂಟ್ : ಏಜೆಂಟರು ಈ ಘೋಷಣಾ ಪತ್ರದ ಮೇಲೆ ತಮ್ಮ ಸಹಿ ಹಾಕಲು ನಿರಾಕರಿಸಿದ್ದಾರೆ.

1. . . . . . . (ಅಭ್ಯರ್ಥಿ ಶ್ರೀ . . . . . . . . . . . . . ರವರ ಏಜೆಂಟ್)
2. . . . . . . (ಅಭ್ಯರ್ಥಿ ಶ್ರೀ . . . . . . . . . . . . . ರವರ ಏಜೆಂಟ್)
3. . . . . . . (ಅಭ್ಯರ್ಥಿ ಶ್ರೀ . . . . . . . . . . . . . ರವರ ಏಜೆಂಟ್)
4. . . . . . . (ಅಭ್ಯರ್ಥಿ ಶ್ರೀ . . . . . . . . . . . . . ರವರ ಏಜೆಂಟ್)

ದಿನಾಂಕ: ಸಹಿ : – – – – – –

ಪ್ರಿಸೈಡಿಂಗ್ ಅಧಿಕಾರಿ

## ಭಾಗ– III

## ಮತದಾನದ ಕೊನೆಯಲ್ಲಿ ಮಾಡುವ ಘೋಷಣೆ

ನಾನು, ಮತದಾನದ ಕೊನೆಯಲ್ಲಿ ಮತಗಟ್ಟೆಯಲ್ಲಿ ಹಾಜರಿದ್ದ ಮತ್ತು ಈ ಮುಂದೆ ಸಹಿ ಮಾಡಿರುವ ಪೋಲಿಂಗ್ ಏಜೆಂಟರಿಗೆ 1977ರ ಕರ್ನಾಟಕ ಮುನಿಸಿಪಾಲಿಟಿಗಳ (ಚುನಾವಣೆ) ನಿಯಮಗಳ ನಿಯಮ 50 ರನ್ವಯ ಪ್ರಪತ್ರ 17A (EVM) ನ "ಭಾಗ–1 ದಾಖಲಿಸಲಾದ ಮತಗಳ ಲೆಕ್ಕ" ದಲ್ಲಿನ ನಮೂದುಗಳ ಪ್ರತಿಯೊಂದರ ದೃಢೀಕೃತ ನಕಲನ್ನು ಒದಗಿಸಿದ್ದೇನೆ.

ದಿನಾಂಕ : ಸಹಿ : – – – – – –

ಸಮಯ : ಪ್ರಿಸೈಡಿಂಗ್ ಅಧಿಕಾರಿ

ದಾಖಲಾದ ಮತಗಳ ಲೆಕ್ಕದಲ್ಲಿನ (ಪ್ರಪತ್ರ 17A (EVM) ನ ಭಾಗ 1) ನಮೂದುಗಳ ದೃಢೀಕೃತ ನಕಲನ್ನು ಸ್ವೀಕರಿಸಿದ್ದೇನೆ.

ಪೋಲಿಂಗ್ ಏಜೆಂಟರ ಸಹಿ:

1. . . . . . . (ಅಭ್ಯರ್ಥಿ ಶ್ರೀ . . . . . . . . . . . . . ರವರ ಏಜೆಂಟ್)
2. . . . . . . (ಅಭ್ಯರ್ಥಿ ಶ್ರೀ . . . . . . . . . . . . . ರವರ ಏಜೆಂಟ್)
3. . . . . . . (ಅಭ್ಯರ್ಥಿ ಶ್ರೀ . . . . . . . . . . . . . ರವರ ಏಜೆಂಟ್)
4. . . . . . . (ಅಭ್ಯರ್ಥಿ ಶ್ರೀ . . . . . . . . . . . . . ರವರ ಏಜೆಂಟ್)
5. . . . . . . (ಅಭ್ಯರ್ಥಿ ಶ್ರೀ . . . . . . . . . . . . . ರವರ ಏಜೆಂಟ್)
6. . . . . . . (ಅಭ್ಯರ್ಥಿ ಶ್ರೀ . . . . . . . . . . . . . ರವರ ಏಜೆಂಟ್)
7. . . . . . . (ಅಭ್ಯರ್ಥಿ ಶ್ರೀ . . . . . . . . . . . . . ರವರ ಏಜೆಂಟ್)
8. . . . . . . (ಅಭ್ಯರ್ಥಿ ಶ್ರೀ . . . . . . . . . . . . . ರವರ ಏಜೆಂಟ್)
9. . . . . . . (ಅಭ್ಯರ್ಥಿ ಶ್ರೀ . . . . . . . . . . . . . ರವರ ಏಜೆಂಟ್)

ಮತದಾನದ ಕೊನೆಯಲ್ಲಿ ಮತಗಟ್ಟೆಯಲ್ಲಿ ಹಾಜರಿದ್ದ ಈ ಮುಂದಿನ ಪೋಲಿಂಗ್ ಏಜೆಂಟರುಗಳು ಪ್ರಪತ್ರ 17A (EVM) ಭಾಗ 1 ರ ದೃಢೀಕೃತ ಪ್ರತಿಯನ್ನು ಸ್ವೀಕರಿಸಲು ಮತ್ತು ಹಾಗೆ ಸ್ವೀಕರಿಸಿದ ಬಗ್ಗೆ ಸ್ವೀಕೃತಿಯನ್ನು ನೀಡಲು ನಿರಾಕರಿಸಿದ ಕಾರಣ ಸದರಿ ನಮೂನೆಯ ದೃಢೀಕೃತ ಪ್ರತಿಯನ್ನು ಅವರಿಗೆ ಕೊಟ್ಟಿರುವುದಿಲ್ಲ.

1. . . . . . . (ಅಭ್ಯರ್ಥಿ ಶ್ರೀ . . . . . . . . . . . . . ರವರ ಏಜೆಂಟ್)
2. . . . . . . (ಅಭ್ಯರ್ಥಿ ಶ್ರೀ . . . . . . . . . . . . . ರವರ ಏಜೆಂಟ್)
3. . . . . . . (ಅಭ್ಯರ್ಥಿ ಶ್ರೀ . . . . . . . . . . . . . ರವರ ಏಜೆಂಟ್)
4. . . . . . . (ಅಭ್ಯರ್ಥಿ ಶ್ರೀ . . . . . . . . . . . . . ರವರ ಏಜೆಂಟ್)
5. . . . . . . (ಅಭ್ಯರ್ಥಿ ಶ್ರೀ . . . . . . . . . . . . . ರವರ ಏಜೆಂಟ್)
6. . . . . . . (ಅಭ್ಯರ್ಥಿ ಶ್ರೀ . . . . . . . . . . . . . ರವರ ಏಜೆಂಟ್)
7. . . . . . . (ಅಭ್ಯರ್ಥಿ ಶ್ರೀ . . . . . . . . . . . . . ರವರ ಏಜೆಂಟ್)
8. . . . . . . (ಅಭ್ಯರ್ಥಿ ಶ್ರೀ . . . . . . . . . . . . . ರವರ ಏಜೆಂಟ್)
9. . . . . . . (ಅಭ್ಯರ್ಥಿ ಶ್ರೀ . . . . . . . . . . . . . ರವರ ಏಜೆಂಟ್)

ದಿನಾಂಕ : ಸಹಿ : – – – – – –

ಸಮಯ : ಪ್ರಿಸೈಡಿಂಗ್ ಅಧಿಕಾರಿ

## ಭಾಗ– IV

## ಮತಯಂತ್ರವನ್ನು ಸೀಲು ಮಾಡಿದ ತರುವಾಯ ಘೋಷಣೆ

ಮತಯಂತ್ರದ ಕಂಟ್ರೋಲ್ ಯೂನಿಟ್ ಮತ್ತು ಬ್ಯಾಲೆಟ್ ಯೂನಿಟ್‌ಗಳ ಸಾಗಿಸುವ ಪೆಟ್ಟಿಗೆಗಳ ಮೇಲೆ ನಾನು ನನ್ನ ಮೊಹರುಗಳನ್ನು ಹಾಕಿದ್ದೇನೆ ಮತ್ತು ಮತದಾನ ಮುಕ್ತಾಯವಾದಾಗ ಮತಗಟ್ಟೆಯಲ್ಲಿ ಹಾಜರಿದ್ದ ಪೋಲಿಂಗ್ ಏಜೆಂಟರು ಸಹಿ ಹಾಕಲು ಅವಕಾಶ ನೀಡಿದ್ದೇನೆ.

ದಿನಾಂಕ : ಸಹಿ : – – – – – –

ಸಮಯ : ಪ್ರಿಸೈಡಿಂಗ್ ಅಧಿಕಾರಿ

ಈ ಮುಂದಿನ ಪೋಲಿಂಗ್ ಏಜೆಂಟರು ತಮ್ಮ ಸೀಲನ್ನು ಹಾಕಿರುತ್ತಾರೆ.

ಪೋಲಿಂಗ್ ಏಜೆಂಟರ ಸಹಿಗಳು:

1. . . . . . . (ಅಭ್ಯರ್ಥಿ ಶ್ರೀ . . . . . . . . . . . . . ರವರ ಏಜೆಂಟ್)
2. . . . . . . (ಅಭ್ಯರ್ಥಿ ಶ್ರೀ . . . . . . . . . . . . . ರವರ ಏಜೆಂಟ್)
3. . . . . . . (ಅಭ್ಯರ್ಥಿ ಶ್ರೀ . . . . . . . . . . . . . ರವರ ಏಜೆಂಟ್)
4. . . . . . . (ಅಭ್ಯರ್ಥಿ ಶ್ರೀ . . . . . . . . . . . . . ರವರ ಏಜೆಂಟ್)
5. . . . . . . (ಅಭ್ಯರ್ಥಿ ಶ್ರೀ . . . . . . . . . . . . . ರವರ ಏಜೆಂಟ್)
6. . . . . . . (ಅಭ್ಯರ್ಥಿ ಶ್ರೀ . . . . . . . . . . . . . ರವರ ಏಜೆಂಟ್)

ಈ ಮುಂದಿನ ಪೋಲಿಂಗ್ ಏಜೆಂಟರು ಸೀಲು ಹಾಕಲು ನಿರಾಕರಿಸಿರುತ್ತಾರೆ ಅಥವಾ ಅವರು ಸೀಲುಗಳನ್ನು ಹಾಕಲು ಇಚ್ಛಿಸಲಿಲ್ಲ.

1. . . . . . . (ಅಭ್ಯರ್ಥಿ ಶ್ರೀ . . . . . . . . . . . . . ರವರ ಏಜೆಂಟ್)
2. . . . . . . (ಅಭ್ಯರ್ಥಿ ಶ್ರೀ . . . . . . . . . . . . . ರವರ ಏಜೆಂಟ್)
3. . . . . . . (ಅಭ್ಯರ್ಥಿ ಶ್ರೀ . . . . . . . . . . . . . ರವರ ಏಜೆಂಟ್)
4. . . . . . . (ಅಭ್ಯರ್ಥಿ ಶ್ರೀ . . . . . . . . . . . . . ರವರ ಏಜೆಂಟ್)

ದಿನಾಂಕ : ಸಹಿ : – – – – – –

ಸಮಯ : ಪ್ರಿಸೈಡಿಂಗ್ ಅಧಿಕಾರಿ

# ಅನುಬಂಧ– IV

## ನಮೂನೆ–15

## ಚಾಲೆಂಜ್ ಮಾಡಿದ (ಆಕ್ಷೇಪಿಸಿದ) ಮತಗಳ ಪಟ್ಟಿ

--------------- ನಗರಸಭೆ / ಪುರಸಭೆ / ಪಟ್ಟಣ ಪಂಚಾಯತಿಗೆ ------------- ವಾರ್ಡಿನಿಂದ ಚುನಾವಣೆ

| ನಮೂದಿನ ಕ್ರ. ಸಂ. | ಮತದಾರನ ಹೆಸರು | ಕ್ರಮ ಸಂಖ್ಯೆ | | ಚಾಲೆಂಜ ಮಾಡಲ್ಪಟ್ಟ (ಆಕ್ಷೇಪಿತ) ವ್ಯಕ್ತಿಯ ಸಹಿ ಅಥವಾ ಹೆಬ್ಬೆಟ್ಟಿನ ಗುರುತು | ಆಕ್ಷೇಪಿತ ವ್ಯಕ್ತಿಯ ವಿಳಾಸ | ಗುರುತಿಸಿರುವ ವ್ಯಕ್ತಿ ಯಾರಾದರೂ ಇದ್ದಲ್ಲಿ ಅವರ ಹೆಸರು | ಆಕ್ಷೇಪಕಾರ ವ್ಯಕ್ತಿಯ ಹೆಸರು | ಪ್ರಿಸೈಡಿಂಗ್ ಆಫೀಸರ್‌ನ ಆದೇಶ | ಠೇವಣಿಯ ಮರುಪಾವತಿಯನ್ನು ಸ್ವೀಕರಿಸುವ ಆಕ್ಷೇಪಕಾರ ವ್ಯಕ್ತಿಯ ಹೆಸರು ಮತ್ತು ಸಹಿ |
|---|---|---|---|---|---|---|---|---|---|
| | | ಮತದಾರರ ಪಟ್ಟಿಯ ಭಾಗ | ಆ ಭಾಗದಲ್ಲಿ ಮತದಾರರ ಹೆಸರು | | | | | | |
| 1 | 2 | 3 | 4 | 5 | 6 | 7 | 8 | 9 | 10 |
| | | | | | | | | | |

ಪ್ರಿಸೈಡಿಂಗ್ ಆಫೀಸರ್ ಸಹಿ

ದಿನಾಂಕ :

## ಅನುಬಂಧ– V

## ಮತದಾರನಿಂದ ಘೋಷಣೆ– ನಮೂನೆ.

. . . . . ವರ್ಷದ ಒಂದನೇ ಜನವರಿಯಂದು ನನ್ನ ವಯಸ್ಸು 18ಕ್ಕಿಂತ ಹೆಚ್ಚಾಗಿತ್ತೆಂದು ಈ ಮೂಲಕ ನಾನು ಪ್ರಮಾಣ ಪೂರ್ವಕವಾಗಿ ಘೋಷಿಸುತ್ತೇನೆ ಮತ್ತು ದೃಢೀಕರಿಸುತ್ತೇನೆ.

ಮತದಾರರ ಪಟ್ಟಿಯಲ್ಲಿ ಯಾವುದೇ ಹೆಸರನ್ನು ಸೇರಿಸುವುದು ಅಥವಾ ಸಿದ್ಧಪಡಿಸುವುದು, ಮತದಾರರ ಪಟ್ಟಿಯ ಪರಿಷ್ಕರಣೆಯ ಅಥವಾ ತಿದ್ದುಪಡಿಯ ಸಂಬಂಧದಲ್ಲಿ ಮಾಡುವ ಯಾವುದೇ ತಪ್ಪು ಘೋಷಣೆಗೆ 1950ರ ಜನತಾ ಪ್ರಾತಿನಿಧ್ಯ ಅಧಿನಿಯಮದ ಪ್ರಕರಣ 31ರ ದಂಡನೆಯ ಉಪ ಬಂಧಗಳ ಬಗ್ಗೆ ನನಗೆ ತಿಳಿದಿದೆ.

ಮತದಾರನ ಸಹಿ; ಹೆಬ್ಬೆಟ್ಟಿನ ಗುರುತು . . . . . . . . . . . . . .

ತಂದೆ; ತಾಯಿ; ಗಂಡನ ಹೆಸರು . . . . . . . . . . . . . . . .

ಮತದಾರರ ಪಟ್ಟಿಯ ಭಾಗದ ಸಂಖ್ಯೆ . . . . . . . . . . . . . .

ಮತದಾರನ ಕ್ರಮ ಸಂಖ್ಯೆ . . . . . . . . . . . . . . . . . . .

ದಿನಾಂಕ :

ನನ್ನ ಮುಂದೆ, ಮೇಲ್ಕಂಡ ಹೆಸರಿನ ಮತದಾರನು ಸಹಿ ಮಾಡಿದ್ದಾನೆ ಮತ್ತು ಮೇಲಿನ ಘೋಷಣೆಯನ್ನು ಮಾಡಿದ್ದಾನೆ ಎಂದು ಪ್ರಮಾಣೀಕರಿಸಿದ್ದೇನೆ.

ಪ್ರಿಸೈಡಿಂಗ್ ಆಫೀಸರ್ ಸಹಿ

ಮತಗಟ್ಟೆ ಸಂಖ್ಯೆ ಮತ್ತು ಹೆಸರು

ದಿನಾಂಕ :

## ಅನುಬಂಧ– VI

## ಅಂಧ ಅಥವಾ ದುರ್ಬಲ ಮತದಾರನ ಸಂಗಡಿಗನ ಘೋಷಣೆ

______________________________ ಮತದಾನದ ಕೇಂದ್ರದ ಕ್ರಮ ಸಂಖ್ಯೆ ಮತ್ತು ಹೆಸರು*______________________________ ಎಂಬಲ್ಲಿಯ ನಿವಾಸಿಯಾದ _______________________ ಎಂಬುವರ ಮಗ/ ಮಗಳಾದ ______________ ವರ್ಷ ವಯಸ್ಸಿನ ______________ ಎಂಬ ನಾನು ಈ ಮೂಲಕ ಘೋಷಿಸುವುದೇನೆಂದರೆ:–

(ಎ) ನಾನು ______________ ನೇ ದಿನಾಂಕವಾದ ಈ ದಿನ ಬೇರೆ ಯಾವುದೇ ಮತದಾನ ಕೇಂದ್ರದಲ್ಲಿ ಬೇರೆ ಯಾವೊಬ್ಬ ಮತದಾರನ ಸಂಗಡಿಗನಾಗಿಯೂ ಕೆಲಸ ನಿರ್ವಹಿಸಿಲ್ಲ; ಮತ್ತು

(ಬಿ) ** __________________________ ಅವರ ಪರವಾಗಿ ನಾನು ದಾಖಲು ಮಾಡಿದ ಮತದ ಬಗ್ಗೆ ರಹಸ್ಯ ಕಾಪಾಡುತ್ತೇನೆ.

ದಿನಾಂಕ : ಸಂಗಡಿಗನ ಸಹಿ

---

* ಪೂರ್ಣ ವಿಳಾಸ ಕೊಡಬೇಕು

** ಮತದಾರನ ಹೆಸರು, ಭಾಗ ಸಂಖ್ಯೆ ಮತ್ತು ಕ್ರಮ ಸಂಖ್ಯೆ

## ಅನುಬಂಧ– VII

## ಪ್ರಪತ್ರ – 17A (EVM)

## ಭಾಗ–I ದಾಖಲಿಸಿದ ಮತಗಳ ಲೆಕ್ಕ

-----------------ನಗರಸಭೆ / ಪುರಸಭೆ / ಪಟ್ಟಣ ಪಂಚಾಯತಿಗೆ ---------- ವಾರ್ಡಿನಿಂದ ಚುನಾವಣೆ

ಮತಗಟ್ಟೆ ಸಂಖ್ಯೆ ಮತ್ತು ಹೆಸರು ________________________________

ಮತಗಟ್ಟೆಯಲ್ಲಿ ಬಳಸಲಾದ ಮತಯಂತ್ರದ ಗುರುತಿನ ಸಂಖ್ಯೆ ___________________________

ಕಂಟ್ರೋಲ್ ಯೂನಿಟ್‌ನ ಗುರುತಿನ ಸಂಖ್ಯೆ _________________________

1. ಮತಗಟ್ಟೆಗೆ ವಹಿಸಿದ ಮತದಾರರ ಒಟ್ಟು ಸಂಖ್ಯೆ
2. ಮತದಾರರ ರಿಜಿಸ್ಟರಿನಲ್ಲಿ (ಪ್ರಪತ್ರ 20A)
   ನಮೂದಿಸಲಾದಂತೆ ಮತದಾರರ ಒಟ್ಟು ಸಂಖ್ಯೆ
3. ನಿಯಮ 64 O ರಂತೆ ಮತಗಳನ್ನು ದಾಖಲಿಸದಿರಲು ತೀರ್ಮಾನಿಸಿದ ಮತದಾರರ ಸಂಖ್ಯೆ
4. ಮತ ಚಲಾಯಿಸಲು ಅನುಮತಿ ನೀಡದೇ ಇರುವ ಮತದಾರರ ಸಂಖ್ಯೆ
5. ಮತಯಂತ್ರದ ಪ್ರಕಾರ ದಾಖಲಾದ ಮತಗಳ ಒಟ್ಟು ಸಂಖ್ಯೆ
6. 5ನೇ ಅಂಶದ ಎದುರು ಕಾಣಿಸಿರುವ ಒಟ್ಟು ಮತಗಳ ಸಂಖ್ಯೆಯು 2ನೇ ಅಂಶದ ಎದುರು ಕಾಣಿಸಿರುವ ಮತದಾರರ ಒಟ್ಟು ಸಂಖ್ಯೆಯಲ್ಲಿ 3ನೇ ಅಂಶದ ಎದುರು ಕಾಣಿಸಿರುವಂಥ, ಮತಗಳನ್ನು ದಾಖಲಿಸದಿರಲು ತೀರ್ಮಾನಿಸಿದ ಮತದಾರರ ಸಂಖ್ಯೆಯನ್ನು ಕಳೆದ ನಂತರ ಬಂದ ಸಂಖ್ಯೆಯಲ್ಲಿ 4ನೇ ಅಂಶದ ಎದುರು ಕಾಣಿಸಿರುವ ಮತದಾರರ ಸಂಖ್ಯೆಯನ್ನು ಕಳೆದರೆ (2–3–4) ಬರುವ ಸಂಖ್ಯೆಗೆ ಹೋಲಿಕೆ ಯಾಗುತ್ತದೆಯೇ ಅಥವಾ ಏನಾದರೂ ವ್ಯತ್ಯಾಸಗಳು ಗಮನಕ್ಕೆ ಬಂದಿವೆಯೇ ?
7. ನಿಯಮ 64P ರಂತೆ ಟೆಂಡರ್ಡ್ ಮತಪತ್ರಗಳನ್ನು ನೀಡಲಾದ ಮತದಾರರ ಸಂಖ್ಯೆ
8. ಟೆಂಡರ್ಡ್ ಮತಪತ್ರಗಳ ಸಂಖ್ಯೆ: __________

| | ಕ್ರ. ಸಂ. | | |
|---|---|---|---|
| | ಯಿಂದ | ವರೆಗೆ | ಒಟ್ಟು |
| (ಎ) ಬಳಕೆಗೆ ಸ್ವೀಕರಿಸಲಾದವುಗಳು | | | |
| (ಬಿ) ಮತದಾರರಿಗೆ ನೀಡಲಾದವುಗಳು | | | |
| (ಸಿ) ಬಳಸದೆ ಹಾಗೇ ಹಿಂದಿರುಗಿಸಿದವು | | | |

9. ಪೇಪರ್ ಸೀಲ್‌ಗಳ ಲೆಕ್ಕ
   ಕ್ರಮ ಸಂಖ್ಯೆ.

1) ಒದಗಿಸಲಾಗಿರುವ ಪೇಪರ್ ಸೀಲ್‌ಗಳು

ಕ್ರ.ಸಂ. ______________ ಯಿಂದ

ಕ್ರ.ಸಂ ______________ ವರೆಗೆ

2) ಒದಗಿಸಲಾದ ಪೇಪರ್ ಸೀಲ್‌ಗಳ ಒಟ್ಟು ಸಂಖ್ಯೆ ________________

3) ಬಳಸಲಾದ ಪೇಪರ್ ಸೀಲ್‌ಗಳ ಸಂಖ್ಯೆ ______

4) ರಿಟರ್ನಿಂಗ್ ಆಫೀಸರ್‌ರವರಿಗೆ ಹಿಂದಿರುಗಿಸಲಾದ

ಬಳಸದ ಪೇಪರ್ ಸೀಲ್‌ಗಳ ಸಂಖ್ಯೆ

(3ನೇ ಅಂಶದಿಂದ 2ನೇ ಅಂಶವನ್ನು ಕಳೆಯಿರಿ)

5) ಹಾನಿಗೊಂಡ ಪೇಪರ್ ಸೀಲ್‌ಗಳ (ಯಾವುದಾದರೂ ಇದ್ದರೆ) ಸಂಖ್ಯೆ

ಪೋಲಿಂಗ್ ಏಜೆಂಟರ ಸಹಿ

1.

2.

3.

4.

ದಿನಾಂಕ: ಪ್ರಿಸೈಡಿಂಗ್ ಅಧಿಕಾರಿ ಸಹಿ

ಸ್ಥಳ : ಮತಗಟ್ಟೆ ಸಂಖ್ಯೆ __________

**ಭಾಗ– II ಎಣಿಕೆಯ ಫಲಿತಾಂಶ**

| ಕ್ರ. ಸಂ. | ಅಭ್ಯರ್ಥಿಯ ಹೆಸರು | ದಾಖಲಿಸಲಾದ ಮತಗಳ ಸಂಖ್ಯೆ |
|---|---|---|
| 1. | | |
| 2. | | |
| 3. | | |
| 4. | | |
| 5. | | |
| 6. | | |
| 7. | | |
| 8. | | |
| 9. NOTA | | |
| ಒಟ್ಟು | | |

ಮೇಲೆ ಕಾಣಿಸಿದ ಮತಗಳ ಒಟ್ಟು ಸಂಖ್ಯೆಯು ಭಾಗ 1 ರ 5ನೇ ಅಂಶದ ಎದುರು ಕಾಣಿಸಿದ ಮತಗಳ ಒಟ್ಟು ಸಂಖ್ಯೆಯೊಂದಿಗೆ ಹೋಲಿಕೆಯಾಗುತ್ತದೆಯೇ ಅಥವಾ ಎರಡೂ ಸಂಖ್ಯೆಗಳ ನಡುವೆ ಯಾವುದೇ ವ್ಯತ್ಯಾಸ ಕಂಡು ಬಂದಿದೆಯೇ ?

ಸ್ಥಳ :

ದಿನಾಂಕ :

ಎಣಿಕೆ ಸೂಪರ್‌ವೈಸರ್‌ರ ಸಹಿ

ಅಭ್ಯರ್ಥಿಯ: ಚುನಾವಣಾ ಏಜೆಂಟನ: ಎಣಿಕೆ

| ಏಜೆಂಟನ ಹೆಸರು | ಪೂರ್ಣ ಸಹಿ |
|---|---|
| 1. | |
| 2. | |
| 3. | |
| 4. | |
| 5. | |
| 6. | |
| 7. | |
| 8. | |

ಸ್ಥಳ : ______________

ದಿನಾಂಕ: ____________ ರಿಟರ್ನಿಂಗ್ ಆಫೀಸರರ ಸಹಿ

## ಅನುಬಂಧ– VIII

# ಅಣಕು ಮತದಾನ ಪ್ರಮಾಣ ಪತ್ರ

-------------------ನಗರಸಭೆ / ಪುರಸಭೆ / ಪಟ್ಟಣ ಪಂಚಾಯತಿಗೆ-------------- ವಾರ್ಡಿನ (ವಾರ್ಡಿನ ಸಂಖ್ಯೆ ಮತ್ತು ಹೆಸರು) ________________ ಸಂಖ್ಯೆಯ ಮತಗಟ್ಟೆ ಪ್ರೀಸೈಡಿಂಗ್ ಅಧಿಕಾರಿ ಆಗಿರುವ ____________________________ ಎಂಬ ನಾನು ರಾಜ್ಯ ಚುನಾವಣಾ ಆಯೋಗವು ನೀಡಿದ ಸೂಚನೆಗಳನ್ನು ಅನುಸರಿಸಿ ಮತದಾನ ದಿನದಂದು ಅಂದರೆ, __________ ದಿನವಾದ ಈ ದಿನ ಬೆಳಿಗ್ಗೆ __________ ಗಂಟೆಯಲ್ಲಿ ಅಣಕು ಮತದಾನವನ್ನು ನಡೆಸಿದ್ದೇನೆಂದು ಪ್ರಮಾಣೀಕರಿಸುತ್ತೇನೆ.

ಅಣಕು ಮತದಾನದಲ್ಲಿ ಒಟ್ಟು __________ ಮತಗಳನ್ನು ಚಲಾಯಿಸಿದ್ದು, ಅಣಕು ಮತದಾನದ ನಂತರ ನಾನು ಬಹಳ ಜಾಗರೂಕತೆಯಿಂದ ಮತಯಂತ್ರದಲ್ಲಿನ ಸ್ಮೃತಿಕೋಶದಿಂದ ಮಾಹಿತಿಯನ್ನು ಅಳಿಸಿ ಹಾಕಿದ್ದೇನೆ ಮತ್ತು ಮತಯಂತ್ರದಲ್ಲಿನ ಸ್ಮೃತಿಕೋಶದಿಂದ ಮಾಹಿತಿಯನ್ನು ಅಳಿಸಿ ಹಾಕಿದ ನಂತರ ಅದರಲ್ಲಿ ಚಲಾಯಿಸಿದ ಒಟ್ಟು ಮತಗಳನ್ನು '0' ಎಂದು ತೋರಿಸುತ್ತಿತ್ತು.

(ಎ) ಅಂಥ ಏಜೆಂಟರ ಹೆಸರುಗಳ ಎದುರು ಯಾವ ಉಮೇದುವಾರರ ಹೆಸರುಗಳನ್ನು ನಮೂದಿಸಲಾಗಿದೆಯೋ ಆ ಉಮೇದುವಾರರನ್ನು ಪ್ರತಿನಿಧಿಸುವ ಈ ಕೆಳಕಂಡ ಪೋಲಿಂಗ್ ಏಜೆಂಟರು ಅಣಕು ಮತದಾನದ ಸಮಯದಲ್ಲಿ ಹಾಜರಿದ್ದು, ನಾನು ಅವರ ಸಹಿಗಳನ್ನು ಪಡೆದುಕೊಂಡಿದ್ದೇನೆ.

(ಬಿ) ಚುನಾವಣೆಯಲ್ಲಿ ಸ್ಪರ್ಧಿಸಿರುವ ____________ ಉಮೇದುವಾರನ ಏಜೆಂಟನು ಅಣಕು ಮತದಾನದ ಸಮಯದಲ್ಲಿ ಹಾಜರಿದ್ದನು. ಇನ್ನು ಹತ್ತು ನಿಮಿಷಗಳವರೆಗೆ ಕಾದು ನೋಡಿದ ನಂತರ ನಾನು ______ ಗಂಟೆಗೆ ಇತರ ಪೋಲಿಂಗ್ ಸಿಬ್ಬಂದಿಯೊಂದಿಗೆ ಅಣಕು ಮತದಾನವನ್ನು ನಡೆಸಿದ್ದೇನೆ. ಏಜೆಂಟನು ಪ್ರತಿನಿಧಿಸಿದಂಥ ಉಮೇದುವಾರನ ಹೆಸರು ಸೇರಿದಂತೆ ಅಣಕು ಮತದಾನ ಸಮಯದಲ್ಲಿ ಹಾಜರಿದ್ದ ಏಜೆಂಟನ ಹೆಸರನ್ನು ನಾನು ನಮೂದಿಸಿದ್ದೇನೆ.

(ಯಾರೇ ಪೋಲಿಂಗ್ ಏಜೆಂಟನು ಹಾಜರಿಲ್ಲದಿದ್ದ ಸಂದರ್ಭದಲ್ಲಿ "ಅಣಕು ಮತದಾನದ ಸಮಯದಲ್ಲಿ ಯಾವೊಬ್ಬ ಪೋಲಿಂಗ್ ಏಜೆಂಟನು ಹಾಜರಿರಲಿಲ್ಲ" ಎಂದು ನಮೂದಿಸತಕ್ಕದ್ದು)

| ಏಜೆಂಟನ ಹೆಸರು | ಉಮೇದುವಾರನ ಹೆಸರು | ಏಜೆಂಟನ ಸಹಿ |
|---|---|---|

ದಿನಾಂಕ:

ಸಮಯ: ಪ್ರಿಸೈಡಿಂಗ್ ಅಧಿಕಾರಿ ಸಹಿ ಮತ್ತು ಹೆಸರು

**********